ಟೆಲಿಫೋನ್ ನಂ 792

ಬಿಡಿ ಪ್ರತಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಕೆ ಮೂರು ಕಾಸು

ಸಂಪುಟ : ೦೪] SADHVI THURSDAY 2-9-1954 ಮೈಸೂರು ಗುರುವಾರ ೨-೯-೧೯೫೪ [ಸಂಚಿಕೆ ೨೫

ಪಶ್ಚಿಮದ ೮ ರಾಷ್ಟ್ರಗಳ ಸಭೆ ಕರೆಯಲು ಬ್ರಿಟನ್ನಿನ ನಿರ್ಧಾರ

೮ ನೇ ತಾ॥ ಬ್ಯಾಂಕು ನೌಕರರ ಮುಷ್ಕರದ ಬಗ್ಗೆ ನಿರ್ಧಾರ

ಭಾರತ ಸರ್ಕಾರದವರು ಶಾಸ್ತ್ರೀ ಪಾಸ ಸ್ಥಪಿತೀ ನ್ಯಾಯಮಂಡಲದ ತೀರ್ಪನ್ನು ಬದಲಾಯಿಸ ಪುದಕ್ಕೆ ಪ್ರತಿಭಟಿಸಲು ನೌಕರರು ಮುಷ್ಕರ ಹೂಡುವ ಸಂಬಂಧವಾಗಿ ಭಾರತದ ಬ್ಯಾಂಕು ಕೇಂದ್ರ ಸಮಿತಿಯು ಇದೇ ೮ ನೇ ತಾ॥ ನಾಗಪುರದಲ್ಲಿ ಸೇರಿ ಮುಷ್ಕರದ ದಿನವನ್ನು ಗೊತ್ತುಪಡಿಸಲಿರುವುದೆಂದು ವರದಿಯಾಗಿದೆ

ಸ್ಕೌಟುಗಳಿಂದ ರಸ್ತೆ ನಿರ್ಮಾಣ

ಮೈಸೂರು ನಗರ ಜಿಲ್ಲೆ ವಿಶ್ವವಿದ್ಯಾಲಯ ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಸ್ಕೌಟುಗಳ ಪೈಕಿ ಪ್ರತಿ ಜಿಲ್ಲೆಯ ೨೦೦ ಜನರು ಹಿರೀಸಾವೆ ಮತ್ತು ಶ್ರವಣಬೆಳಗೊಳಗಳ ನಡುವೆ ೧೦ ಮೈಲಿ ರಸ್ತೆ ನಿರ್ಮಾಣ ಕಾರ್ಯವನ್ನು ಈ ತಿಂಗಳು ೫ ನೇ ತಾ॥ ನಿಂದ ಕೈಗೊಳ್ಳುವರು ಈ ರಸ್ತೆಯ ಅಂದಾಜು ವೆಚ್ಚ ೨೪೦೦೦ ರೂ ಆಗುವುದೆಂದು ಗೊತ್ತಾಗಿದೆ ಈ ಸಂಬಂಧದಲ್ಲಿ ಮೇಲ್ಕಂಡ ಜಿಲ್ಲಾ ಸ್ಕೌಟು ಕಾರ್ಯದರ್ಶಿಗಳ ಸಭೆಯು ಕಳೆದ ೨೨ ನೇ ತಾ॥ ರಾಜಧಾನಿಯ ಶ್ರೀ ಜಯಚಾಮರಾಜೇಂದ್ರ ಸ್ಕೌಟು ಕೇಂದ್ರದಲ್ಲಿ ಶ್ರೀ ಜೆ ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರತಿ ಸ್ಕೌಟು ಗುಂಪಿನವರೂ ಎರಡು ಮೈಲಿ ರಸ್ತೆಯನ್ನು ನಿರ್ಮಿಸಬೇಕೆಂದು ತೀರ್ಮಾನಿಸಲಾಯಿತು

ಸಂಗೀತ ಮತ್ತು ಹರಿಕಥೆ

ರಾಜಧಾನಿಯ ಅಶೋಕಾ ರಸ್ತೆಯ ಪಶ್ಚಿಮದ ೫ನೇ ಕ್ರಾಸ್ ರಸ್ತೆಯಲ್ಲಿರುವ ಶ್ರೀ ವಿದ್ಯಾಗಣಪತಿ ಸೇವಾ ಸಂಘದವರು ನೆನ್ನೆ ಗಣಪತಿ ಪೂಜೆ ನಡೆಸಿ, ಸಂಜೆ ೭ ಗಂಟೆಗೆ ಶ್ರೀ ಎಂ ಆರ್ ಅಂಜನಪ್ಪನವರ ಸಂಗೀತವನ್ನು ಏರ್ಪಾಡು ಮಾಡಿದ್ದರು ಈ ಸಂಜೆ ೭ ಗಂಟೆಗೆ ವಿ॥ ಬಿ ಎಂ ಶಿವಪ್ಪನವರ ಸಂಗೀತವೂ ರಾತ್ರಿ ೯-೩೦ ಕ್ಕೆ ಹರಿಕಥೆಯೂ ಏರ್ಪಾಡಾಗಿವೆ ನಾಳೆ ಸಂಜೆ ೭ ಕ್ಕೆ ಶ್ರೀ ವಿ॥ ಎಸ್ ಎಂ ಮರಿಯಪ್ಪನವರ ಗಾಯನ ಮತ್ತು ರಾತ್ರಿ ವಿ॥ಗೆ ಹರಿಕಥೆ ಇವೆ ೪ ನೇ ತಾರೀಕು ವಿ॥ ಆರ್ ಕೆ ಶ್ರೀನಿವಾಸರವರ ವೀಣಾ ವಾದನವೂ, ೫ ನೇ ತಾರೀಕು ವಿ ಬಿ ಶ್ರೀನಿವಾಸಯ್ಯನವರಿಂದಲೂ, ೬ ನೇ ತಾರೀಕು ಶ್ರೀ ಬಿ ಎಂ ಮುನಿವೆಂಕಟಪ್ಪ ಮತ್ತು ವಿ॥ ತಿಟ್ಟಸ್ವಾಮಿಯವರಿಂದಲೂ, ೭ ನೇ ತಾರೀಕು ವಿ॥ ಬಿ ಡಿ ಲಕ್ಷ್ಮಣರವರಿಂದಲೂ ಮತ್ತು ೮ ನೇ ತಾರೀಕು ವಿ॥ ಆರ್ ಜಯಲಕ್ಷ್ಮಮ್ಮನವರಿಂದಲೂ ಸಂಗೀತಗಳು ಏರ್ಪಾಡಾಗಿವೆ ೭ ನೇ ತಾರೀಕು ರಾತ್ರಿ ಮಧು ಗಾನಕಲಾ ಮಂಡಲಿಯವರಿಂದ ನಾಟ್ಯ ಗೋಷ್ಠಿಯೂ ಇದೆ

ಗಣಪತಿ ಮಂಗಳಾರತಿ

ರಾಜಧಾನಿಯ ಹೊಯಿಸಳ ಕರ್ನಾಟಕ ಭವನದ ಹಾಸ್ಟೆಲಿನಲ್ಲಿ ಗಣಪತಿ ಮಂಗಳಾರತಿ ಅಂಗವಾಗಿ ಈ ರಾತ್ರಿ ೯ ಗಂಟೆಗೆ ವಿ॥ ವಿ ನರಸಿಂಹಮೂರ್ತಿರವರ ಸಂಗೀತವನ್ನು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಲಾಗಿದೆ

ಆಗ್ನೇಯ ಏಷ್ಯಾ ರಕ್ಷಣಾ ಒಪ್ಪಂದ ಷರತ್ತುಗಳು ಬೆಳಕಿಗೆ

ಫಿಲಿಪ್ಪೈನ್ ದ್ವೀಪಗಳ ರಾಜಧಾನಿ ಮನಿಲಾ ನಗರದಲ್ಲಿ ಇದೇ ವಾರದವರಿಂದ ಸಭೆ ಸೇರಲಿರುವ ಸಮ್ಮೇಳನ ಬುಲೆಟಿನ್ ಪತ್ರಿಕೆಯು ಆಗ್ನೇಯ ಏಷ್ಯಾ ರಕ್ಷಣಾ ಒಪ್ಪಂದದ ಷರತ್ತುಗಳನ್ನು ಪ್ರಕಟಿಸಿ ಇದುವರೆಗೂ ರಹಸ್ಯವಾಗಿದ್ದುದನ್ನು ಬಯಲಿಗೆ ತಂದಿರುತ್ತದೆ ಫಿಲಿಪ್ಪೈನ್ ಅಧ್ಯಕ್ಷರಾದ ರೇಮನ್ ಮ್ಯಾಗ್ಸೆಸೆ ಪತ್ರ ರಹಸ್ಯ ಬಯಲಿಗೆ ಬಂದ ನಂತರ ಆಜ್ಞೆ ಮಾಡಿದ ತರುವಾಯ ಆದರಿಂದ ಮನಿಲಾ ನಗರದಲ್ಲಿ ಆಗ್ನೇಯ ಏಷ್ಯಾ ರಕ್ಷಣಾ ಕೇಂದ್ರದ ಸ್ಥಾಪನೆಯಾಗುವ ಸಂಭವವೆಂದೂ, ಸಿಂಗಪುರ ಅಥವಾ ಆಸ್ಟ್ರೇಲಿಯದ ರಾಜಧಾನಿ ಕ್ಯಾನ್‌ಬೆರಾ ನಗರದಲ್ಲಿ ಒಂದು ಕೇಂದ್ರ ಸ್ಥಾಪನೆ ಆಗಬಹುದೆಂದೂ ಹೇಳಲಾಗಿದೆ ಈ ರಕ್ಷಣಾ ವ್ಯವಸ್ಥೆಯಲ್ಲಿ ಕಾಂಬೋಡಿಯಾ ಲಾವೋಸ್ ಸ್ವತಂತ್ರ ವಿಯೆಟ್ನಾಂ ಥಾಯ್ಲೆಂಡ್ ಪಾಕಿಸ್ತಾನ ಫಿಲಿಪ್ಪೈನುಗಳಲ್ಲದೆ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಅವೆ ರಿಕಗಳೂ ಇರುವುವು ಯಾವುದಾದರೂ ಒಂದು ರಕ್ಷಣಾ ಒಪ್ಪಂದದ ರಾಷ್ಟ್ರದ ಮೇಲೆ ಕಮ್ಯೂನಿಸ್ಟರು ಆಕ್ರಮಣ ನಡೆಸಿದರೆ ಪ್ರತೀಕಾರ ಮಾಡಲು ಇತರ ಎಲ್ಲ ರಾಷ್ಟ್ರಗಳೂ ಸೇರಬೇಕೆಂದು ಷರತ್ತು ಹಾಕಲಾಗಿತ್ತು ಈ ಬಗ್ಗೆ ಸಮ್ಮೇಳನ ನಡೆದು ಒಪ್ಪಂದವಾಗಬೇಕಾಗಿತ್ತು

ಹೈದರಾಬಾದಿನಲ್ಲಿ ೩ ಉರ್ದು ಪತ್ರಿಕೋದ್ಯಮಿಗಳ ಬಂಧನ

ಗುಲ್ಬರ್ಗದ ಗಣಪತಿ ದೇವಾಲಯದಲ್ಲಿ ಪಾಕಿಸ್ತಾನ ಧ್ವಜವನ್ನು ಹಾರಿಸಿದ ಸಂಬಂಧದಲ್ಲಿ ನಡೆದ ಘಟನೆ ಬಗ್ಗೆ ನಿರಾಧಾರವಾದ ಎಚ್ಚರಿಕೆಯನ್ನು ಪ್ರಕಟಿಸಿ ಮುಖ್ಯಪಟ್ಟ ಲೇಖನಗಳನ್ನು ಬರೆದ ಸಂಬಂಧದಲ್ಲಿ ಅಲ್ಲಿನ ರಹಮತ್ ಆಲಿ ಇಸ್ಮಾಯಿಲ್ ಜೊತೆ ಅಬೀದ್ ಜೈನುಲ್ ಅಬಿದೀನ್ ವ್ಯಂಗ್ಯ ಚಿತ್ರಗಾರ ಮಹಾಜ ಹೈದರ್, ಇರೂಂಬೇಗ್ ರೌನಕಾ ಪತ್ರ ಮತ್ತು ತಹಜಾ ಮುಗ್ರೈಬಿ ಎಂಬ ಉರ್ದು ಪತ್ರಿಕೋದ್ಯಮಿಗಳನ್ನು ಬಂಧಿಸಲಾಗಿದೆ

ಹೈದರಾಬಾದು ಕರ್ನಾಟಕ ವಿದ್ಯಾರ್ಥಿ ಸಂಘ

ರಾಜಧಾನಿಯಲ್ಲಿ ಕಳೆದ ಜುಲೈ ತಿಂಗಳಿನಲ್ಲಿ ಸ್ಥಾಪಿಸಲ್ಪಟ್ಟ ಹೈದರಾಬಾದು ಕರ್ನಾಟಕ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಕಳೆದ ೩೧ ನೇ ತಾ॥ ಮಹಾರಾಣಿ ಕಾಲೇಜಿನಲ್ಲಿ ಏರ್ಪಡಿಸಲಾಗಿತ್ತು ಮಹಾರಾಜಾ ಕಾಲೇಜಿನ ಅರ್ಥ ಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ಜಿ ರಾಮಕೃಷ್ಣ ರೆಡ್ಡಿಯವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ತ ರಾ ಸುಬ್ಬರಾಯರು ಭಾಷಣ ಮಾಡಿ ಕನ್ನಡ ಸಾಹಿತ್ಯವನ್ನು ಬೆಳೆಸಬೇಕೆಂದು ಸೂಚಿಸಿದರು

○ ಪಶ್ಚಿಮ ಜರ್ಮನಿಗೆ ಪೂರ್ಣ ಸ್ವಾತಂತ್ರ್ಯ ದೊರೆಯುವಂತೆ ಒತ್ತಾಯಪಡಿಸಬೇಕೆಂದು ಅಲ್ಲಿನ ... ಯೂರೋಪಿನ ರಕ್ಷಣಾ ಒಪ್ಪಂದವನ್ನು ... [illegible]

ಪಶ್ಚಿಮ ಜರ್ಮನಿ ಬಗ್ಗೆ ೮ ರಾಷ್ಟ್ರಗಳ ಸಭೆ

ಯೂರೋಪಿನ ರಕ್ಷಣಾ ಒಪ್ಪಂದವನ್ನು ಫ್ರೆಂಚ್ ರಾಷ್ಟ್ರೀಯ ಸಭೆಯು ತಿರಸ್ಕರಿಸಿದ ಪರಿಣಾಮವಾಗಿ ಪಶ್ಚಿಮ ಜರ್ಮನಿಯ ಸ್ವಾತಂತ್ರ್ಯ ಪಡೆದು ಪೂರ್ಣ ಅಧಿಕಾರ ಹೊಂದುವ ಪ್ರಶ್ನೆಯ ಬಗ್ಗೆ ಚರ್ಚಿಸಲು ಅಮೆರಿಕಾ ಬ್ರಿಟನ್ ಫ್ರಾನ್ಸ್ ಬೆಲ್ಜಿಯಂ ಹಾಲೆಂಡ, ಇಟಲಿ, ಪಶ್ಚಿಮ ಜರ್ಮನಿ ಮತ್ತು ಲಕ್ಸೆಂಬರ್ಗ್‌ಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನವನ್ನು ಕರೆಯಲು ಬ್ರಿಟನ್ನು ನಿರ್ಧರಿಸಿದೆ

ಬಿರುಗಾಳಿಯಿಂದ ಅಮೆರಿಕದ ೪೪ ಜನರ ಮರಣ

ಈಶಾನ್ಯ ಅಮೆರಿಕದಲ್ಲಿ ಗಂಟೆಗೆ ೧೦೦ ಮೈಲಿ ವೇಗದಲ್ಲಿ ಬೀಸಿದ ಬಿರುಗಾಳಿಯಿಂದ ೪೪ ಜನರ ಪ್ರಾಣಹಾನಿಯಾಗಿದೆ ... ೫೦ ಕೋಟಿ ... ನಷ್ಟವಾಗಿರುವುದೆಂದೂ ವರದಿಯಾಗಿದೆ ನ್ಯೂ ಇಂಗ್ಲೆಂಡ್ ಪ್ರಾಂತಕ್ಕೆ ತುಂಬಾ ಹಾನಿಯಾಗಿದೆ ೧ ಕೋಟಿ ಜನಗಳಿಗೆ ವಿದ್ಯುಚ್ಛಕ್ತಿ ಸರಬರಾಜು ನಿಂತುಹೋಗಿದೆ

ತಿರುವಾಂಕೂರು ಶಾಸನ ಸಭಾ ಸದರ ಉಪವಾಸ

ತಿರುವಾಂಕೂರು ಸರ್ಕಾರದ ಬಸ್ಸು ಸಂಚಾರ ಸಂಸ್ಥೆಯ ಕಾರ್ಮಿಕರ ಸಂಘದವರು ಹೂಡಿರುವ ಮುಷ್ಕರಕ್ಕೆ ಬೆಂಬಲ ನೀಡಲು ಅಲ್ಲಿನ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಟಿ ವಿ ಥಾಮಸ್ ಮತ್ತು ಇತರ ನಾಲ್ಕು ಸದಸ್ಯರು ಐವರು ಕಾರ್ಮಿಕರೊಡನೆ ನೆನ್ನೆ ಮಧ್ಯಾಹ್ನದಿಂದ ಅಲ್ಲಿನ ಸರ್ಕಾರಿ ಕಛೇರಿ ಎದುರಿನಲ್ಲಿ ಉಪವಾಸವನ್ನು ಆರಂಭಿಸಿರುತ್ತಾರೆ.

ಅತಿವೃಷ್ಟಿ ಅನಾವೃಷ್ಟಿಗಳಿಂದ ಬಿಹಾರಿನಲ್ಲಿ ೧೭೦ ಕೋಟಿ ನಷ್ಟ

ಬಿಹಾರಿನಲ್ಲಿ ೧೯೫೦ ರಿಂದ ಇದುವರೆಗೆ ಪ್ರವಾಹ ಮತ್ತು ಅನಾವೃಷ್ಟಿಗಳಿಂದ ೧೭೦ ಕೋಟಿ ರೂ ಆಸ್ತಿ ನಷ್ಟವಾಗಿರುವುದೆಂದು ಅಲ್ಲಿನ ಮುಖ್ಯ ಮಂತ್ರಿ ಶ್ರೀ ಕೃಷ್ಣಸಿನ್ಹರವರು ಹೇಳಿದರು ಭಾರತದ ೧ನೇ ಪಂಚ ವಾರ್ಷಿಕ ಯೋಜನೆಯ ವೆಚ್ಚಕ್ಕೆ ಹೋಲಿಸಿದರೆ ಈ ನಷ್ಟವು ೧೦ನೇ ಒಂದು ಭಾಗದಷ್ಟಾಗಿರುವುದೆಂದು ಅವರು ಹೇಳಿರುತ್ತಾರೆ

ನಂದಿಗಾನಹಳ್ಳಿ ಶ್ಯಾನುಭೋಗರಿಗೆ ೧೦ ವರ್ಷ ಸಜಾ

ತುಮಕೂರು ಜಿಲ್ಲೆ ನಂದಿಗಾನಹಳ್ಳಿಯ ಶ್ಯಾನುಭೋಗರಾದ ಶ್ರೀ ಅಪ್ಪಯ್ಯ ಎಂಬವರು ಕೆಲವು ದಿನಗಳ ಹಿಂದೆ ನಡೆದ ಒಂದು ಘರ್ಷಣೆಯಲ್ಲಿ ವ್ಯಕ್ತಿಯೊಬ್ಬನಿಗೆ ಗಾಯವಾದ ವರದಿಯಾಗಿತ್ತು ಆ ಸ್ತ್ರೀಗೆ ತಗಲಿದ ಪೆಟ್ಟುಗಳಿಂದ ಆಕೆಯು ಪ್ರಾಣ ಬಿಟ್ಟುದರಿಂದ ಅವರ ಮೇಲೆ ಮೊಕದ್ದಮೆ ಹೂಡಲಾಗಿ ಅವರಿಗೆ ೧೦ ವರ್ಷ ಸಜಾ ವಿಧಿಸಲಾಗಿದೆ ಈ ಸಂಬಂಧದಲ್ಲಿ ... [illegible]

ವಿಶ್ವವಿದ್ಯಾಲಯದ ಶಿಕ್ಷಣದಲ್ಲಿ ಸುಧಾರಣೆ

ಸರ್ಕಾರಕ್ಕೆ ಸುಧಾರಣಾ ಸಲಹಾ ಸಮಿತಿ ಸಲಹೆ

ಸ್ವಂ ಸು ವರದಿಗಾರ] ಬೆಂಗಳೂರು ೨ ಸರ್ಕಾರದವರು ರಚಿಸಿರುವ ವಿದ್ಯಾಭ್ಯಾಸ ಸುಧಾರಣಾ ಸಲಹಾ ಸಮಿತಿಯವರು ವಿಶ್ವವಿದ್ಯಾಲಯದಲ್ಲಿ ಶಿಕ್ಷಣದ ಬಗ್ಗೆ ಸುಧಾರಣೆ ತರುವ ವಿಷಯದಲ್ಲಿ ದೆಹಲಿ ವಿಶ್ವವಿದ್ಯಾಲಯದ ಶಾಸನ ಸಂಸ್ಥಾನದ ಸುಧಾರಣಾ ಸಮಿತಿ ವರದಿ ಮತ್ತು ಡಾ॥ ಸಿ ಆರ್ ರೆಡ್ಡಿಯವರ ವರದಿಗಳ ಆಧಾರದ ಮೇಲೆ ಇಲ್ಲಿನ ವಿಶ್ವವಿದ್ಯಾಲಯದ ಶಾಸನಕ್ಕೆ ತಿದ್ದುಪಡಿ ಮಾಡುವಂತೆ ಸಲಹೆ ಮಾಡಿರುತ್ತಾರೆಂದು ಗೊತ್ತಾಗಿದೆ

ತುಂಗಭದ್ರೆಗೆ ಸಚಿವರ ಪ್ರಯಾಣ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯ ಮತ್ತು ವ್ಯವಸಾಯ ಮಂತ್ರಿ ಶ್ರೀ ಆರ್ ನಾಗನಗೌಡರು ಈ ದಿನ ತುಂಗಭದ್ರೆಗೆ ಪ್ರಯಾಣ ಬೆಳೆಸುವರು ಅಲ್ಲಿ ಸೇರಲಿರುವ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಭಾಗವಹಿಸಲು ಇತರ ಮಂತ್ರಿಗಳೂ ನಾಳೆ ತೆರಳುವರು ಮುಖ್ಯ ಮಂತ್ರಿಯವರು ೫ ನೇ ತಾ॥ ವಾಪಸು ಬರುವರು

ಪೊಲೀಸು ಬ್ಯಾಂಡಿನ ಹೆಸರು ಬದಲಾವಣೆ

ಸಂಸ್ಥಾನದ ಪೊಲೀಸು ಬ್ಯಾಂಡಿನ ಹೆಸರನ್ನು ಸರ್ಕಾರದವರು 'ಗೌರ್ನಮೆಂಟ್ ಆರ್ಕೆಸ್ಟ್ರಾ' ಎಂದು ಇಂಗ್ಲಿಷಿನಲ್ಲೂ ಮತ್ತು 'ಸರ್ಕಾರದ ವಾದ್ಯಗೋಷ್ಠಿ' ಎಂದು ಕನ್ನಡದಲ್ಲೂ ಬದಲಾಯಿಸಿರುತ್ತಾರೆ

○ ಶಿವಮೊಗ್ಗ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎ ಎಸ್ ರಾಜನ್‌ರವರಿಗೆ ಈ ದಿನದಿಂದ ೩೦ ದಿನಗಳ ರಜಾ ಕೊಡಲಾಗಿದೆ

○ ಹಾಸನದ ಎಕ್ಸಿಕ್ಯೂಟಿವ್ ಇಂಜನಿಯರ್ ಶ್ರೀ ಎ ಬಾಲಕೃಷ್ಣರಾಯರನ್ನು ಬೆಂಗಳೂರಿನ ಮರಾಮತ್ತು ಇಲಾಖಾ ಸ್ಪೆಷಲ್ ಡ್ಯೂಟಿ ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ

○ ಕೆ ಜಿ ಎಫ್‌ನಲ್ಲಿರುವ ವಿದ್ಯುಚ್ಛಕ್ತಿ ಸೂಪರಿಂಟೆಂಡೆಂಟರಾದ ಶ್ರೀ ಕೆ ವೇದಾಂತ ಅಯ್ಯಂಗಾರ್ಯರಿಗೆ ನಿವೃತ್ತಿ ಪೂರ್ವ ೩ ತಿಂಗಳು ೨೭ ದಿನಗಳ ರಜಾ ದೊರೆತಿದೆ

೪ ದಿನಗಳಲ್ಲಿ ೧೩ ಕಡೆ ಕಳ್ಳತನ

ಮೈಸೂರು ನಗರದಲ್ಲಿ ಮೊನ್ನೆ ವರೆಗೆ ೪ ದಿನಗಳಲ್ಲಿ ಒಟ್ಟು ೧೩ ಕಳ್ಳತನಗಳಾಗಿವೆ ಒಂಟಿಕೊಪ್ಪಲಿನ ಗೋಕುಲಂನಲ್ಲಿರುವ ರೇಡಿಯೋ ಇಂಜನಿಯರ ಮನೆಯಲ್ಲಿ ಕಳ್ಳತನವಾಗಿದೆ ... ಕೊಡಗೆ ಗೊತ್ತಾದ ವರದಿ ಪ್ರಕಾರ ಶ್ರೀ ... ನರಸಿಂಹಮೂರ್ತಿಯವರಿಗೂ ಅವರ ಪತ್ನಿಯವರಿಗೂ ಕ್ಲೋರೊಫಾರಂ ಮೂಸಿಸಿ ಅವರುಗಳು ಪ್ರಜ್ಞೆ ತಪ್ಪಿದನಂತರ ಆಕೆಯು ಧರಿಸಿದ್ದ ಎಲ್ಲಾ ಆಭರಣಗಳನ್ನೂ, ಇತರ ಬೆಲೆ ಬಾಳುವ ಸಾಮಾನುಗಳನ್ನೂ ಬಟ್ಟೆಗಳನ್ನೂ ಅಪಹರಿಸಲಾಗಿರುವುದೆಂದು ಗೊತ್ತಾಗಿದೆ

○ ಮದ್ರಾಸಿಗೆ ೧೪ ಮೈಲಿ ದೂರದಲ್ಲಿರುವ ಆವಡಿಯಲ್ಲಿ ಕಾಂಗ್ರೆಸ್ಸಿನ ೬೦ ನೇ ಅಧಿವೇಶನವು ನಡೆಯುವುದೆಂದು ಗೊತ್ತಾಗಿದೆ

ರಾಷ್ಟ್ರೀಯ ಸಾಲಕ್ಕೆ ಪೌರಸಭೆಯಿಂದ ೫೦,೦೦೦ ರೂ

ಮೈಸೂರು ೩

ಕಳೆದ ಸೋಮವಾರ ನಡೆದ ಪೌರಸಭೆಯ ಅಧಿವೇಶನದಲ್ಲಿ ರಾಷ್ಟ್ರೀಯ ಯೋಜನೆ ಸಾಲಕ್ಕಾಗಿ ೫೦,೦೦೦ ರೂ ಚಂದಾ ಕೊಡಲು ತೀರ್ಮಾನಿಸಲಾಯಿತು. ಮುಂದಿನ ತಿಂಗಳು ೪ ನೇ ತಾ|| ಮಾರ್ಕೆಟ್ ಪ್ರದರ್ಶನ ನಡೆಸಲು ನಿರ್ಧರಿಸಿ, ಅದಕ್ಕಾಗಿ ೧,೫೦೦ ರೂ ಅನ್ನು ಮಂಜೂರು ಮಾಡಲಾಯಿತು

ಸಯ್ಯಾಜಿರಾವ್ ರಸ್ತೆಗೆ ೧,೧೦,೦೦೦ ರೂ ವೆಚ್ಚದಲ್ಲಿ ಸಿಮೆಂಟ್ ಹಾಕಲು ನಿರ್ಧರಿಸಲಾಯಿತು ಅದಕ್ಕಾಗಿ ಸರ್ಕಾರದವರು ೩೦,೦೦೦ ರೂ ಗಳನ್ನು ಮಂಜೂರ ಮಾಡಿರುತ್ತಾರೆ

ಕೃಷ್ಣಮೂರ್ತಿಪುರದಲ್ಲಿ ನಿಮ್ನ ವರ್ಗದವರಿಗಾಗಿ ೧,೯೧,೦೦೦ ರೂ ವೆಚ್ಚದಲ್ಲಿ ವಿದ್ಯಾರ್ಥಿ ನಿಲಯ ಕಟ್ಟಿಸುವುದಕ್ಕೆ ಸರ್ಕಾರದ ಮಂಜೂರಾತಿ ದೊರೆತಿರುವುದನ್ನು ಸಭೆಯು ರೆಕಾರ್ಡ್ ಮಾಡಿಕೊಂಡಿತು

ಆರಂಭ ಭಾಷಣ ಮತ್ತು ಸಂಗೀತ

ರಾಜಧಾನಿಯ ಶ್ರೀ ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ವಿದ್ಯಾಗಣಪತಿ ಮಂಗಳಾರತಿ ಸಂಬಂಧವಾಗಿ ಈ ಸಂಜೆ ೬ ಗಂಟೆಗೆ ದರ್ಬಾರ್ ಭಕ್ಷಿ ದಿವಾನ್ ಬಹದ್ದೂರ್ ಎನ್ ದೇವರಾಜ ಅರಸಿನವರು ಆರಂಭ ಭಾಷಣ ಮಾಡುವರು ನಾಳೆ ಸಂಜೆ ೬ ಗಂಟೆಗೆ ಆ|| ವಿ|| ಬಿ ಎಂ ಶಿವಪ್ಪನವರ ಸಂಗೀತವು ಏರ್ಪಾಡಾಗಿದೆ

ಪತ್ರಿಕೋದ್ಯಮ ಸಂಘದ ಆರಂಭ ಭಾಷಣ

ರಾಜಧಾನಿಯ ಮಹಾರಾಜಾ ಕಾಲೇಜಿನ ವಿಶ್ವವಿದ್ಯಾಲಯ ಪತ್ರಿಕೋದ್ಯಮ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೫|| ಗಂಟೆಗೆ ಅರ್ಥಶಾಸ್ತ್ರ ಪ್ರೊಫೆಸರಾದ ಡಾ|| ಎ ಕೃಷ್ಣಗೋಪಾಲ್‌ರವರು ಮಾಡುವರು

ವಿವಾಹ ಮಹೋತ್ಸವ

ರಾಜಧಾನಿಯ ಪ್ರಜಾಮಂಡಲಿ ಸಂಸ್ಥೆಯ ಸಂಚಾಲಕರಾದ ಶ್ರೀ ಎ ಎಸ್ ವೆಂಕಟಸುಬ್ಬಯ್ಯ ಶರ್ಮರವರು ತಮ್ಮ ಕುಮಾರಿ ಸೌ|| ಶಾರದಮ್ಮನವರನ್ನು ಶ್ರೀರಂಗಪಟ್ಟಣದ ಶ್ರೀ ಎಂ ಕೆ ಲಕ್ಷ್ಮೀನರಸಿಂಹಯ್ಯನವರ ಮಕ್ಕಳೂ ಗಂಜಾಂ ಪೌರಸಭೆಯ ಮಾಜಿ ಕೌನ್ಸಿಲರ್ ಮತ್ತು ಸೂಪರ್‌ವೈಸರೂ ಆದ ಶ್ರೀ ಲಕ್ಷ್ಮೀನಾರಾಯಣಸ್ವಾಮಿಯವರಿಗೆ ಕೊಟ್ಟು ಕಳೆದ ಸೋಮವಾರ ವಿವಾಹವನ್ನು ನೆರವೇರಿಸಿದರು ಸಂಜೆ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿತ್ತು

ವೆಲ್‌ಕಂ ಲಾಡ್ಜಿನ ವಾರ್ಷಿಕೋತ್ಸವ

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ವೆಲ್‌ಕಂ ಲಾಡ್ಜ್ ಹೋಟೇಲಿನ ಮಾಲೀಕರಾದ ಶ್ರೀ ಕೆ ಮಂಜುನಾಥಯ್ಯನವರು ತಮ್ಮ ಹೋಟೇಲಿನ ೩ನೇ ವಾರ್ಷಿಕೋತ್ಸವ ಮತ್ತು ಶ್ರೀ ಗಣಪತಿ ಪೂಜೆಯನ್ನು ನೆನ್ನೆ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು ವಿ|| ಕಲ್ಪಪಿಳ್ಳೈಯ್ಯಂಗಾರ್ಯರಿಂದ ಪ್ರಾರ್ಥನೆಯಾದನಂತರ ವ್ಯವಸ್ಥಾಪಕರಾದ ಶ್ರೀ ಗುಂಡೂರಾಯರು ಸ್ವಾಗತ ಭಾಷಣ ಮಾಡಿದರು ಅಧ್ಯಕ್ಷರು ಭಾಷಣ ಮಾಡಿ ಶ್ರೀ ಗಣಪತಿಯ ಮಹಿಮೆಯನ್ನು ವಿವರಿಸಿದರಲ್ಲದೆ ಹೋಟೇಲಿಗೆ ಯಶಸ್ಸನ್ನು ಕೋರಿದರು ಬೋರ್ಡರುಗಳ ಪರವಾಗಿ ಶ್ರೀ ವೆಂಕಟೇಶನ ಮೂರ್ತಿಯವರು ಭಾಷಣ ಮಾಡಿದನಂತರ ವಂದನಾರ್ಪಣೆ ಮಂಗಳಾರತಿ ಮತ್ತು ಫಲತಾಂಬೂಲ ವಿನಿಯೋಗಗಳಾದುವು

ಶ್ರೀ ರಾಮ ಪಟ್ಟಾಭಿಷೇಕೋತ್ಸವ

ದಿವಾನರ ರಸ್ತೆಯ ೫೧೧ ನೇ ನಂಬರ ಶ್ರೀ ಪ್ರತ್ಯಕ್ಷ ... ಲ ... ಶ್ರೀ ... ರಾಘವಾಚಾರ್ಯರ ... ಶ್ರೀ ರಾಮ ... ಪಾರಾಯಣವನ್ನು ... ಕ್ಕೆ ... ತಿಂಗಳು ... ನಡೆಸಿ ... ೯ ನೇ ತಾ|| ... ಪಟ್ಟಾಭಿಷೇಕವನ್ನು ಜರುಗಿಸಲಾಗುವುದು ... ಜನರು ಈ ಉತ್ಸವದಲ್ಲಿ ಭಾಗವಹಿಸುವಂತೆ ಕೋರಲಾಗಿದೆ

ರಷ್ಯದಲ್ಲಿ ಸಿಡಿತದಿಂದ ನೂರಾರು ಜನರ ಮರಣ

ಸ್ಟಾಲಿನ್‌ಗ್ರಾಡಿನ ಎಣ್ಣೆ ಪರಿಷ್ಕರಣ ಕೇಂದ್ರದಲ್ಲಿ ಸಿಡಿತವುಂಟಾಗಿ ನೂರಾರು ಜನರು ಮೃತಪಟ್ಟಿರುವರೆಂದು ವರದಿಯಾಗಿದೆ. ಪತ್ರಿಕೆಯಲ್ಲಿ ರಷ್ಯದ ಎಣ್ಣೆ ಕೈಗಾರಿಕೆಯ ಉಪಮಂತ್ರಿ ಎಂ ಎಲ್ ಬಿ ... ಮತ್ತು ಕೈಗಾರಿಕೆ ಮುಖ್ಯ ಇಂಜನಿಯರ್ ಎ ಎ ... ರವರು ... ರೆಂದು ಹೇಳಲಾಗಿದೆ

ಮಾಸ್ಕೋವಿಗೆ ಭಾರತದ ಪ್ರಾಧ್ಯಾಪಕರು, ವಿದ್ಯಾರ್ಥಿಗಳ ನಿಯೋಗ

ಭಾರತದ ಆರು ವಿಶ್ವವಿದ್ಯಾನಿಲಯಗಳಿಂದ ೨೭ ಜನ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನೊಳಗೊಂಡ ನಿಯೋಗವೊಂದು ಈ ವಾರ ಎರಡು ತಂಡಗಳಲ್ಲಿ ಮಾಸ್ಕೋವಿಗೆ ಹೋಗುವುದು ಮಾಸ್ಕೋ ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ ಹೋಗುವ ಈ ನಿಯೋಗದ ಸದಸ್ಯರು ಮಾಸ್ಕೋ ವಿಶ್ವವಿದ್ಯಾನಿಲಯದ ಅತಿಥಿಗಳಾಗಿ ಒಂದು ತಿಂಗಳ ಕಾಲ ಅಲ್ಲಿರುವರು ನಿಯೋಗದಲ್ಲಿ ಮೂವರು ಮಹಿಳೆಯರೂ ಇರುವರು

ಕಡಿಮೆ ಬೆಲೆಯಲ್ಲಿ ಗೋಧಿ ಮಾರಾಟ

ಈ ತಿಂಗಳು ೧೫ ನೇ ತಾ|| ನಿಂದ ಕೇಂದ್ರ ಸರ್ಕಾರದವರು ತಮ್ಮ ಬಳಿ ಇರುವ ಗೋಧಿಯನ್ನು ಕಡಿಮೆ ಬೆಲೆಗೆ ಮಾರಲು ಯೋಚಿಸುತ್ತಿರುವುದಾಗಿ ಗೊತ್ತಾಗಿದೆ

೧,೦೦೦ ಎಕರೆಯ ಟೀ ಬೆಳೆ ನಾಶ

ಪಶ್ಚಿಮ ಬಂಗಾಳದ ಜಲಪೈಗುರಿಯಲ್ಲಿ ಪ್ರವಾಹದಿಂದ ೧,೦೦೦ ಎಕರೆ ಪ್ರದೇಶದಲ್ಲಿ ಕೋಟಿ ಗಟ್ಟಲೆ ಪೌಂಡಿನಷ್ಟು ಚಹಾವು ನಷ್ಟವಾಗಿರುತ್ತದೆ ಒಂಪ ... ೫೦ ಎಕರೆ ... ನಲ್ಲಿ ೨೦ ಎಕರೆ ಮಾತ್ರ ಪ್ರವಾಹದ ಹೊಡೆತಕ್ಕೆ ಸಿಗಲಿಲ್ಲ

ಹರಿಕಥೆ

ರಾಜಧಾನಿಯ ರಾಮಾನುಜಾ ರಸ್ತೆಯಲ್ಲಿರುವ ತರುಣ ಸಂಘದಲ್ಲಿ ವಿದ್ಯಾ ಗಣಪತಿ ಮಂಗಳಾರತಿ ಅಂಗವಾಗಿ ಈ ರಾತ್ರಿ ೯ ಗಂಟೆಗೆ ಶ್ರೀ ವಾಸುದೇವರಾಜಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಎಂ ಎಸ್ ನಾರಾಯಣದಾಸರು 'ಭದ್ರಾಚಲ ರಾಮದಾಸ್' ಎಂಬ ಹರಿಕಥೆಯನ್ನು ಮಾಡುವರು

ಗಣಪತಿ ಮಂಗಳಾರತಿ

ರಾಜಧಾನಿಯ ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಗಳ ನಾನ್ ಗೆಜೆಟೆಡ್ ನೌಕರರ ಸಂಘದವರು ನೆನ್ನೆ ಬೆಳಗ್ಗೆ ಟೌನ್‌ಹಾಲಿನಲ್ಲಿ ಮಹಾ ಗಣಪತಿ ಮಂಗಳಾರತಿಯನ್ನು ನೆರವೇರಿಸಿದರು ದೇವರಾಜಾ ಮಾರ್ಕೆಟ್ಟಿನಲ್ಲಿ ನೆನ್ನೆ ಮಾರ್ಕೆಟ್ ವರ್ತಕರುಗಳ ಸಂಘದವರು ಗಣಪತಿ ಪೂಜೆಯನ್ನು ಏರ್ಪಡಿಸಿದ್ದರು ಟ್ರಾನ್ಸ್‌ಪೋರ್ಟ್ ಕೆಲಸಗಾರರ ಸಂಘದವರು ಫರ್ಸ್ಟ್ ಆಫೀಸ್ ... ಕಟ್ಟಡದಲ್ಲಿ ಗಣಪತಿ ಪೂಜೆಯನ್ನು ಏರ್ಪಡಿಸಿದ್ದರು

ಗಣಪತಿ ಉತ್ಸವದ ಸಂಗೀತ

ರಾಜಧಾನಿಯ ರಾಮವಿಲಾಸ ಅಗ್ರಹಾರದಲ್ಲಿರುವ ಯುವಕರ ಸಾಂಸ್ಕೃತಿಕ ಸಂಘದಲ್ಲಿ ನೆನ್ನೆ ಬೆಳಗ್ಗೆ ಶ್ರೀ ಗಣಪತಿ ಪೂಜೆಯ ಸಂಬಂಧವಾಗಿ ವಿದ್ವಾನ್ ಎ ವಿ ನಾರಾಯಣಪ್ಪ ಮತ್ತು ಪಾರ್ಟಿಯವರ ನಾಗಸ್ವರ ಮತ್ತು ಸಂಜೆ ವಿ|| ಆರ್ ಕೆ ಶ್ರೀಕಂಠೇಶ್ವರ ಸಂಗೀತಗಳು ನಡೆದುವು ಈ ಸಂಜೆ ೬ ಗಂಟೆಗೆ ವಿದ್ವಾನ್ ರಂಗಪ್ಪನವರ ಕೊಳಲು ವಾದನವೂ ನಾಳೆ ಸಂಜೆ ವಿ|| ಎ ಸುಬ್ರಹ್ಮಣ್ಯಂ ಮತ್ತು ಪಾರ್ಟಿಯವರ ಸಂಗೀತವೂ ಇವೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ಸಿಟಿಂ ... ಮಧ್ಯಾಹ್ನ ... ಮತ್ತು ... ಎಸ್ ... ಮತ್ತು ... ಮೈಸೂರು ... ನಾರಾಯಣಸ್ವಾಮಿ ಸಂಗೀತ ... ಶ್ರೀನಿವಾಸ ... ಕನ್ನಡ ಭಾಷಣ ... ಸಂಗೀತ ... ಕರ್ಣಾಟಕ

ಭಿಕ್ಷುಕರ ಗೃಹದಲ್ಲಿರುವವರ ಬಿಡುಗಡೆ

ಬೆಂಗಳೂರು ೧

ಭಿಕ್ಷಾಟನೆ ನಿಷೇಧದ ಶಾಸನವು ಯಾವ ರೀತಿ ಜಾರಿಯಲ್ಲಿದೆಯೆಂಬುದನ್ನು ಪರಿಶೀಲಿಸಲು ನೇಮಕವಾಗಿದ್ದ ಸಮಿತಿಯೆಂದು ಸರ್ಕಾರಕ್ಕೆ ಮಾಡಿರುವ ಶಿಫಾರಸಿನಲ್ಲಿ ವಸತಿ ಗೃಹಗಳಿಗೆ ಸೇರಿಸಲ್ಪಟ್ಟಿರುವ ಭಿಕ್ಷುಕರು ದೈಹಿಕ ಶ್ರಮದ ಕೆಲಸ ಮಾಡುವಂತೆ ಒತ್ತಾಯ ಪಡಿಸಲು ಶಾಸನವಾಗಬೇಕೆಂದು ತಿಳಿಸಿದೆ ಈಗಿರುವ ಶಾಸನದಂತೆ ಭಿಕ್ಷುಕನನ್ನು ಮೂರು ಸಲ ಖುಲಾಸೆ ಮಾಡಿ ನಾಲ್ಕನೇ ಬಾರಿ ಅವನನ್ನು ವಸತಿ ಗೃಹಕ್ಕೆ ಸೇರಿಸಲವಕಾಶವಿರುವುದೆಂದೂ, ನ್ಯಾಯಾಧೀಶರು ೧ ಬಾರಿಗೆ ಮಾತ್ರ ಭಿಕ್ಷುಕನನ್ನು ಖುಲಾಸೆ ಮಾಡುವುದಕ್ಕೆ ಅವಕಾಶವಿರಬೇಕೆಂದೂ ಸೂಚಿಸಲಾಗಿದೆ. ಭಿಕ್ಷಾಟನೆ ನಿಷೇಧ ಶಾಸನದ ಪ್ರಕಾರ ಹೂಡಲಾಗುವ ಮೊಕದ್ದಮೆಗಳನ್ನು ವಿಚಾರಿಸಲು ಮೈಸೂರು ಮತ್ತು ಬೆಂಗಳೂರುಗಳಲ್ಲಿ ಗೌರವ ನ್ಯಾಯಾಧೀಶರನ್ನು ನೇಮಿಸಬೇಕೆಂದು ಸಲಹೆ ಮಾಡಲಾಗಿದೆ ಮೊದಲನೇ ತಪ್ಪಿತಕ್ಕೆ ೩ ತಿಂಗಳೂ, ಎರಡನೇ ಸಾರಿ ಸಿಕ್ಕಿದವನಿಗೆ ೧ ರಿಂದ ೩ ವರ್ಷದವರೆಗೂ, ಮೂರನೆ ಅವರ್ತಿ ಸಿಕ್ಕಿದವನಿಗೆ ೫ ವರ್ಷವೂ ಶಿಕ್ಷೆ ಕೊಡುವಂತೆ ಆಗಬೇಕೆಂದೂ ಸಮಿತಿಯವರು ಹೇಳಿರುತ್ತಾರೆ. ಭಿಕ್ಷಾಟನೆ ಮಾಡುವ ಹುಡುಗರನ್ನು ೧೫ ವರ್ಷವಾಗುವವರೆಗೆ ಬಾಲಾಪರಾಧಿಗಳ ಶಾಲೆಗೆ ಸೇರಿಸುವಂತೆ ಸಲಹೆ ಮಾಡಲಾಗಿದೆ

ಚಾಮರಾಜನಗರದಲ್ಲಿ ಸೊಳ್ಳೆಕಾಟ

ಚಾಮರಾಜನಗರದ ತಾಲ್ಲೂಕಿನಲ್ಲಿ ಮಲೇರಿಯಾ ವಿರೋಧ ಕಾರ್ಯಕ್ರಮವು ನಡೆಯುತ್ತಿದೆ ಆದರೆ ಟೌನಿನಲ್ಲಿ ಅದರ ಉಪಯೋಗವು ಆಗಿರುವುದಿಲ್ಲ ಅಲ್ಲಿ ಸೊಳ್ಳೆ ಕಾಟವು ವಿಪರೀತವಾಗಿರುತ್ತದೆ ಡಿ ಡಿ ಟಿ ಪ್ರಯೋಗವನ್ನು ನಡೆಸುತ್ತಿಲ್ಲ ಪೌರಸಭೆಯವರು ಇದಕ್ಕಾಗಿ ಚಂದಾವನ್ನು ಕೊಟ್ಟಿರುವರೆಂದು ಗೊತ್ತಾಗಿದೆ ಆರೋಗ್ಯ ಇಲಾಖೆಯವರು ಇತ್ತ ಗಮನಕೊಡಬೇಕಾದುದು ಅಗತ್ಯ—ಎಂಬುದಾಗಿ ಚಾಮರಾಜನಗರದ ನಿವಾಸಿಯೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ

ಜಗದಂಬಾ ಶಿಶುವಿಹಾರ

565 ದಿವಾನರ ರಸ್ತೆ ಮೈಸೂರು

ಮೇಲ್ಕಂಡ ಶಿಶುವಿಹಾರದಲ್ಲಿ ಮಾಂಟಿಸ್ಸೋರಿ ಮತ್ತು ಕಿಂಡರ್‌ಗಾರ್ಟನ್ ವಿಧದಲ್ಲಿ ಮಕ್ಕಳಿಗೆ ಮೂರನೇ ವಯಸ್ಸಿನಿಂದ ಆಟ ಪಾಟಗಳೊಡನೆ ಓದು ಬರಹವನ್ನು ಕಲಿಸಿ ೭ ನೇ ವಯಸ್ಸಿಗೆ ಮಿಡಲ್ ಫಸ್ಟ್ ಇಯರ್ ತರಗತಿಗೆ ಸೇರಲು ಅರ್ಹರನ್ನಾಗಿ ಮಾಡಲಾಗುತ್ತೆ

ಡಿ ಕೃಷ್ಣಮೂರ್ತಿ
ಡೈರೆಕ್ಟರ್

Edited, Printed and Published by A R Nagarajan at Sadhvi Press D. Subbiah Road, Mysore

ಚಿತ್ರ ಕಲಾನಿಧಿ ಕೇಶವಯ್ಯನವರ ನಿಧನ

ಮೈಸೂರು ನಗರದ ಸುಪ್ರಸಿದ್ಧ ಚಿತ್ರ ಕಲಾವಿದರಾದ ಶ್ರೀ ಕೆ ಕೇಶವಯ್ಯನವರು ಕಳೆದ ಭಾನುವಾರ ಬೆಳಗ್ಗೆ ತಮ್ಮ ೬೬ನೇ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಬೊಂಬಾಯಿಯಲ್ಲಿ ರಾಜಾ ರವಿವರ್ಮರವರ ಚಿತ್ರ ಕಲೆಯನ್ನು ಅಭ್ಯಾಸ ಮಾಡಿ ಅನೇಕ ಭಾವಚಿತ್ರಗಳನ್ನು ಬರೆದು ನಾಲ್ವಡಿ ಕೃಷ್ಣರಾಜ ಒಡೆಯರ ಪ್ರಶಂಸೆಗೆ ಪಾತ್ರರಾಗಿದ್ದರು ಅವರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟಿನ ಕಲಾ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು ಅವರ ಗೌರವಾರ್ಥವಾಗಿ ಶಾಲೆಯನ್ನು ಕಳೆದ ಸೋಮವಾರ ಮುಚ್ಚಲಾಗಿತ್ತು

○ ಪರ್ಷಿಯಾ ಮತ್ತು ಇರಾಕಿನ ಗಡಿ ಒಳಮಾರಿವಾನ್ ಎಂಬಲ್ಲಿ ಕಳೆದ ವಾರ ಎರಡು ರಾಜ್ಯಗಳ ಸೈನ್ಯಗಳಿಗೂ ಘರ್ಷಣೆಯಾಯಿತೆಂದೂ, ಪರ್ಷಿಯಾವು ಇರಾಕಿಗೆ ಈ ಬಗ್ಗೆ ಪ್ರತಿಭಟನೆ ಮಾಡಿರುವುದಾಗಿಯೂ ವರದಿಯಾಗಿದೆ ಗಡಿ ಬಹು ಕಾಲದ ನೀರಿನ ಬಗ್ಗೆ ಘರ್ಷಣೆ ಆಗಿದೆ

ವುಡ್‌ಲ್ಯಾಂಡ್ಸ್

3 9 54 ನೇ ಶುಕ್ರವಾರದಿಂದ ಅನೋಖಿ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಕುಲ್‌ದೀಪ್‌ರವರ ಹಿಂದಿ ಚಿತ್ರ

* ಔಲಾದ್ *

ತಾರಾಗಣ ನಿರೂಪ್‌ರಾಯ್, ಬಾಲರಾಜ್ ಸಹಾನಿ, ಉಷಾಕಿರಣ್

2—9—54 ರಿಂದ

ಲಕ್ಷ್ಮಿ ★ ಅನೋಖಿ 4 ನೇ ವಾರ

ದಿನವಹಿ 3 ಪ್ರದರ್ಶನಗಳು

ಶಕ್ತಿ ... ರ ... ಚಿತ್ರ

* ಮಲೈಕಳ್ಳನ್ *

ಪಾತ್ರ ಭಾನುಮತಿ ಎಂ ಜಿ ರಾಮಚಂದ್ರನ್ ಟಿ ಎಸ್ ದೊರೆರಾಜ್ ಮುಂತಾದವರು

I wish to inform that the SQUAREWORD HAND DELIVERY BOX is located at my shop No 497 (near Post Box), Devaraja Market Southern Corner, Sayaji Rao Road Mysore I request the Square-word Competitors to note the same and drop in their entries

(Sd) C A SAMPATHKUMARAN,
Sole Agent
Indian Express, Dinamani, Andhraprabha
2912 Saraswatipuram Mysore

ಮಾದರಿ ಮನೆ ಮಾರಾಟಕ್ಕಿದೆ

ಮೈಸೂರು ನಗರದ ರಾಮಾನುಜಾ ರಸ್ತೆಯಲ್ಲಿರುವ 65 ನೇ ನಂಬರಿನ ಮುನಿಸಿಪಲ್ ಮಾದರಿ ಮನೆಯು ಮಾರಾಟಕ್ಕಿದೆ.

ವಿವರಗಳಿಗೆ ಸಾಧ್ವಿ ಪತ್ರಿಕಾಲಯದಲ್ಲಿ ವಿಚಾರಿಸಿರಿ

ಉತ್ತಮವಾದ ಜಗದ

808

ಸಾಬೂನು

ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ರಿಜಿಸ್ಟ್ರೇ|| ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೩] SADHVI . FRIDAY 3-9-1954 ಮೈಸೂರು ಶುಕ್ರವಾರ ೩-೯-೧೯೫೪ [ಸಂಚಿಕೆ ೩೦

೭ನೇ ತಾ|| ಭಾರತ-ಪೋರ್ಚುಗಲ್ ಸಂಧಾನದ ಆರಂಭ

ಪೋರ್ಚುಗಲ್ಲಿನೊಡನೆ ಸಂಧಾನಕ್ಕೆ ಭಾರತದ ಒಪ್ಪಿಗೆ

ಈ ತಿಂಗಳು ೭ ನೇ ತಾ|| ದೆಹಲಿಯಲ್ಲಿ ಪೋರ್ಚುಗಲ್ಲಿನ ಪ್ರತಿನಿಧಿಗಳೊಡನೆ ಗೋವಾ ಘಟನೆಗಳ ಸಂಬಂಧವಾಗಿ ನಿಷ್ಪಕ್ಷಪಾತವಾದ ವೀಕ್ಷಕ ವಿಷಯವಾಗಿ ಸಂಧಾನ ನಡೆಸಲು ಭಾರತವು ಒಪ್ಪಿರುತ್ತದೆ. ಭಾರತ ಸರ್ಕಾರದವರು ದೆಹಲಿಯಲ್ಲಿರುವ ಪೋರ್ಚುಗಲ್ಲಿನ ಮಂತ್ರಿ ಡಾ|| ವಾಸ್ಕೊ ಗಾರ್ಬರವರಿಗೆ ಮೊನ್ನೆ ಪತ್ರ ಬರೆದು ಸಂಧಾನ ನಡೆಸಲು ಪೋರ್ಚುಗಲ್ಲು ಸಿದ್ಧವಾಗಿರುವ ಬಗ್ಗೆ ಸಂತೋಷವನ್ನು ಸೂಚಿಸಿ ವರು ಸಂಧಾನಕ್ಕೆ ಪೂರ್ವಭಾವಿಯಾಗಿ ಯಾವ ಷರತ್ತಿಗೂ ಮುಂಚೆಯೇ ಒಪ್ಪಬೇಕೆಂದು ಯಾರೊಬ್ಬರೂ ಕೇಳುವುದು ಸರಿಯಲ್ಲವೆಂದು ಅವರು ಸಹ ಮಾಡಿರುತ್ತಾರೆ.

ಗೋವಾ-ಭಾರತಗಳ ನಡುವೆ ರಹದಾರಿ ಮೂಲಕ ಸಂಚಾರ

ಭಾರತದಲ್ಲಿರುವ ಪೋರ್ಚುಗೀಸರ ಪ್ರದೇಶದಿಂದ ಭಾರತದ ನಡುವೆಗಳಿಗೆ ಬರುವವರು ರಹದಾರಿಯನ್ನು ಪಡೆದಿರಬೇಕೆಂಬ ನಿಬಂಧನೆಯನ್ನು ನಾಳೆಯಿಂದ ಜಾರಿಗೆ ತರಲಾಗುವುದು. ಗಡಿಯೊಳಗಿನಿಂದ ಕಳ್ಳತನದಲ್ಲಿ ಸಾಮಾನು ಸಾಗಿಸುವುದನ್ನು ತಡೆಯಲು ಈ ರೀತಿ ಮಾಡಲಾಗಿದೆ.

ಹಾವು ಕಡಿದು ಇಡೀ ಸಂಸಾರದ ಮರಣ

ಪೂರ್ವ ಪಾಕಿಸ್ತಾನದಲ್ಲಿ ಪ್ರವಾಹ ಪೀಡಿತವಾಗಿರುವ ಬಡಾಂಗಾಲ್ ಎಂಬ ಹಳ್ಳಿಯಲ್ಲಿ ಈ ವಾರದ ಆದಿಯಲ್ಲಿ ಒಂದು ದಿನ ವಲಗಿದ್ದ ದಂಪತಿಗಳು ಮತ್ತು ಅವರ ಏಕಮಾತ್ರ ಮಗುವನ್ನು ಹಾವು ಕಡಿದುದರಿಂದ ಎಲ್ಲರೂ ಒಟ್ಟಿಗೆ ಮೃತಪಟ್ಟರೆಂದು ಹೇಳಲಾಗಿದೆ.

ಕಾಲೇಜು ವಿದ್ಯಾರ್ಥಿಗಳಿಂದ ಪ್ರವಾಹದ ಪರಿಹಾರ ನಿಧಿ ಸಂಗ್ರಹ

ರಾಜಧಾನಿಯ ಮಹಾರಾಜಾ ಕಾಲೇಜಿನ ಸಮಾಜ ಸೇವಾ ಸಂಘದ ಕಾರ್ಯಕರ್ತರು ಶ್ರೀ [illegible] ರಾಮುನಾಚಾರ್ಯರ ನೇತೃತ್ವದಲ್ಲಿ ಪ್ರವಾಹ ಪೀಡಿತರ ಪರಿಹಾರಕ್ಕಾಗಿ ನಿಧಿಯನ್ನು ಸಂಗ್ರಹಿಸುತ್ತಿರುವರು. ಇಂದಿನಿಂದ [illegible] ನೇ ತಾ|| ವರೆಗೆ ಸಂಘದವರು ಸಂಗ್ರಹಿಸಿದ ಹಣವನ್ನು ಪ್ರಧಾನಿಯವರ ಪರಿಹಾರ ನಿಧಿಗೆ ಕಳಿಸುವರು. ನಗರದ ವರ್ತಕರು, ಉದಾರಿಗಳು ಮತ್ತು ಇತರರು ಸಹಾಯ ಮಾಡಬೇಕೆಂದು ಕೋರಲಾಗಿದೆ.

ಗಲ್ಲದ ಮೇಲೆ ಚಾಕು ಹಾಕಿ ಹಣ ಅಪಹರಿಸಿದವನಿಗೆ ಸಜಾ

ಹೈದರಾಬಾದಿನ [illegible] ಎಂಬುವನು ಈ ತಿಂಗಳು [illegible] ನೇ ತಾ|| ಸುಂದಿ ನೂಪಲ್ಲಿ [illegible] ಎಂಬುವರ ಅಂಗಡಿ ಗಲ್ಲದ [illegible] ಚಾಕವನ್ನು ಹಾಕಿ [illegible] ಗಳನ್ನು ಅಪಹರಿಸಿದನೆಂದು ಮುಂದೆ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಅಪರಾಧಿಗೆ [illegible] ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿರುವರು.

ಬ್ಯಾಂಕು ಶೀರ್ಷಿಕೆಯ ಬದಲಾವಣೆ ಬಗ್ಗೆ ನೆಹರೂ ಹೇಳಿಕೆ

ಪ್ರಧಾನಿ ನೆಹರೂರವರು ನೆನ್ನೆ ರಾಜ್ಯ ಸಭೆಯಲ್ಲಿ ಭಾಷಣ ಮಾಡಿ ಸರ್ಕಾರದ [illegible] ಪೂರ್ಣ ವಿವರಗಳಿಲ್ಲದಿಂದ, ಅನೇಕ ಬ್ಯಾಂಕುಗಳಿಗೆ ಹಕ್ಕು ಬರುವ ನಿರ್ಧಾರವನ್ನು ಕೈಗೊಳ್ಳಲು ಸರ್ಕಾರದವರು ಇಷ್ಟಪಡುದಿಲ್ಲವೆಂದೂ ಹೇಳಿದರು. ಬ್ಯಾಂಕು ನೌಕರರ ಒಂದು ವರ್ಷದ ಅವಧಿಯಲ್ಲಿ ಸರ್ಕಾರದ ಮುಂದೆ ಪೂರ್ತಿಯಾದ ವಿವರಗಳನ್ನಿಡಬೇಕೆಂದೂ, ಪಾರ್ಲಿಮೆಂಟ್ ಸಮಿತಿ ವರದಿಯ ಮೇರೆಗೆ ಸರ್ಕಾರದವರು ತನಿಖೆ ನಡೆಸಿ [illegible] ಅವಶ್ಯವಿದ್ದರೆ ಬೇರೊಂದು ನ್ಯಾಯಾಲಯವನ್ನು ರಚಿಸಿಯಾದರೂ ಪರಿಹಾರಕ್ಕೆ ಪ್ರಯತ್ನಿಸುವುದಾಗಿಯೂ ನೆಹರೂರವರು ಹೇಳಿದರು. ಈ ವಿವಾದದ ಬಗ್ಗೆ ಇನ್ನೂ ಅಂತಿಮ ತೀರ್ಮಾನವಾಗಿಲ್ಲವೆಂದೂ, ಈ ಮಧ್ಯೆ ಬ್ಯಾಂಕುಗಳು, ಈ ಪಕ್ಷಿಯನ್ನು ನೌಕರರೊಡನೆ ಪರಿಶೀಲಿಸಬೇಕೆಂದೂ, ಅದಕ್ಕೆ ಸರ್ಕಾರದ ಪ್ರೋತ್ಸಾಹವೂ ದೊರೆಯುವುದೆಂದೂ ಹೇಳಿದರು.

ಮೂವರು ಸಹೋದರಿಯರ ಆತ್ಮಹತ್ಯೆ

ಸೇಲಮ್ಮಿನ ಮಾಜಿ ಪೌರಸಭಾ ಸದಸ್ಯರಾದ ಕೆ. ಬಿ. ವೇಲಾಯುಟ್ಟಿಯವರ ಕುಟುಂಬಕ್ಕೆ ಸೇರಿದ ಸಿದ್ಧಮ್ಮಾಳ್, ಪಿಲಾನಮ್ಮಾಳ್ ಮತ್ತು ಸರಸ್ವತಿ ಎಂಬ ಅಕ್ಕತಂಗಿಯರು ಗೃಹಕೃತ್ಯದ ಜಗಳದ ಪರಿಣಾಮವಾಗಿ ವಿಷಪಾನ ಮಾಡಿ ಮೃತಪಟ್ಟಿರುತ್ತಾರೆ. ಮೊದಲನೇ ಇಬ್ಬರೂ ವಿವಾಹವಾಗಿದ್ದು, ಅವರುಗಳ ಗಂಡಂದಿರು ಅವರನ್ನು ಬಿಟ್ಟಿದ್ದರೆಂದೂ ಹೇಳಲಾಗಿದೆ.

ರಷ್ಯವು ಮೊದಲು ಶಸ್ತ್ರಾಸ್ತ್ರ ವಿಸರ್ಜಿಸಲೆಂದು ಅಟ್ಲಿ

ಪ್ರಪಂಚದಲ್ಲಿ ಶಸ್ತ್ರ ಸನ್ಯಾಸ ಮಾಡುವುದು ಉಚಿತವಾಗಿ ತೋರಿದರೆ ಮೊದಲು ರಷ್ಯವೇ ಅದಕ್ಕೆ ಮಾದರಿಯಾಗಬೇಕೆಂದು ರಷ್ಯಕ್ಕೆ ಸೂಚಿಸುವಂತೆ ಬ್ರಿಟನ್ನಿನ ಮಾಜಿ ಪ್ರಧಾನಿ ಅಟ್ಲಿಯವರು, ಚೀಣದ ಅಧ್ಯಕ್ಷ ಮಾವೋತ್ಸೆ ಟುಂಗ್ ರವರನ್ನು ಕೋರಿರುತ್ತಾರೆ.

ಮುಂದಿನ ತಿಂಗಳು ಚೀಣಕ್ಕೆ ನೆಹರೂ ಭೇಟಿ

ಪ್ರಧಾನಿ ನೆಹರೂರವರು ಇದೇ ಅಕ್ಟೋಬರ್ ಮಧ್ಯ ಭಾಗದಲ್ಲಿ ಚೀಣಕ್ಕೆ ಭೇಟಿ ಕೊಡುವರೆಂದು ತಿಳಿದುಬಂದಿದೆ. ಭಾರತಕ್ಕೆ ಇಂಡೋನೇಷ್ಯದ ಪ್ರಧಾನಿಯೂ ಸಹ ಭೇಟಿ ಕೊಡಲಿರುವರೆಂದು ಹೇಳಲಾಗುತ್ತಿದೆ.

ಸೇಲಂದಲ್ಲಿ ಹೈದರಾಬಾದು ಮುಖ್ಯ ಮಂತ್ರಿಯವರು

ಹೈದರಾಬಾದಿನ ಮುಖ್ಯ ಮಂತ್ರಿಯವರಾದ ಬಿ. ರಾಮಕೃಷ್ಣರಾಯರು ಸಂಸಾರ ಸಮೇತ ನೆನ್ನೆ ಬೆಂಗಳೂರಿನಿಂದ ನಗರಕ್ಕೆ ಆಗಮಿಸಿದರು. ಅವರು ಸರ್ಕಾರಿ ಭವನದಲ್ಲಿ ಇಳಿದುಕೊಂಡಿದ್ದು [illegible] ನಾಳೆ [illegible] ತೆರಳಲಿರುವರು.

ತಿರುವಾಂಕೂರು ಸರ್ಕಾರದ ರಾಜೀನಾಮೆಗೆ ಒತ್ತಾಯ

ಡಾ|| ರಾಮಮನೋಹರ ಲೋಹಿಯಾರವರು ನೆನ್ನೆ ಫರೂಕಾಬಾದಿನಲ್ಲಿ ಮಾತನಾಡುತ್ತಾ ಕೇರಳ ಸರ್ಕಾರದವರು ಕಾಂಗ್ರೆಸ್ಸು ಮಾಡುತ್ತಿರುವ ತಪ್ಪುಗಳನ್ನು ಮಾಡುತ್ತಿರುವರೆಂದೂ, ಆ ಸರ್ಕಾರಕ್ಕೆ ಸ್ವಾಗತವೇ ಇಲ್ಲವೆಂದೂ ಹೇಳುತ್ತಾರೆ. ಪ್ರಜಾ ಸಮಾಜವಾದಿ ಪಕ್ಷದ ಗುಲಾಮನಾಗಿದ್ದ ಅನ್ಯಾಯವನ್ನು ನೋಡುತ್ತಾ ಕುಳಿತುಕೊಳ್ಳಲು ತಮಗೆ ಸಾಧ್ಯವಿಲ್ಲವೆಂದೂ ಅವರು ತಿಳಿಸಿರುತ್ತಾರೆ. ತಾವು ಪಕ್ಷದಲ್ಲೇ ಇದ್ದುಕೊಂಡು ಅದರಲ್ಲಿ ಸುಧಾರಣೆ ಮಾಡುವುದಾಗಿಯೂ ಅವರು ನುಡಿದಿರುತ್ತಾರೆ. ತಿರುವಾಂಕೂರಿನಲ್ಲಿ ಪೊಲೀಸರು ಗುಂಡು ಹಾರಿಸಿರುವ ಬಗ್ಗೆ ಅವರು ತೀವ್ರವಾಗಿ ಆಕ್ಷೇಪಿಸಿರುತ್ತಾರೆ.

ತಿರುಪತಿ ವಿಶ್ವವಿದ್ಯಾಲಯದ ಆರಂಭ

ತಿರುಪತಿಯಲ್ಲಿ ನೆನ್ನೆ ಆಂಧ್ರದ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರವರ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯವನ್ನು ಆರಂಭಗೊಳಿಸಿದರು. ಇದು ಭಾರತದಲ್ಲಿನ [illegible] ನೆ ವಿಶ್ವವಿದ್ಯಾಲಯವಾಗಿದೆ. ಮೊದಲಿನ [illegible] ವರ್ಷ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆಗಿ ವಿಶ್ವವಿದ್ಯಾಲಯದ [illegible] ಆಂಧ್ರ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಅದರ ವ್ಯವಸ್ಥಾಪಕರಾಗಿರುತ್ತಾರೆ.

ಭಾರತದಿಂದ ೭ ಮಂದಿ ವಿದೇಶೀ ಪಾದ್ರಿಗಳ ಉಚ್ಚಾಟನೆ

ಆಕ್ಷೇಪಣೀಯವಾದ ವರ್ತನೆಗಾಗಿ ಅಮೆರಿಕದ ೪, ಇಟಲಿಯ ಇಬ್ಬರು ಮತ್ತು ಫ್ರಾನ್ಸಿನ ಒಬ್ಬ ಕ್ರೈಸ್ತ ಪಾದ್ರಿಗಳಿಗೆ ದೇಶಬಿಟ್ಟು ಹೋಗುವಂತೆ ಸೂಚಿಸಲಾಯಿತೆಂದು ಕೇಂದ್ರ ಉಪ ಗೃಹ ಮಂತ್ರಿ ಬಿ. ಎನ್. ದಾತಾರ್‌ರವರು ಹೇಳಿರುತ್ತಾರೆ. ಆಕ್ಷೇಪಣೀಯವಾದ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದ ಎಲ್ಲರ ಮೇಲೂ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುತ್ತಿದೆಯೆಂದೂ ಅವರು ಸೂಚಿಸಿರುವರು.

ಮನಿಲಾದಲ್ಲಿ ದಕ್ಷಿಣ ಕೊರಿಯಾದವನ ದಸ್ತಗಿರಿ

ಆಗ್ನೇಯ ಏಷ್ಯಾ ಸಮ್ಮೇಳನದ ರಹಸ್ಯ ವಿಷಯಗಳನ್ನು ತಿಳಿಯಲು ಕಮ್ಯೂನಿಸ್ಟರ ಗುಂಪಿಗೆ ಸೇರಿದ ದಕ್ಷಿಣ ಕೊರಿಯಾ ಸೈನ್ಯದ ವೈದ್ಯನೊಬ್ಬನನ್ನು ಫಿಲಿಪೈನ್ ಸೈನ್ಯದ ಸಿ.ಐ.ಡಿ.ಯವರು ದಸ್ತಗಿರಿ ಮಾಡಿರುತ್ತಾರೆ. ಆತನು ಒಬ್ಬ ಫಿಲಿಪೈನ್ ಅಧಿಕಾರಿಯಿಂದ ಮುಖ್ಯವಾದ ಪತ್ರಗಳನ್ನು ಪಡೆಯುತ್ತಿದ್ದಾಗ ದಸ್ತಗಿರಿ ಮಾಡಲಾಯಿತು. ಈ ಗೂಢಚರ್ಯೆ ಬಗ್ಗೆ ಇತರರ ದಸ್ತಗಿರಿಯಾಗುವ ಸಂಭವವಿದೆ.

ಜಿಲ್ಲಾ ಕಾಂಗ್ರೆಸ್ ಮತದಾರರ ಪಟ್ಟಿ

ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಪ್ರಕಟವಾಗಿರುವ ಮತದಾರರ ಪಟ್ಟಿಯ ಮೇಲೆ ಆಕ್ಷೇಪಣೆಗಳನ್ನು ಕಳುಹಿಸುವ ಅವಧಿಯನ್ನು ನಾಳೆಯವರೆಗೆ ಹೆಚ್ಚಿಸಲಾಗಿದೆಯೆಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕ್ರೆಮ್ಲಿನ್ ಭವನದಿಂದ ಬೇರೆ ಕಡೆಗೆ ಸರ್ಕಾರದ ಕಛೇರಿ ವರ್ಗ

ರಷ್ಯದ ರಾಜಧಾನಿ ಮಾಸ್ಕೋವಿನಲ್ಲಿರುವ ಸುಪ್ರಸಿದ್ಧ ಕ್ರೆಮ್ಲಿನ್ ಕೋಟೆಯಿಂದ ರಷ್ಯದ ಸರ್ಕಾರಿ ಕಛೇರಿಯನ್ನು ವರ್ಗಾಯಿಸಲಾಗುವುದು. ಈ ಪುರಾತನವಾದ ಕೋಟೆಯನ್ನು ರಷ್ಯದ ಇತಿಹಾಸ ಮತ್ತು ಸಂಸ್ಕೃತಿಯ ಚಿಹ್ನೆಯಾಗಿ ಉಳಿಸಲಾಗುವುದು.

ಲಾರಿ ಅಪಘಾತದಲ್ಲಿ ಯು. ಎಲ್. ರಾಮಚಂದ್ರರಾಯರಿಗೆ ಪೆಟ್ಟು

ರಾಜಧಾನಿಯ ಪೌರಸಭಾ ಸದಸ್ಯರಾದ ಶ್ರೀ ಯು. ಎಲ್. ರಾಮಚಂದ್ರರಾಯರು ಕಳೆದ ಮಂಗಳವಾರ ತಮ್ಮ ಮೋಟಾರಿನಲ್ಲಿ ಬೆಂಗಳೂರಿಗೆ ಹೋಗುತ್ತಿದ್ದಾಗ ಮಂಡ್ಯದ ಬಳಿ ಅವರ ವಾಹನಕ್ಕೂ ಸಕ್ಕರೆ ಕಂಪನಿ ಲಾರಿಗೂ ಡಿಕ್ಕಿಯಾಗಿ ಕಾರು ಮೂರು ಉರುಳಾಗಿ ಉರುಳಿತೆಂದೂ ಶ್ರೀ ರಾಮಚಂದ್ರರಾಯರಿಗೂ, ಅದೇ ಗಾಡಿಯಲ್ಲಿದ್ದ ಅವರ ಪತ್ನಿ ಮತ್ತು ಒಬ್ಬ ವಕೀಲರಿಗೂ ಗಾಯವಾಯಿತೆಂದೂ ಹೇಳಲಾಗಿದೆ. ದಂಪತಿಗಳಿಬ್ಬರನ್ನೂ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ. ವಕೀಲ ಶ್ರೀ ಸಂಪತ್ತಯ್ಯಂಗಾರ್ಯರಿಗೆ ಮೂಗಿನ ಹತ್ತಿರ ಗಾಯವಾಗಿದೆ. ಲಾರಿ ಡ್ರೈವರನನ್ನು ಬಂಧಿಸಲಾಗಿದೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯ ಸಂಘದ ಆರಂಭೋತ್ಸವ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೫ ಘಂಟೆಗೆ ಶಾರದಾ ವಿಲಾಸ [illegible] ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಂಪಿಗೆ ವೆಂಕಟಪತಯ್ಯನವರು ಮಾಡುವರು. ಪೌರಸಭಾ ಅಧ್ಯಕ್ಷರಾದ ಶ್ರೀ ಎನ್. ಲಕ್ಷ್ಮಣರಾವ್‌ರವರು ಅಧ್ಯಕ್ಷತೆ ವಹಿಸುವರು.

ಆಟೋ ರಿಕ್ಷಾದಲ್ಲಿ ಮುಖ್ಯ ಮಂತ್ರಿಯವರು ಕುಳಿತರು

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮತ್ತು ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ನೆನ್ನೆ ಬೆಂಗಳೂರಿನಲ್ಲಿ ಒಂದು ಆಟೋ ರಿಕ್ಷಾದಲ್ಲಿ ಕುಳಿತು ಕುಮಾರ ಕೃಪಾಕ್ಕೆ ತೆರಳಿದರು. ಚಕ್ಕ ಮೋಟಾರ್ ನೋಡಿ ರಿಕ್ಷಾ ವಿನವನಿಗೆ ಬಂಡಿಗೆ [illegible] ಕೊಟ್ಟರು.

ವಿದ್ಯಾ ಗಣಪತಿ ಪೂಜೆ

ರಾಜಧಾನಿಯ ಜವಳಿ ವರ್ತಕರಾದ ಶ್ರೀ ಕೆ. ರಾಮೇಗೌಡರು ನೆನ್ನೆ ಇಲವಾಲ ರಸ್ತೆಯಲ್ಲಿರುವ ತಮ್ಮ ಹೊಸ ಅಂಗಡಿಯಲ್ಲಿ ಶ್ರೀ ವಿದ್ಯಾ ಗಣಪತಿ ಪೂಜೆಯನ್ನು ನೆರವೇರಿಸಿ ಇಷ್ಟ ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು.

ನಗರದ ಮಂಡಿ ಮೊಹಲ್ಲಾ ಕೆ. ಆರ್. ಆಸ್ಪತ್ರೆ ರಸ್ತೆಯ [illegible] ನೇ ನಂಬರು ಮಳಿಗೆಯಲ್ಲಿ ಏರ್ಪಡಿಸಲಾಗಿರುವ ಮಹಾ ಗಣಪತಿ ಪೂಜೆ ಸಂಬಂಧದಲ್ಲಿ ಈ ಸಂಜೆ ೭ ಗಂಟೆಗೆ ವಿ|| ಅವಧಾನಿಯವರ ಗಾಯನವೂ ವಿ|| ಎಂ. ಆರ್. ಆಸಂದಸ್ವಾಮಿಯವರ ಪ್ರಸಂಗ ಮತ್ತು ಎಂ. ಪಿ. ವಿ. ಶಟಸ್ವರವರ ಪಿಟೀಲು ವಾದನ ಏರ್ಪಾಡಾಗಿದೆ. ಪೌರಸಭಾ ಸದಸ್ಯರಾದ ಶ್ರೀ ಬಿ. ಎನ್. [illegible] ಅಧ್ಯಕ್ಷತೆ ವಹಿಸುವರು.

ಬೀಡಿ ಕಾರ್ಖಾನೆ ಬಳಿ ಅಜೀಜ್ ಸೇಠರ ಉಪವಾಸ

ಮೈಸೂರು, ೨

ರಾಜ್ಯದ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಅಜೀಜ್ ಸೇಠರವರು ಬೀಡಿ ಕಾರ್ಮಿಕರ ಬೇಡಿಕೆಗಳಿಗೆ ಸಂಬಂಧಿಸಿದಂತೆ ಉಪವಾಸವನ್ನು ಕೈಗೊಂಡರು. [illegible]

ಆರಂಭ ಭಾಷಣ

[illegible]

ಸಂಸ್ಕೃತ ಕಾಲೇಜಿನಲ್ಲಿ ಉಪನ್ಯಾಸಗಳು ಮತ್ತು ಸಂಗೀತ

ರಾಜಧಾನಿಯ ಶ್ರೀ ಮನ್ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ವಿದ್ಯಾ ಗಣಪತಿ ಸಭೆಯವರು ಗಣಪತಿ ಮಂಗಳೋತ್ಸವದ ಅಂಗವಾಗಿ [illegible]

ಕುರುಗನಹಳ್ಳಿಯಲ್ಲಿ ಗಣಪತಿ ಪೂಜೆ

[illegible]

ಕೋಟೆಯಲ್ಲಿ ದೇವರುಗಳ ಉತ್ಸವ

[illegible]

ದಳವಾಯಿಯರ ಶಾಲೆಯ ಕಟ್ಟಡದ ಶಂಕುಸ್ಥಾಪನೆ

ರಾಜಧಾನಿಯ ದಳವಾಯಿಯರ ಶಾಲೆಯ [illegible]

ಸಂಸ್ಥಾನದಲ್ಲಿ ೫ ಲಕ್ಷ ರೂ ಖಾದಿ ಮಾರಾಟಕ್ಕೆ ವ್ಯವಸ್ಥೆ

[illegible]

ಬಾಲಿಕನ ಅಪಹರಣ ಮತ್ತು ಕೊಲೆಗಾಗಿ ಮರಣ ದಂಡನೆ

[illegible]

ವಿಶೇಷ ವಿವಾಹದ ವಯಸ್ಸಿನ ಮಿತಿ ಪುನಃ ೧೮ ಕ್ಕೆ ಇಳಿಯಿತು

[illegible]

ಬೋಗಸ್ ನೋಟುಗಳ ತಯಾರಕರು ಶಿಕ್ಷಾರ್ಹರು

ಭಾರತದ ಕೆಲವು ಪ್ರದೇಶಗಳಲ್ಲಿ ಕರೆನ್ಸಿ ಹಾಗೂ ಬ್ಯಾಂಕ್ ನೋಟುಗಳನ್ನು ಫೋಟೋ ಪ್ರಿಂಟ್ ಅಥವಾ ಇತರ ರೀತಿಯಿಂದ [illegible]

ಆರಂಭ ಭಾಷಣ

[illegible]

ಗೃಹಕೃತ್ಯದ ನೋಟೀಸ್

[illegible] 599 ನೇ [illegible]

ಮುಸ್ಲಿಂ ಲೀಗಿನಲ್ಲಿ ತೀವ್ರ ಒಡಕು

[illegible]

ವಿಶೇಷ ವಿವಾಹ ಶಾಸನಕ್ಕೆ ಮಹಿಳೆಯರ ಒತ್ತಾಯ

[illegible]

ದಸರಾ ವಸ್ತು ಪ್ರದರ್ಶನದ ಕಲಾ ಸಮಿತಿಯ ಬಗ್ಗೆ ಟೀಕೆ

[illegible]

ನಗರದಲ್ಲಿ ಕಳ್ಳತನದ ಬಗ್ಗೆ ಪೊಲೀಸರ ವರದಿ

[illegible]

SRI GAYATHRI
TALKIES
TO DAY & TO MORROW
WEST OF ZANZIBAR
(Technicolor)
With – Anthony Steele
— NEXT CHANGE —
MOULIN ROUGE
(Technicolor)
With Jose Ferrer

ಜಾತಕ-ಪ್ರಶ್ನೆ-ಹಸ್ತಸಾಮುದ್ರಿಕ
(ASTRO PALMISTRY)
H ಪಿ ವೆಂಕಟರಾವ್, B A B L
ಶ್ರೀಕೃಷ್ಣಮಿತ್ರ ಜ್ಯೋತಿಷ್ಯಾಲಯ
1329, ಕೃಷ್ಣಮೂರ್ತಿಪುರಂ, ಮೈಸೂರು
8-10 A M 5 6 30 P M
[illegible] 8 11 A M 3 30 6 P M

ಮಂತ್ರಿಮಂಡಲದ ಸಭೆಗೆ ವಿ. ವಿ. ಗಿರಿ ಹೋಗಿದ್ದರು

ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿ ವಿ ವಿ ಗಿರಿಯವರು ಮೊನ್ನೆ ಮಂತ್ರಿಮಂಡಲ ಸಭೆಗೆ ಹೋಗಿದ್ದರು ಅವರ ರಾಜೀನಾಮೆ [illegible] ಪ್ರಧಾನಿ ನೆಹರೂರವರು ಇದುವರೆ ಗಿರಿಯವರಿಗೆ ಯಾವ ಪತ್ರವನ್ನೂ ಬರೆದಿಲ್ಲ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆ ಪೈ	ರೂ
[illegible]	[illegible]	[illegible]
ಎಳ್ಳು	[illegible]	[illegible]
[illegible]	[illegible]	
[illegible]	[illegible]	[illegible]
[illegible]	[illegible]	
[illegible]	[illegible]	
[illegible]	[illegible]	[illegible]
[illegible]	[illegible]	
[illegible]	[illegible]	
[illegible]	[illegible]	
[illegible]	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಶ್ರೀರಂಗಪಟ್ಟಣದ ರೈತರಿಗೆ ೧೧,೦೦೦ ರೂ ಅಲ್ಪಾವಧಿ ಸಾಲ

[illegible]

ಜೇಬುಗಳ್ಳನಿಗೆ ಶಿಕ್ಷೆ

[illegible]

B A.B. NEWSPAPER STALL
Ol[illegible] Square
MYSORE
Wish to inform that the SQUAREWORD HAND DELIVERY BOX No 83 is installed at the shop premises Competitors are requested kindly to drop in their entries in the same Entry forms can be had free Cash Vouchers also available

SREE GANESH
TALKIES
From 4 9-64 for 3 days
Columbia's
THE LOST POSSE
Starring Broderick Crawford
John Derek Charles Bickford
and Wanda Hendrix
With All The Greatness of The Great South

Edited Printed and Published by A R Nagarajan at Sadhvi Press, D.Subbiah Road, Mysore

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿ ಪ್ರತಿ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಪುಟ ೧೮] SADHVI SATURDAY 4-9-1954 ಮೈಸೂರು ಶನಿವಾರ ೪-೯-೧೯೫೪ [ಸಂಚಿಕೆ ೫೦

ಗೋವಾ ಚಳುವಳಿ ದಮನಕ್ಕೆ ಸ್ಪೇನ್ ಮತ್ತು ಬ್ರೆಜಿಲ್ ಸೈನ್ಯ

ಶ್ರೀಮನ್ಮಹಾರಾಜರ ಪಟ್ಟಾಭಿಷೇಕ ದಿನೋತ್ಸವ

ಮೈಸೂರು ೪

ಶ್ರೀಮನ್ಮಹಾರಾಜರ ೧೫ನೇ ಪಟ್ಟಾಭಿಷೇಕೋತ್ಸವದ ಅಂಗವಾಗಿ ಈ ದಿನ ಬೆಳಿಗ್ಗೆ ಅರಮನೆ ಬತೇರಿಯಿಂದ ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು. ಅನೇಕ ದೇವಾಲಯಗಳಲ್ಲಿ ವಿಶೇಷ ಸೇವೆಗಳು ನಡೆದುವು. ಅರಮನೆ ನೌಕರರು ಜಗನ್ಮೋಹನ ಬಂಗ್ಲೆಯಲ್ಲಿ ಒಂದು ಸಮಾರಂಭವನ್ನು ಸರ್ದಾರ್ ಮದನ ಗೋಪಾಲರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಅ|| ವಿ|| ಬಿ ದೇವೇಂದ್ರಪ್ಪನವರ ಸಂಗೀತವು ನಡೆಯಿತು. ಶ್ರೀಮನ್ಮಹಾರಾಜರಿಗೆ ಶುಭವನ್ನು ಕೋರುವ ನಿರ್ಣಯವನ್ನು ಮಾಡಲಾಯಿತು. ಶ್ರೀ ಶಿವನಂಜಯ್ಯನವರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಕ್ತಾಯವಾಯಿತು.

ಟೆನಿಸ್ ಟೂರ್ನಮೆಂಟ್

ರಾಜಧಾನಿಯ ಸಿಟಿ ಇನ್ಸ್ಟಿಟ್ಯೂಟಿನ ಆಶ್ರಯದಲ್ಲಿ ನಡೆಯುವ ಅಂತರ ಕ್ಲಬ್ಬುಗಳ ಟೆನಿಸ್ ಚಾಂಪಿಯನ್ ಷಿಪ್ ಪಂದ್ಯಗಳಲ್ಲಿ ೧೨ ಟೀಮುಗಳು ಭಾಗವಹಿಸಲಿವೆ. ಪಂದ್ಯಗಳ ನಾಳೆ ಮಧ್ಯಾಹ್ನ ೩ ಘಂಟೆಯಿಂದ ಆರ್ ಬಿ ಎ ಬಿ ಸಿ ರೈಲ್ವೆ ಇನ್ಸ್ಟಿಟ್ಯೂಟ್ ಮತ್ತು ಗಾರ್ಡ್ ಕ್ರೀಡಾಂಗಣಗಳಲ್ಲಿ ಆರಂಭವಾಗುವುವು

ಗಣಪತಿ ಮಂಗಳೋತ್ಸವ ಕಾರ್ಯಕ್ರಮ

ರಾಜಧಾನಿಯ ಶಿವ ಪ್ರಸಾದಾಲಯದ ಸಂಸ್ಕೃತ ವೇದ ಪಾಠಶಾಲೆಯ ಶ್ರೀ ವಿದ್ಯಾಗಣಪತಿ ಸಭೆಯಲ್ಲಿ ಈ ಸಂಜೆ ೬ ಘಂಟೆಗೆ ಗಮಕ ಕಲಾಕೋವಿದ ಶ್ರೀ ಮಾರ್ಲೆ ಸುಬ್ರಹ್ಮಣ್ಯ ಶಾಸ್ತ್ರಿಗಳು ವೇದಾಂತ ಬ್ರಹ್ಮಾನಂದ ಬೋಧೆಯ ಕೆಲವು ಭಾಗಗಳ ವಾಚನ ಮಾಡುವರು. ಶ್ರೀ ಬಿ ಎಸ್. ವೆಂಕಟರಾಮಯ್ಯನವರು ಅವುಗಳ ಅರ್ಥವನ್ನು ವಿವರಿಸುವರು. ನಾಳೆ ಸಂಜೆ ಪಾಠಶಾಲಾ ಪಂಡಿತರುಗಳಿಂದ ವಾಕ್ಯಾರ್ಥವು ನಡೆಯುವುದು.

ರಾಜಧಾನಿಯ ಇಲವಾಲ ರಸ್ತೆಯಲ್ಲಿರುವ ಕುಂಚಿಟಿಗರ ವಿದ್ಯಾರ್ಥಿ ನಿಲಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ಶ್ರೀ ಗಣಪತಿ ಮಂಗಳಾರತಿಯನ್ನು ನಿವೃತ್ತ ಅಸಿಸ್ಟೆಂಟ್ ಕಮಿಷನರ್ ಶ್ರೀ ಎಂ ಪುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಹಾರಾಜಾ ಕಾಲೇಜಿನ ಅ|| ಪ್ರೊ|| ವಿ ಮುದ್ದಲಿಂಗಣ್ಣನವರಿಂದ ಉಪನ್ಯಾಸವೂ ಗ|| ವಿ|| ಬಿ ಎಸ್ ಎಸ್ ಕೌಶಿಕ್ ಮತ್ತು ವೆಂಕಟೇಶ ಬ್ಯಾನವರಿಂದ ಕಾವ್ಯ ವಾಚನವೂ ನಡೆಯುತ್ತವೆ.

ರಾಷ್ಟ್ರಾಧ್ಯಕ್ಷರಿಂದ ಬೆಳಗಾಂ ರಾಜರ ಪ್ರತಿಮೆ ಅನಾವರಣ

ಬೆಳಗಾಂನ ಮಾಜಿ ರಾಜರ ಪ್ರತಿಮೆಯ ಅನಾವರಣಕ್ಕಾಗಿ ಅಲ್ಲಿಗೆ ತೆರಳಿದ್ದ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆನ್ನೆ ವಿಮಾನದಲ್ಲಿ ದೆಹಲಿಗೆ ಹಿಂದಿರುಗಿದರು. ಬೆಳಗಾಂನಲ್ಲಿ ನೆನ್ನೆ ರಾಷ್ಟ್ರಾಧ್ಯಕ್ಷರ ಮೆರವಣಿಗೆಯು ಬಹಳ ವೈಭವದಿಂದ ಜರುಗಿತು

ತುಂಗಭದ್ರಾ ಪ್ರದೇಶದ ಅಭಿವೃದ್ಧಿ

ಸಲಹಾ ಸಮಿತಿಯ ಶಿಫಾರಸುಗಳು

ಸ್ವಂ ಸು ಪ್ರೋ] ಬೆಂಗಳೂರು ೪

ತುಂಗಭದ್ರಾ ಅಣೆಕಟ್ಟಿನ ಪ್ರದೇಶದ ಅಭಿವೃದ್ಧಿ ಬಗ್ಗೆ ಕೇಂದ್ರ ಯೋಜನಾ ಸಮಿತಿಯ ಶ್ರೀ ಎಸ್ ವಿ ರಾಮಮೂರ್ತಿ ಯವರ ಅಧ್ಯಕ್ಷತೆಯಲ್ಲಿ ನೇಮಿಸಿರುವ ಸಮಿತಿಯು ಈ ದಿನ ಅರಾರಂ ಕಛೇರಿಯಲ್ಲಿ ಸಭೆ ಸೇರಿ ಈ ಸಂಬಂಧವಾಗಿ ರಚಿತವಾಗಿದ್ದ ಉಪ ಸಮಿತಿಗಳ ವರದಿಗಳನ್ನು ಪರಿಶೀಲಿಸಿತು. ಪ್ರದೇಶದ ಕೈಗಾರಿಕಾಭಿವೃದ್ಧಿ ... ಸಾಧನಗಳನ್ನು ಒದಗಿಸಬೇಕು ಸಂಚಾರ ವ್ಯವಸ್ಥೆಯನ್ನು ಉತ್ತಮ ಪಡಿಸಬೇಕು ಮತ್ತು ಮಾದರಿ ವ್ಯವಸಾಯ ಕ್ಷೇತ್ರಗಳನ್ನು ನಿರ್ಮಿಸಬೇಕು-ಎಂಬ ಶಿಫಾರಸುಗಳನ್ನೂ ... ಸಮಿತಿಯು ಮಾಡಿತು.

ವಿಧವೆಯರೊಡನೆ ಮಾತ್ರ ವಿಧುರರ ವಿವಾಹ

ಲೋಕ ಸಭೆಯಲ್ಲಿ ಖಾಸಗಿ ಮಸೂದೆ

ಮಧ್ಯ ಪ್ರದೇಶದಿಂದ ಲೋಕ ಸಭೆಗೆ ಕಾಂಗ್ರೆಸ್ ಸದಸ್ಯರಾಗಿರುವ ಶ್ರೀ ಖೂಬ್‌ಚಂದ್ ಎಂಬುವರು ನೆನ್ನೆ ಸಭೆಗೆ ವಿಧುರರು ವಿಧವೆಯರನ್ನು ಮಾತ್ರ ವಿವಾಹವಾಗುವಂತೆ ಸೂಚಿಸುವ ಮಸೂದೆಯೊಂದನ್ನು ಮಂಡಿಸಿದರು. ವಿಧುರರು ಮತ್ತು ವಿಧವೆಯರು ಎಂಬ ಪದಗಳ ವ್ಯಾಪ್ತಿಯಲ್ಲಿ ವಿವಾಹ ವಿಚ್ಛೇದನ ಹೊಂದಿರುವವರನ್ನೂ ಸೇರಿಸಲಾಗಿದೆ.

ವರದಕ್ಷಿಣೆ ಕೊಡುವುದನ್ನು ತಡೆಯುವ ಬಗ್ಗೆ ಮಸೂದೆಯೊಂದರ ಕರಡನ್ನು ಪರಿಶೀಲಿಸಲಾಗುತ್ತಿದೆಯೆಂದೂ ಸಾಧ್ಯವಾದರೆ ಆ ಮಸೂದೆಯನ್ನು ಈಗಿನ ಅಧಿವೇಶನದಲ್ಲೇ ಮಂಡಿಸಲಾಗುವುದೆಂದೂ ನ್ಯಾಯಾಂಗ ಸಚಿವ ಶ್ರೀ ಸಿ ಬಿಸ್ವಾಸ್‌ರವರು ನೆನ್ನೆ ಲೋಕ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದರು

ತಮಿಳುನಾಡು ಕಾಂ|| ಅಧ್ಯಕ್ಷರಾಗಿ ಕರಲಯಾರರ ಆಯ್ಕೆ

ತಮಿಳ ನಾಡು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಎಲ್ ಎಸ್ ಕರಲಯಾರರ ಸರ್ವಾನುಮತದಿಂದ ಆರಿಸಲ್ಪಟ್ಟಿರುತ್ತಾರೆ. ಅವರ ಹೆಸರನ್ನು ಡಾ|| ಪಿ ವರದರಾಜುಲುನಾಯ್ಡುರವರು ಸೂಚಿಸಿ ಭಕ್ತವತ್ಸಲಂರವರು ಅನುಮೋದಿಸಿದ್ದರು. ಕಾಮರಾಜ ನಾಡಾರರು ಮುಖ್ಯ ಮಂತ್ರಿಗಳಾದನಂತರ ಅವರ ಸ್ಥಾನವು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ...

ಕ್ವಿಮಾಯ್ ದ್ವೀಪಗಳ ಮೇಲೆ ಕಮ್ಯೂನಿಸ್ಟ್ ಚೀಣರ ಧಾಳಿ

ರಾಷ್ಟ್ರೀಯ ಚೀಣರ ವಶದಲ್ಲಿರುವ ಕ್ವಿಮಾಯ್ ದ್ವೀಪಗಳ ಮೇಲೆ ನೆನ್ನೆ ಕಮ್ಯೂನಿಸ್ಟ್ ಚೀಣರು ೫ ಘಂಟೆಗಳ ಕಾಲ ಬಾಂಬು ಮತ್ತು ಫಿರಂಗಿ ಗುಂಡುಗಳನ್ನು ಸುರಿಸಿ ಧಾಳಿ ನಡೆಸಿದರೆಂದು ರಾಷ್ಟ್ರೀಯ ಚೀಣರ ಇದನ್ನು ಎದುರಿಸಿದರೆಂದು ವರದಿಯಾಗಿದೆ

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಗೆ ೪೦ ಜನ ಮಾತ್ರ

ಹೆಚ್ ಕೆ ವೀರಣ್ಣಗೌಡರು ಭಾಗವಹಿಸಿಲ್ಲ

ಸ್ವಂ ಸ ಪ್ರೋ] ಬೆಂಗಳೂರು ೪

ತುಂಗಭದ್ರೆಯಲ್ಲಿ ಇಂದು ಮತ್ತು ನಾಳೆ ನಡೆಯಲಿರುವ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಗೆ ೪೦ ಜನ ಸದಸ್ಯರು ಮಾತ್ರ ಹೋಗಿರುವರೆಂದು ವರದಿಯಾಗಿದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡರು ಸಭೆಗೆ ಹೋಗಿಲ್ಲ

ಹೊಸ ಮಾದರಿಯ ರಶೀತಿ ಸ್ಟ್ಯಾಂಪುಗಳು

ಸಂಸ್ಥಾನ ಸರ್ಕಾರವು ಇಂದಿನಿಂದ ಎಲ್ಲಾ ಖಜಾನೆಗಳಲ್ಲೂ ಹೊಸ ಮಾದರಿಯ ರಶೀತಿ ಸ್ಟ್ಯಾಂಪುಗಳನ್ನು ಜನರಿಗೆ ಕೊಡಲು ಆಜ್ಞೆ ಮಾಡಿರುವರು

ಸಂಸ್ಕೃತಿ ಪ್ರಚಾರ ಸಮಿತಿಗೆ ಒಂದು ವರ್ಷ ಜೀವದಾನ

ಸಂಸ್ಥಾನ ಸರ್ಕಾರದವರು ಸಂಸ್ಕೃತಿ ಪ್ರಚಾರಕ್ಕಾಗಿ ರಚಿಸಿದ್ದ ವಿಶೇಷ ಸಮಿತಿಗೆ ಇದೇ ಜುಲೈ ತಿಂಗಳಿನಿಂದ ಒಂದು ವರ್ಷ ಜೀವದಾನ ಕೊಟ್ಟಿರುವರಲ್ಲದೆ ಮೈಸೂರಿನ ಡಾ|| ಎ ಎಲ್ ನರಸಿಂಹಯ್ಯ ಮತ್ತು ಬಳ್ಳಾರಿಯ ಎ|| ವಿ|| ನಾಗರಾಜರಾವ್ ಅವರನ್ನು ಹೆಚ್ಚಿನ ಸದಸ್ಯರಾಗಿ ನಾಮಕರಣ ಮಾಡಿರುವರು

ರೈಲು ಅಪಘಾತದಲ್ಲಿ ೬೦ ಜನರ ಮರಣ

ಮಧ್ಯ ಫಿಲಿಪ್ಪೈನಿನ ಫಬ್ರಿಕ ಎಂಬ ಊರಿನಲ್ಲಿ ನೆನ್ನೆ ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ಒಂದು ರೈಲು ಭಾರಿ ಕಂದಕವೊಂದರ ಬಳಿ ಹಳಿ ತಪ್ಪಿ ರೈಲಿನಲ್ಲಿದ್ದ ಜನರು ಕಂದಕಕ್ಕೆ ಬಿದ್ದು ಅವರ ಮೇಲೆ ಮರದ ದಿಮ್ಮಿಗಳು ಬಿದ್ದ ಪರಿಣಾಮವಾಗಿ ೬೦ ಜನರು ಮೃತಪಟ್ಟರೆಂದೂ ೩೦ ಜನರಿಗೆ ಗಾಯವಾಗಿದೆಯೆಂದೂ ವರದಿಯಾಗಿದೆ. ದಿಮ್ಮಿಗಳ ನಡುವೆ ಇನ್ನೂ ಅನೇಕ ಶವಗಳು ದೊರೆಯಬಹುದೆಂದು ಊಹಿಸಲಾಗಿದೆ

ಚೀಣದಲ್ಲಿ ನೆಹರೂರವರ ೧೫ ದಿನಗಳ ಪ್ರವಾಸ

ಚೀಣಾ ಸರ್ಕಾರದ ಆಹ್ವಾನದ ಮೇಲೆ ಬರುವ ತಿಂಗಳು ತಾವು ಅಲ್ಲಿಗೆ ಸೌಹಾರ್ದ ಭೇಟಿಯಿತ್ತು ೧೫ ದಿನಗಳ ಕಾಲ ಪ್ರವಾಸ ಕೈಗೊಳ್ಳುವುದಾಗಿ ಪ್ರಧಾನಿ ನೆಹರೂರವರು ನೆನ್ನೆ ರಾಜ್ಯ ಸಭೆಯಲ್ಲಿ ತಿಳಿಸಿದರು.

ಬೀಡಿ ಕೆಲಸಗಾರರಿಗೆ ಸಹಾನುಭೂತಿ

ಮೈಸೂರು ಅಡಿಗೆ ಮತ್ತು ಬಟ್ಟೆಯ ಕಾರ್ಖಾನೆಯ ಕೆಲಸಗಾರರ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಹೇಳಿಕೆಯೊಂದನ್ನಿತ್ತು, ರಾಜಧಾನಿಯಲ್ಲಿ ಕಳೆದ ೬ ದಿನಗಳಿಂದ ನಡೆಯುತ್ತಿರುವ ಬೀಡಿ ಕೆಲಸಗಾರರ ಮುಷ್ಕರವನ್ನು ಮತ್ತು ಆ ಸಂಘದ ಅಧ್ಯಕ್ಷ ಶ್ರೀ ಅಜೀಜ್ ಸೇಟರ ಉಪವಾಸವನ್ನೂ ಮುಕ್ತಾಯಗೊಳಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಿರುತ್ತಾರೆ

ಆಡಳಿತ ಕಛೇರಿಯ ಕಾರ್ಯ ದಕ್ಷತೆ ಉತ್ತಮಗೊಳ್ಳಲಿ

ಅಧಿಕಾರಿಗಳಿಗೆ ಮುಖ್ಯ ಮಂತ್ರಿಯವರ ಸೂಚನೆ?

ಸ್ವಂ ಸು ಪ್ರೋ] ಬೆಂಗಳೂರು ೪

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಆಡಳಿತ ಕಛೇರಿಯ ಅಧಿಕಾರಿಗಳಿಗೆ ಸೂಚನೆಯೊಂದನ್ನು ಕಳುಹಿಸಿ ಕಛೇರಿಯ ಕಾರ್ಯದಕ್ಷತೆಯು ಕಡಿಮೆಯಾಗುತ್ತಿರುವುದು ಮತ್ತು ಕಾಗದ ಪತ್ರಗಳ ವಿಲೇವಾರಿಯು ತಡವಾಗುತ್ತಿರುವುದನ್ನು ಸರಿಪಡಿಸುವಂತೆ ತಿಳಿಸಿರುವರೆಂದು ಗೊತ್ತಾಗಿದೆ

★ ಮುಖ್ಯ ಮಂತ್ರಿಯವರ ಮೇಲೆ ಹೂಡಲಾಗಿರುವ ಕಂಟೆಂಪ್ಟ್ ಆಫ್ ಕೋರ್ಟ್ ಮೊಕದ್ದಮೆಯು ನಾಳೆ ಹೈಕೋರ್ಟಿನಲ್ಲಿ ಶ್ರೀಮನ್ ನ್ಯಾಯಾಧೀಶ ಶ್ರೀ ಮಲ್ಲಪ್ಪ ಮತ್ತು ಶ್ರೀ ಟಿ ಎನ್ ಮಲ್ಲಪ್ಪನವರ ಮುಂದೆ ವಿಚಾರಣೆಗೆ ಬರಲಿದೆ

★ ಹೈದರಾಬಾದ ಮುಖ್ಯ ಮಂತ್ರಿ ಶ್ರೀ ಬಿ ರಾಮಕೃಷ್ಣರಾಯರು ಈ ದಿನ ರಾಜಧಾನಿಯಿಂದ ಇಲ್ಲಿಗೆ ಆಗಮಿಸಿದರು. ನಾಳೆ ಅವರು ಇಲ್ಲಿಂದ ಪ್ರಯಾಣ ಮಾಡುವರು

ಗೋವಾ ಚಳುವಳಿ ದಮನಕ್ಕೆ ವಿದೇಶೀ ಸೈನ್ಯಗಳು

ಗೋವಾವನ್ನು ಭಾರತದೊಡನೆ ಐಕ್ಯಗೊಳಿಸುವ ಬಗ್ಗೆ ಅಲ್ಲಿ ನಡೆಯುತ್ತಿರುವ ಚಳುವಳಿಯನ್ನು ದಮನ ಮಾಡಲು ವಿದೇಶಗಳಿಂದ ಸುಮಾರು ೧೫,೦೦೦ ಸೈನಿಕರನ್ನು ಕರೆಸಿ ಗೋವಾದಲ್ಲಿ ಇಡಲಾಗಿರುವುದೆಂದೂ, ಬ್ರೆಜಿಲ್ ಮತ್ತು ಸ್ಪೇನುಗಳಿಂದ ಈ ಕಾರ್ಯಕ್ಕಾಗಿ ೫೦೦ ಮಂದಿ ಸ್ವಯಂಸೇವಕರನ್ನು ಹೊತ್ತ ವಿಶೇಷ ಹಡಗೊಂದು ಇತ್ತೀಚೆಗೆ ಗೋವಾಕ್ಕೆ ಬಂದಿತೆಂದೂ ವರದಿಯಾಗಿದೆ. ಗೋವಾವು ಎಂದಾದರೊಂದು ದಿನ ಭಾರತದೊಡನೆ ಸೇರಿಹೋಗುವುದೆಂದರಿತು ಅಲ್ಲಿರುವ ಪೋರ್ಚುಗೀಸ್ ಅಧಿಕಾರಿಗಳು ತಮ್ಮ ಆಸ್ತಿಗಳನ್ನು ವಿಕ್ರಯಿಸಿ ಅದರಿಂದ ಬಂದ ಮೊಬಲಗನ್ನೂ ಮತ್ತು ಗೋವಾ ಬ್ಯಾಂಕುಗಳಲ್ಲಿ ಅವರ ಠೇವಣಿಯಿಟ್ಟಿದ್ದ ಮೊಬಲಗನ್ನೂ ವಾಪಸು ಪಡೆದು ಪೋರ್ಚುಗಲ್ಲಿನ ಬ್ಯಾಂಕುಗಳಲ್ಲಿ ಇಡುತ್ತಿರುವರೆಂದು ಹೇಳಲಾಗಿದೆ. ಈ ಕಾರಣದಿಂದ ಗೋವದ ಬ್ಯಾಂಕುಗಳನ್ನು ಮುಚ್ಚುವ ಸ್ಥಿತಿಯೊದಗಿರುವುದೆಂದೂ ವರದಿಯಾಗಿದೆ

ಬ್ರಹ್ಮಪುತ್ರಾ ನದಿ ಪ್ರವಾಹದಿಂದ ದಿಬ್ರುಘರ್ ನಗರಕ್ಕೆ ವಿಪತ್ತು

ಅಸ್ಸಾಮಿನ ಟೀ ವ್ಯಾಪಾರ ಕೇಂದ್ರಗಳಲ್ಲೊಂದಾದ ದಿಬ್ರುಘರ್ ನಗರವು ಬ್ರಹ್ಮಪುತ್ರಾ ನದಿಯ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಹೋಗಬಹುದೆಂಬ ಭೀತಿಯುಂಟಾಗಿರುತ್ತದೆ. ನದಿಯ ಪ್ರವಾಹವು ಊರಿಗೆ ನುಗ್ಗದಂತೆ ತಡೆಯಲು ಕಟ್ಟಲಾಗಿದ್ದ ೧೫೦೦ ಅಡಿ ಉದ್ದದ ಗೋಡೆಯು ಮೊನ್ನೆ ರಾತ್ರಿ ಮಹಾ ಶಬ್ದದೊಡನೆ ಕುಸಿದು ಸುಮಾರು ೨೦೦ ಅಡಿಗಳನ್ನು ಕೊಚ್ಚಿಹೋಗಿರುವುದೆ ಇದ್ದರಿಂದ ಪ್ರವಾಹವು ಊರನ್ನು ಪೂರ್ತಿ ಆವರಿಸಬಹುದೆಂದು ಹೇಳಲಾಗಿದೆ

○ ಪಾಕಿಸ್ತಾನದ ರಸ್ತೆ ಸಂಚಾರದ ವ್ಯವಸ್ಥೆಯಲ್ಲಿ ವಾಹನಗಳು ಮತ್ತು ಜನರು ಎಡಗಡೆ ಹೋಗುವುದನ್ನು ಬದಲಾಯಿಸಿ ಬಲಗಡೆಯಲ್ಲಿ ಹೋಗಬೇಕೆಂದು ಗೊತ್ತುಪಡಿಸಲಾಗಿದೆ

ಸರ್ಕಾರದ ಕಂದಾಯದ ಬಾಕಿ ವಸೂಲಿಗೆ ಪೌರಸಭೆ ಪ್ರಯತ್ನ

[illegible] ಸರ್ಕಾರಕ್ಕೆ ಕೊಡಬೇಕಾಗಿರುವುದೆಂದು ಹೇಳಲಾಗಿದೆ. ಈ ಬಾಕಿಯನ್ನು ವಸೂಲು ಮಾಡುವಂತೆ ಪೌರಸಭೆಯ ಅಧಿಕಾರ ವರ್ಗದವರು ಸೂಚಿಸಿದ್ದರು. ಈ ಹಣವನ್ನು ವಸೂಲು ಮಾಡುವ ಸಂಬಂಧದಲ್ಲಿ ಸರ್ಕಾರದ ಅಭಿಪ್ರಾಯವನ್ನು ಕೇಳಿದುಕೊಳ್ಳಲು ಪೌರಸಭೆಯು [illegible] ಕ್ರಮ ತೆಗೆದುಕೊಂಡಿದೆ.

ಪ್ರವಾಹ ಪರಿಹಾರದ ದ್ರವ್ಯದಲ್ಲಿ ಕೇಂದ್ರದಿಂದ ಅರ್ಧ ಭಾಗ

ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಬಿಹಾರ್ ಸರ್ಕಾರಗಳು ಪ್ರವಾಹ ಪೀಡಿತ ಜನರಿಗೆ ಪರಿಹಾರ ಒದಗಿಸಲು ಕೈಗೊಳ್ಳುವ ಕ್ರಮಗಳಿಗೆ ತಗಲುವ ಒಟ್ಟು ವೆಚ್ಚದಲ್ಲಿ ಕೇಂದ್ರ ಸರ್ಕಾರದವರು ಅರ್ಧದಷ್ಟನ್ನು ವಹಿಸಿಕೊಳ್ಳಲು ಒಪ್ಪಿರುತ್ತಾರೆಂದು ವರದಿಯಾಗಿದೆ.

ಅಂಗಡಿ ಮತ್ತು ಸಿಬ್ಬಂದಿ ಶಾಸನದ ಉಲ್ಲಂಘನೆಗೆ ಶಿಕ್ಷೆ

ಅಂಗಡಿ ಮತ್ತು ಸಿಬ್ಬಂದಿ ಶಾಸನವನ್ನು ಉಲ್ಲಂಘಿಸಿದರೆಂದು [illegible] ಮಾರ್ಕೆಟ್ [illegible] ಶ್ರೀ [illegible] ಅಬ್ದುಲ್ [illegible] ಮತ್ತು [illegible] ಶ್ರೀ ಎಂ [illegible] ರೂ. ಜುಲ್ಮಾನೆಯನ್ನು [illegible] ನ್ಯಾಯಾಧೀಶರು ವಿಧಿಸಿದ್ದಾರೆ.

ತೆರಿಗೆಯನ್ನು ತಿವಿದ ಬಗ್ಗೆ ಒಬ್ಬನ ಬಂಧನ

[illegible] ಪೊಲೀಸರು ಬಂಧಿಸಿ ಅವನ ಮೇಲೆ ಮೊಕದ್ದಮೆ ಹೂಡಿರುವರೆಂದು ವರದಿಯಾಗಿದೆ.

ಸಂಗೀತ ಕಚೇರಿ

ರಾಜಧಾನಿಯ ಸಂಗೀತ ಕಲಾಭಿವೃದ್ಧಿ ಸಭೆಯ ಆಶ್ರಯದಲ್ಲಿ [illegible] ಮತ್ತು [illegible] ಎಂ ಎ ನರಸಿಂಹಾಚಾರ್ಯರವರ ಸಂಗೀತ ಕಚೇರಿಗಳು [illegible] ಮೃದಂಗದೊಡನೆ ಸದ್ವಿದ್ಯಾ ಪಾಠಶಾಲೆಯಲ್ಲಿ ನಡೆಯುವುವು. ಎಲ್ಲಾ ಸಂಗೀತಾಭಿಮಾನಿಗಳು [illegible] ಆಹ್ವಾನಿತರು.

ಬೆಂಗಳೂರು ಎಜುಕೇಶನ್ ಫಂಡ್

(ಒಬ್ಬ ಪತ್ರಿಕೆಗಳ ಮನವಿ)

[illegible] ಫಂಡಿನ [illegible] ಸಭೆಯಲ್ಲಿ ಸ್ಥಾಪಿಸಿದ ಪುರೋಭಿವೃದ್ಧಿ [illegible] ವಿದ್ಯಾರ್ಥಿಗಳ [illegible] ಫಂಡಿನಲ್ಲಿ ಅನುಕೂಲವಿಲ್ಲ [illegible]

[illegible] ಧನಸಹಾಯ [illegible]

ಆಸಕ್ತಿಯುಳ್ಳ ಶ್ರೀಮಂತರು [illegible] "ಸಾಧ್ವಿ" ಪತ್ರಿಕೆಯ [illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

PERSONAL

Sylvana, Letter received.
Message on 7th
With love
GERALD

ಪಶ್ಚಿಮ ಬಂಗಾಳದಲ್ಲಿ ಪ್ರವಾಹದಿಂದ ೨೦ ಕೋಟಿ ರೂ. ನಷ್ಟ

ಪಶ್ಚಿಮ ಬಂಗಾಳದ ಉತ್ತರ ಭಾಗದಲ್ಲಿ ಪ್ರವಾಹದಿಂದ ೧೨೪ ಜನರು ಮರಣಹೊಂದಿರುವರೆಂದೂ, ೨೦ ಕೋಟಿ ರೂ ನಷ್ಟ ಸಂಭವಿಸಿರುವುದೆಂದೂ ಅಲ್ಲಿನ ಪರಿಹಾರ ಇಲಾಖಾ ಮಂತ್ರಿ ಪಿ. ಸಿ. ಸೇನ್‌ರವರು ಹೇಳಿರುತ್ತಾರೆ. ೬,೭೯೦೦೦ ಎಕರೆ ಕ್ಷೇತ್ರದ ಬೆಳೆ ನಾಶವಾಗಿದೆ. ೧,೫೦೦ ದನಕರುಗಳು ಸತ್ತು ಹೋಗಿವೆ. ೫೦,೦೦೦ ಗೃಹಗಳಿಗೆ ಹಾನಿ ಆಗಿದೆ.

ಮೈಸೂರು ಸ್ಪಾರ್ಟ ಬ್ಯಾಸ್ಕೆಟ್ ಬಾಲ್ ಕ್ಲಬ್ಬಿನ ಹೊಸ ಅಧಿಕಾರ ವರ್ಗ

ರಾಜಧಾನಿಯ [illegible] ಕ್ಲಬ್ಬಿನ ಸರ್ವಸದಸ್ಯರ ಸಭೆಯು ಕಳೆದ ಬುಧವಾರ [illegible] ನಡೆದು ಪ್ರಸಕ್ತ ಸಾಲಿಗೆ ಶ್ರೀ [illegible] ಹುಸೇನ್‌ರವರು ಅಧ್ಯಕ್ಷರಾಗಿಯೂ, ಶ್ರೀ ಎಂ ಎಲ್ ಶ್ರೀಕಂಠರಾಜು [illegible] ಕಾರ್ಯದರ್ಶಿಯಾಗಿಯೂ ಶ್ರೀ ಎಂ ವಿ [illegible] ಶ್ರೀ ಬಿ ಎಸ್ [illegible] ಆಯ್ಕೆಯಾಗಿದ್ದಾರೆ.

ಶ್ರೀರಂಗಪಟ್ಟಣಕ್ಕೆ ಒಳ ಚರಂಡಿ ವ್ಯವಸ್ಥೆ

ಶ್ರೀರಂಗಪಟ್ಟಣದಲ್ಲಿ ಒಳ ಚರಂಡಿ ವ್ಯವಸ್ಥೆಯನ್ನು ಏರ್ಪಡಿಸುವ [illegible] ಪೌರಸಭೆಯು [illegible] ೧,೦೦೦ ಅಡಿ [illegible] ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ	ಆಣೆ	ಪೈ		
[illegible]	[illegible]				

ಭಾಗವತ ಸಪ್ತಾಹ

[illegible] ದಿಂದ ಬೆಳಿಗ್ಗೆ [illegible] ರ ವರೆಗೂ ಮತ್ತು ಸಂಜೆ [illegible] ರ ವರೆಗೂ ಪುರಾಣ ಭಾಸ್ಕರ [illegible] ಕೃಷ್ಣಮೂರ್ತಿಪುರದ ಶ್ರೀ [illegible] ಮಠದಲ್ಲಿ ಭಾಗವತ ಸಪ್ತಾಹವನ್ನು ನಡೆಸುವರು. ಆಸ್ತಿಕ ಮಹಾಶಯರೆಲ್ಲರಿಗೂ ಆಹ್ವಾನವುಂಟು.

ವುಡ್‌ಲ್ಯಾಂಡ್ಸ್

3-9-54ನೇ ಶುಕ್ರವಾರದಿಂದ [illegible]
ಪ್ರತಿ ದಿನ ಮೂರು ಆಟಗಳು
ಕುಲ್‌ದೀಪ್‌ರವರ ಹಿಂದಿ ಚಿತ್ರ

★ ಔಲಾದ್ ★

[illegible]

Edited, Printed and Published by A R Nagarajan at Sadhvi Press D Subbiah Road, Mysore

CITY MUNICIPAL OFFICES, MYSORE

Dated 19th August 1954

NOTIFICATION

Sealed tenders are invited for supply of the below mentioned articles required for the Depressed Class Amelioration work, from intending suppliers upto 4 P M on Friday the 10th September 1954. Each tender should be accompanied with a chellan for having deposited a sum of Rs 200 in the Municipal Engineer's office as earnest money for this supply. The tender will be received by the Municipal Engineer or his authorised deputy and opened by him on Saturday the 11th September 1954 between 11 A. M and 12 noon in presence of such of those tenderers who may be present. The tenders may be only for supply of tiles, or for wooden articles or for both. The supply of articles should be made at the premises of the Municipal Office and the rate quoted should be inclusive of all the rates and charges that are proposed to be levied by the intending supplier and the supplies should be completed within 15 days from the date of issue of supply order. The articles to be supplied should be in strict conformity with the specification and quality and should be got certified before delivery by the departmental staff to be deputed for this purpose by the Municipal Engineer.

PARTICULARS OF ARTICLES REQUIRED

1. Jungle Wood rafters made out of any one of the following varieties of wood — Mathi, Nandi, Honne, Halasu, Bevu, Bilavara Tholasalu Gandagudda 2 1/2' x 4' section in lengths of 8' to 12' — 1,000 Cft
2. Do reapers in the section 2"x1' lengths being in multiples of 7 1/2' (seven and a half feet) — 30,000 Rft
3. Mangalore pattern 1st class roofing flat tiles as per standard size and quality — 50,000 Nos
4. Ridge tiles to suit the above roofing tiles — 2 500 Nos

Acceptance or rejection of tenders will fully rest with the undersigned who does not bind himself to assign any reason thereof and who also reserves the right to split up the quantities of supply amongst the several tenderers or to reduce or enhance the quantity of the materials approximately estimated as the requirement. For further particulars if any required, the Municipal Engineer may be addressed with required value of postal stamps for a reply.

(Sd) N LAKSHMANA RAU,
Municipal Commissioner

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

5-9-54ನೇ ಭಾನುವಾರದಿಂದ : ಅಮೋಘ ಪ್ರಾರಂಭ

★ ಇರುಳು ಕ್ಯಾಪ್ಟನ್ ★

ಪ್ರೇಂ ನಜೀರ್, ಸತ್ಯಾರ್ಥಿ, ಲಲಿತ, ರಾಗಿಣಿ ಮುಂತಾದವರು ನಟಿಸಿರುವ ತಮಿಳು ಚಿತ್ರ

ಅತ್ಯುತ್ತಮವಾದ ಒಗೆಯುವ
808
ಸಾಬೂನು
ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು

ರಿಜಿಸ್ಟರ್ಡ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿ ಪ್ರತಿ 6 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೪] SADHVI SUNDAY 5-9-1954 ಮೈಸೂರು ಭಾನುವಾರ ೫-೯-೧೯೫೪ [ಸಂಚಿಕೆ [illegible]

- ಸಂಸ್ಥಾನದಲ್ಲಿ ವ್ಯವಸಾಯಿಕ ಆದಾಯ ತೆರಿಗೆ -

ಸಂಸ್ಥಾನದಲ್ಲಿ ವ್ಯವಸಾಯಿಕ ಆದಾಯ ತೆರಿಗೆ

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಮುಖ್ಯ ಮಂತ್ರಿಗಳ ಸೂಚನೆ

ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ಸದಸ್ಯರು ಕರ್ನಾಟಕ ಏಕೀಕರಣದ ಬಗ್ಗೆ ಫಜಲ್ ಅಲಿ ಸಮಿತಿ ಮುಂದೆ ಸ್ವತಂತ್ರ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿರಬೇಕೆಂದೂ, ಅಭಿಪ್ರಾಯವನ್ನು ವ್ಯಕ್ತಪಡಿಸಲು ಪಕ್ಷವು ಹಾಕಿರುವ ನಿರ್ಬಂಧವನ್ನು ತೆಗೆಯಬೇಕೆಂದೂ, ಈ ವಿಷಯದ ಚರ್ಚೆಗಾಗಿ ಪಕ್ಷದ ಸಭೆಯನ್ನು ಕರೆಯಬೇಕೆಂದೂ ಪಕ್ಷದ ೨೦ ಸದಸ್ಯರು ತಮ್ಮ ನಾಯಕರಿಗೆ ಪತ್ರ ಬರೆದಿದ್ದ ಮೇರೆ ನೆನ್ನೆ ತುಂಗಭದ್ರಾ ಜಲ ಸೇತುವೆ ಮೈಸೂರಿನಲ್ಲಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಸಭೆಯನ್ನು ಕರೆದಿದ್ದರು

ಪಕ್ಷದ ಸಭೆಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್ ಕೆ ವೀರಣ್ಣಗೌಡ ಕಾರ್ಯದರ್ಶಿ ಶ್ರೀ ಟಿ ಮರಿಯಪ್ಪ ಶ್ರೀಗಳಾದ ವಿ ವೆಂಕಟಪ್ಪ, ಎನ್ ಸಿ ನಾಗಯ್ಯಶೆಟ್ಟಿ ಮತ್ತು ಕೆ ಪುಟ್ಟಸ್ವಾಮಿ ಸಂತಾನದವರ ಹೋಗಿಲ್ಲ ಶ್ರೀ ವೀರಣ್ಣಗೌಡರು ಪಕ್ಷದ ನಾಯಕ ಶ್ರೀ ಹನುಮಂತಯ್ಯನವರಿಗೆ ಪತ್ರವೊಂದನ್ನು ಬರೆದು ತುಂಗಭದ್ರೆಯಲ್ಲಿ ತೆಗೆದುಕೊಳ್ಳಲಾಗುವ ನಿರ್ಧಾರಗಳು ತಮ್ಮನ್ನು ಬದ್ಧಪಡಿಸುವುದಿಲ್ಲವೆಂದೂ ಅಲ್ಲಿ ಚರ್ಚಿಸಲ್ಪಡುವ ವಿಷಯಗಳ ಬಗ್ಗೆ ತಮ್ಮದೇ ಸ್ವಂತ ಅಭಿಪ್ರಾಯವನ್ನು ಹೊಂದಿರುವುದಾಗಿಯೂ ತಿಳಿಸಿರುವರೆಂದು ವರದಿಯಾಗಿದೆ

ಸಂಸ್ಥಾನದಲ್ಲಿ ಹೊಸ ತೆರಿಗೆಯನ್ನು ವಿಧಿಸುವ ಬಗ್ಗೆ ಸರ್ಕಾರದವರು ಯಾವ ನಿರ್ಧಾರವನ್ನೂ ಕೈಗೊಂಡಿಲ್ಲವೆಂದೂ, ಪಕ್ಷವು ಆ ವಿಷಯವನ್ನು ಪರಿಶೀಲಿಸಬೇಕಾಗಿದೆಯೆಂದೂ ಮುಖ್ಯ ಮಂತ್ರಿಗಳು ತಿಳಿಸಿದರು ಧಾನ್ಯದ ಬೆಲೆಯು ಇತ್ತೀಚೆಗೆ ಶೇಕಡ ೫೦ರಷ್ಟು ಇಳಿದಿರುವುದರಿಂದ ಭೂ ಕಂದಾಯವನ್ನು ಹೆಚ್ಚಿಸುವುದು ಅನುಚಿತವೆಂದೂ ಅದಕ್ಕೆ ಪ್ರತಿಯಾಗಿ ವ್ಯವಸಾಯಿಕ ಆದಾಯ ತೆರಿಗೆಯನ್ನು ವಿಧಿಸುವ ಬಗ್ಗೆ ಆಲೋಚಿಸಬೇಕಾಗಬಹುದೆಂದೂ ಅವರು ನುಡಿದರು ಪಂಚ ವಾರ್ಷಿಕ ಯೋಜನೆಯ ಪೂರ್ತಿಕೆಗಾಗಿ ಈಗಾಗಲೇ ಎತ್ತಲಾಗಿರುವ ೮ ಕೋಟಿ ರೂ ಸಾಲದ ಜೊತೆಗೆ ಇನ್ನೂ ೩ ಕೋಟಿ ರೂ ಬೇಕಾಗಿರುವುದರಿಂದ ತೆರಿಗೆ ಕೊಡಬಲ್ಲ ರೈತರು ಮತ್ತು ಜಮೀನ್ದಾರರ ಮೇಲೆ ತೆರಿಗೆ ಹಾಕದೆ ವಿಧಿಯಿಲ್ಲವೆಂದು ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿ ಮದರಾಸು ಮತ್ತು ಕೇರಳಗಳಲ್ಲಿ ವ್ಯವಸಾಯಿಕ ಆದಾಯ ತೆರಿಗೆಯು ಜಾರಿಯಲ್ಲಿರುವುದೆಂದೂ ತಿಳಿಸಿದರು

ಏಕೀಕರಣವಾದಿಗಳಾದ ತಾವು ತಮ್ಮ ನಿಲುವಿಗೆ ಬೆಂಬಲವನ್ನು ಪಡೆಯುವುದಕ್ಕಾಗಿ ತಟಸ್ಥ ಗೌರವವಾದ ಸ್ಥಳದಲ್ಲಿ ಸಭೆಯನ್ನು ಕರೆದಿರುವುದಾಗಿ ಹರಡಿರುವ ವದಂತಿಯನ್ನು ಮುಖ್ಯ ಮಂತ್ರಿಗಳು ನಿರಾಕರಿಸಿ, ಏಕೀಕರಣದ ಸಮಸ್ಯೆಯು ಅಲ್ಪ ಬಹುಮತದಿಂದ ನಿರ್ಧರಿಸಲ್ಪಡುವಂತಹ ಸಣ್ಣ ವಿಷಯವಲ್ಲವೆಂದೂ, ಇ

ಬೀಡಿ ಕೆಲಸಗಾರರ ಮುಷ್ಕರದ ಮುಕ್ತಾಯ

ಮೈಸೂರು ●

ಕಳೆದ ೩ ದಿನಗಳಿಂದ ರಾಜಧಾನಿಯಲ್ಲಿ ನಡೆಯುತ್ತಿದ್ದ ಬೀಡಿ ಕೆಲಸಗಾರರ ಮುಷ್ಕರವು ಮುಕ್ತಾಯಗೊಂಡಿದೆ ಸಂಘದ ಶ್ರೀ ಅಜೀಜ್ ಸೇಟ್‌ರು ಆರಂಭಿಸಿದ ಉಪವಾಸವು ನೆನ್ನೆ ಸಂಜೆ ಅಧಿಕಾರಿಗಳ ಸಂಧಿ ಸಫಲವಾಗಿ ಮುಕ್ತಾಯಗೊಂಡ ಫಲ ಕೆಲಸಗಾರರಿಗೂ ಮಾಲೀಕರಿಗೂ ಒಪ್ಪಂದವು ಆಗಿ ಇಂದಿನಿಂದ ಕಾರ್ಖಾನೆಗಳಲ್ಲಿ ಕೆಲಸವು ಆರಂಭವಾಗಿದೆ ಕೆಲಸದಿಂದ ತೆಗೆದುಹಾಕಲ್ಪಟ್ಟಿದ್ದ ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಮಾಲೀಕರುಗಳು ಒಪ್ಪಿರುತ್ತಾರೆ ನೆನ್ನೆ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರ ಸಮ್ಮುಖದಲ್ಲಿ ನಡೆದ ಸಂಧಾನ ಮಾತುಕತೆಗಳಲ್ಲಿ ಜಿಲ್ಲಾ ಪೊಲೀಸು ಅಧಿಕಾರಿಗಳು ಶ್ರೀ ಜೆ ಆರ್ ರಂಗಸ್ವಾಮಯ್ಯ, ಹಾಜಿ ಅಹಮದ್ ಖಾನ್ ಮತ್ತು ಎಸ್ ಸಾಹೇಬ್‌ರವರು ಭಾಗವಹಿಸಿದ್ದರು

ಸಟ್ಟಾ ಜೂಜಾಡುತ್ತಿದ್ದವರಿಗೆ ಜುಲ್ಮಾನೆ

ಲಷ್ಕರ್ ಮೊಹಲ್ಲೆ ೧ ನೇ ಬ್ಲಾಕ್ ರಾಮರಾವ್ ವಗೈರೆ ೩ ಜನರು ಸಟ್ಟಾ ಜೂಜಾಡುತ್ತಿದ್ದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಮೊನ್ನೆ ಅಪರಾಧಿಗಳಿಗೆ ತಲಾ ೨೫ ರೂ ಜುಲ್ಮಾನೆ ವಿಧಿಸಿರುತ್ತಾರೆ

ಚಿತ್ರ ಮಂದಿರದಲ್ಲಿ ಧೂಮಪಾನ ಮಾಡಿದವರಿಗೆ ದಂಡ

ಪುಡ್‌ಲ್ಯಾಂಡ್ಸ್ ಚಿತ್ರ ಮಂದಿರದಲ್ಲಿ ಧೂಮಪಾನ ಮಾಡುತ್ತಿದ್ದರೆಂದು ಅಬ್ದುಲ್ ರಷೀದ್ ವಗೈರೆ ೧೪ ಜನರ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಅಪರಾಧಿಗಳಿಗೆ ತಲಾ ೧ ರೂ ಜುಲ್ಮಾನೆ ವಿಧಿಸಿರುತ್ತಾರೆ

ಉಪನ್ಯಾಸ

ರಾಜಧಾನಿಯ ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯ ಶ್ರೀ ವಿದ್ಯಾ ಗಣಪತಿ ಸಭೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಪಂಡಿತ ರತ್ನಂ ವಿ|| ಬಿ ವಾಸುದೇವಾಚಾರ್ಯರಿಂದ ತತ್ವಮಂತ್ರ ಎಂಬ ವಿಚಾರವಾಗಿ ಉಪನ್ಯಾಸವೂ ನಾಳಿದ್ದು ಮಹಾ ಪಾಠಶಾಲಾ ಪಂಡಿತರುಗಳಿಂದ ವ್ಯಾಕರಣ ಶಾಸ್ತ್ರದ ವಿಷಯವಾಗಿ ವಾಕ್ಯಾರ್ಥವೂ ನಡೆಯುವುವು

ವೀಣಾ ವಾದನ

ರಾಜಧಾನಿಯ ತೊಗರಿ ಬೀದಿಯಲ್ಲಿರುವ ದಿವಾಕರ ವಿದ್ಯಾ ಮಂದಿರದಲ್ಲಿ ಗಣಪತಿ ಮಂಗಳಾರತಿ ಪ್ರಯುಕ್ತ ಈ ಸಂಜೆ ೭ ಗಂಟೆಗೆ ವಿ|| ಎಂ ಜೆ ಶ್ರೀನಿವಾಸಯ್ಯಂಗಾರ್ಯರ ವೀಣಾ ವಾದನವೂ ವಿ|| ರಾಮಚಂದ್ರಾಚಾರ್‌ರವರ ಮೃದಂಗದೊಡನೆ ನಡೆಯುವುದು

ದಕ್ಕೆ ಎಲ್ಲ ಸದಸ್ಯರ ಒಮ್ಮತ ಅಭಿಪ್ರಾಯವೂ ಅಗತ್ಯವೆಂದೂ ಹೇಳಿದರು ಸಂಸ್ಥಾನದ ಧಾರಾ ಯೋಜನೆಗಳಾದ ತುಂಗಭದ್ರಾ ಪ್ರದೇಶವನ್ನು ಪಕ್ಷದ ಸದಸ್ಯರು ತಿಳಿದುಕೊಳ್ಳಲೆಂದೂ ಮತ್ತು ದಿನೇ ದಿನೇ ಕಡಿಮೆಯಾಗುತ್ತಿರುವ ಜನರ ಸಂಪರ್ಕವನ್ನು ಹೆಚ್ಚಿಸುವ ಜಾಗಗಳಲ್ಲಿ ಉಪಯುಕ್ತವನ್ನುಂಟು ಮಾಡುವ ಉದ್ದೇಶದಿಂದಲೂ ಈ ರೀತಿ ತುಂಗಭದ್ರೆಯಲ್ಲಿ ಪಕ್ಷದ ಸಭೆಯನ್ನು ಕರೆಯಲಾಗಿದೆಯೆಂದೂ ಅವರು ನುಡಿದರು

ಜಿಲ್ಲಾ ಬೋರ್ಡುಗಳ ಬದಲು ತಾಲ್ಲೂಕು ಬೋರ್ಡು ಅಧ್ಯಕ್ಷರುಗಳ ಸಮಿತಿ

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಲಹೆ

ತುಂಗಭದ್ರೆಯಲ್ಲಿ ಸಮಾವೇಶಗೊಂಡಿದ್ದ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ನೆನ್ನೆ ಸ್ಥಳೀಯ ಸಂಸ್ಥೆಗಳ ಬಗ್ಗೆ ಚಂದ್ರಶೇಖರಯ್ಯ ಸಮಿತಿಯ ವರದಿಯನ್ನು ಪರಿಶೀಲಿಸಿ ಜಿಲ್ಲಾ ಬೋರ್ಡುಗಳನ್ನು ರದ್ದುಪಡಿಸಿ ಅವುಗಳ ಸ್ಥಾನದಲ್ಲಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿ ಉಳ್ಳ ತಾಲ್ಲೂಕು ಬೋರ್ಡುಗಳ ಅಧ್ಯಕ್ಷರುಗಳ ಜಿಲ್ಲಾ ಸಮಿತಿಯೊಂದನ್ನು ರಚಿಸಬೇಕೆಂಬ ಶಿಫಾರಸನ್ನು ಯಥಾವತ್ತಾಗಿ ಅದನ್ನು ಅಂಗೀಕರಿಸಿತು. ಗ್ರಾಮ ಮುನಿಸಿಪಾಲಿಟಿಗಳು ಮತ್ತು ಗ್ರಾಮ ಪಂಚಾಯತಿಗಳಿಗೆ ತಾಲ್ಲೂಕು ಬೋರ್ಡುಗಳಲ್ಲಿ ಪ್ರಾತಿನಿಧ್ಯವಿರಬೇಕೆಂದೂ ತಾಲ್ಲೂಕಿನ ಶಾಸನಸಭಾ ಸದಸ್ಯರುಗಳು ಬೋರ್ಡುಗಳ ಎಕ್ಸ್ ಅಫಿಷಿಯೋ ಸದಸ್ಯರಾಗಿರಬೇಕೆಂದೂ ಸಭೆಯು ತೀರ್ಮಾನ ಮಾಡಿದೆ

ಫ್ರಾನ್ಸಿನ ಮೂವರು ಮಂತ್ರಿಗಳ ರಾಜೀನಾಮೆ

ಫ್ರಾನ್ಸ್ ಐರೋಪ್ಯ ರಕ್ಷಣಾ ಸಂಸ್ಥೆಗೆ ಸೇರದಿದ್ದುದಕ್ಕೆ ಪ್ರತಿಭಟನೆಯನ್ನು ಸೂಚಿಸುವ ಸಲುವಾಗಿ ಅಲ್ಲಿನ ಮೂವರು ಮಂತ್ರಿಗಳು ರಾಜೀನಾಮೆ ಸಲ್ಲಿಸಿದರು ಇಮ್ಯಾನ್ಯುಯಲ್ ಟೆಂಪಲ್ ಎಂಬುವವರನ್ನು ಅಲ್ಲಿನ ಪ್ರಧಾನಿಯವರು ರಕ್ಷಣಾ ಮಂತ್ರಿಗಳನ್ನಾಗಿ ನೇಮಿಸಿದ್ದಾರೆ

ಕಳ್ಳರಿಂದ ವಿದ್ಯಾರ್ಥಿಗೆ ಇರಿತ ಮತ್ತು ೫೦ ರೂ ಅಪಹಾರ

ಬೆಂಗಳೂರಿನ ಬಳಿ ಚಿಕ್ಕ ಬೆಟ್ಟಹಳ್ಳಿಯ ಮುನಿಯಪ್ಪ ಎಂಬ ಇಂಟರ್‌ಮೀಡಿಯೆಟ್ ವಿದ್ಯಾರ್ಥಿಯು ಮೊನ್ನೆ ನಗರದಲ್ಲಿ ಕಾಲೇಜು ಬಿಟ್ಟ ಕೂಡಲೇ ಬೈಸಿಕಲ್ಲಿನ ಮೇಲೆ ತನ್ನ ಗ್ರಾಮಕ್ಕೆ ಹೋಗುತ್ತಿದ್ದಾಗ ಜಾಲಹಳ್ಳಿ ಬಳಿ ಸಮವಸ್ತ್ರಧಾರಿಗಳಾದ ಮೂವರು ಕಳ್ಳರು ಆತನನ್ನು ತಡೆದು, ಅವನ ಬಳಿ ಇದ್ದ ವಸ್ತುಗಳನ್ನು ಅಪಹರಿಸಲೆತ್ನಿಸಿದರೆಂದೂ, ಆತನು ಪ್ರತಿಭಟಿಸಿದಾಗ ಕಳ್ಳರು ಚಾಕುವಿನಿಂದ ಅವನನ್ನು ಇರಿದು ೫೦ ರೂ ಅನ್ನು ದೋಚಿಕೊಂಡು ಹೋದರೆಂದೂ ವರದಿಯಾಗಿದೆ ಮುನಿಯಪ್ಪನಿಗೆ ಹಣೆ, ಬೆನ್ನು ಮತ್ತು ಕೈಗಳ ಮೇಲೆ ಗಾಯವಾಗಿದೆ

ವಯಸ್ಕರ ಶಿಕ್ಷಣ ತರಗತಿಗಳಲ್ಲಿ ಅಂಬಾ ಮತ್ತು ಗಣಪತಿ ಪೂಜೆ

ರಾಜಧಾನಿಯ ವಯಸ್ಕರ ಶಿಕ್ಷಣ ಸಮಿತಿಯವರು ಕಳೆದ ಮಂಗಳವಾರ ಕಲ್ಯಾಣಗಿರಿಯಲ್ಲಿ ಅಂಬಾ ಪೂಜೆಯನ್ನೂ, ಬುಧವಾರ ಅಶೋಕಪುರದ ಕೇಂದ್ರದಲ್ಲಿ ಗಣಪತಿ ಪೂಜೆಯನ್ನೂ ಸಮಿತಿಯ ಪ್ರಧಾನಾಧಿಕಾರಿಗಳಾದ ಶ್ರೀ ಟಿ ವಿ ತಿಮ್ಮೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಕಲ್ಯಾಣಗಿರಿಯಲ್ಲಿ ಶ್ರೀ ಸಂಜೀವಪ್ಪನವರಿಂದಲೂ, ಅಶೋಕಪುರದಲ್ಲಿ ಶ್ರೀಗಳಾದ ಜಿ ಎಸ್ ರಾಮಕೃಷ್ಣಯ್ಯ ಮತ್ತು ಬಿ ಎಲ್ ರಾಮಸ್ವಾಮಿಯವರಿಂದಲೂ ಉಪನ್ಯಾಸಗಳು ಆದವು

ಫಿಲಿಪೈನ್ಸ್ ಸೈನ್ಯದ ಅಭಿವೃದ್ಧಿಗೆ ಅಮೆರಿಕದ ನೆರವು

ಅಮೆರಿಕಾ ಮತ್ತು ಫಿಲಿಪೈನ್ ದ್ವೀಪಗಳ ಪರಸ್ಪರ ರಕ್ಷಣಾ ಒಪ್ಪಂದದ ಬಗ್ಗೆ ಮನಿಲಾದಲ್ಲಿ ನೆನ್ನೆ ಉಭಯ ರಾಷ್ಟ್ರಗಳೂ ಒಂದು ತೀರ್ಮಾನಕ್ಕೆ ಬಂದು ಫಿಲಿಪೈನ್ಸಿನ ಸೈನ್ಯವನ್ನು ಬಲಗೊಳಿಸಲು ಅಮೆರಿಕವು ಒಪ್ಪಿರುವುದಾಗಿ ಪ್ರಕಟಣೆಯೊಂದನ್ನು ಹೊರಡಿಸಲಾಯಿತೆಂದೂ, ಫಿಲಿಪೈನ್ಸಿನ ನೌಕಾ ಮತ್ತು ವಿಮಾನ ಬಲಗಳನ್ನು ಅಭಿವೃದ್ಧಿಗೊಳಿಸಲು ಅಮೆರಿಕದ ರಕ್ಷಣಾ ಶಾಖೆಯು ಪರಿಶೀಲಿಸುತ್ತಿರುವುದಾಗಿಯೂ ವರದಿಯಾಗಿದೆ ಫಿಲಿಪೈನ್ಸಿನ ಸೈನ್ಯದ ವಿಸ್ತರಣೆಗಾಗಿ ಅಗತ್ಯವಾದ ಸಾಮಗ್ರಿಗಳಲ್ಲಿ ಬಹು ಭಾಗವನ್ನು ಅಮೆರಿಕವು ಒದಗಿಸುವುದೆಂದು ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರು ತಿಳಿಸಿರುವುದಾಗಿಯೂ ಗೊತ್ತಾಗಿದೆ

ತಿರುವಾಂಕೂರು ಶಾಸನಸಭಾ ಸದಸ್ಯರ ಉಪವಾಸ ಸತ್ಯಾಗ್ರಹ

ತಿರುವಾಂಕೂರಿನಲ್ಲಿ ನಡೆಯುತ್ತಿರುವ ತೋಟದ ಕೆಲಸಗಾರರ ಮುಷ್ಕರದ ಸಂಬಂಧವಾಗಿ ಅಲ್ಲಿನ ಹಲವು ಶಾಸನಸಭಾ ಸದಸ್ಯರೂ ಮತ್ತು ತೋಟದ ಕೆಲಸಗಾರರೂ ಸಚಿವಾಲಯದ ಮುಂದೆ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿರುವರು ಆ ಪೈಕಿ ಹಲವರನ್ನು ಪೊಲೀಸರು ಸತ್ಯಾಗ್ರಹ ಹೂಡಿದ್ದ ಸ್ಥಳದಿಂದ ಅವರವರ ಗ್ರಾಮಗಳಿಗೆ ಕರೆದುಕೊಂಡುಹೋಗಿ ಬಿಟ್ಟರೆಂದೂ, ಕೆಲವರು ಅಲ್ಲೇ ಉಪವಾಸ ಸತ್ಯಾಗ್ರಹವನ್ನು ಮುಂದುವರಿಸುತ್ತಿರುವರೆಂದೂ ವರದಿಯಾಗಿದೆ ಮುಷ್ಕರವನ್ನು ತ್ಯಜಿಸುವುದಾಗಿ ಭರವಸೆಯಿತ್ತ ಏಳು ಮಂದಿ ಬಂಧಿತರನ್ನು ಪೊಲೀಸರು ಬಿಡುಗಡೆ ಮಾಡಿರುವರು

ದಿಬ್ರೂಗಢ ನಗರದ ರಕ್ಷಣೆಗಾಗಿ ಭಗವಂತನಲ್ಲಿ ಮೊರೆ

ಬ್ರಹ್ಮಪುತ್ರಾ ನದಿಯ ಪ್ರವಾಹದ ಪರಿಣಾಮವಾಗಿ ಅಸ್ಸಾಮಿನ ದಿಬ್ರೂಗಢದಲ್ಲಿ ಮೂರು ಸಾವಿರ ಜನರು ಮನೆಮಠಗಳನ್ನು ಕಳೆದುಕೊಂಡಿರುವರು ಪ್ರವಾಹದ ನೀರು ಹೆಚ್ಚುತ್ತಾ ನಗರದ ಮಧ್ಯಭಾಗಕ್ಕೆ ನುಗ್ಗುತ್ತಿರುವುದರಿಂದ ಸಂಚಾರ ಮಾರ್ಗಗಳು ಮುಳುಗಿ, ಸಮಾಚಾರ ಸಂಪರ್ಕಗಳು ಕಡಿದುಹೋಗಿವೆ ಪ್ರವಾಹದ ರಭಸದಿಂದ ದಿನಂಪ್ರತಿ ಸುಮಾರು ೫೦ ಅಡಿಯಷ್ಟು ಭೂಮಿಯು ಕೊಚ್ಚಿಹೋಗುತ್ತಿರುವುದೆಂದೂ ವರದಿಯಾಗಿದೆ ಸುಮಾರು ೧೧೦ ಎಕರೆ ಜಮೀನು ಕೊಚ್ಚಿಹೋಗಿರುವುದಲ್ಲದೆ, ೨೭ ಲಕ್ಷ ರೂ ಬೆಲೆಯ ಆಸ್ತಿಗಳಿಗೆ ನಷ್ಟವಾಗಿರುವುದಾಗಿಯೂ ಹೇಳಲಾಗಿದೆ ನಗರವನ್ನು ರಕ್ಷಿಸಲು ಅಲ್ಲಿನ ನಿವಾಸಿಗಳು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾದುದರಿಂದ ಅವರು ಭಗವಂತನಲ್ಲಿ ಮೊರೆಯಿಡಲು ವಿಶೇಷ ಪೂಜಾದಿಗಳನ್ನು ನಡೆಸುತ್ತಿರುವರು

★ ಬರುವ ಅಕ್ಟೋಬರ್ ತಿಂಗಳು ೧ ನೇ ತಾರೀಖಿನಿಂದ, ಸಂಸ್ಥಾನದಲ್ಲಿ ಪಾನ ನಿರೋಧವು ಜಾರಿಯಲ್ಲಿರುವ ಏಳು ಜಿಲ್ಲೆಗಳಲ್ಲಿ ಪಾನ ನಿರೋಧ ಸಪ್ತಾಹವನ್ನು ಆಚರಿಸುವ ಸಲುವಾಗಿ ಸರ್ಕಾರದವರು ೧೫ ಸಾವಿರ ರೂ ಗಳನ್ನು ಮಂಜೂರು ಮಾಡಿರುವರು

ವಾರ ಭವಿಷ್ಯ

[illegible]

ಮೇಷ— [illegible]

ವೃಷಭ— ಆರೋಗ್ಯ [illegible]

ಮಿಥುನ— ಆರೋಗ್ಯ [illegible]

ಕರ್ಕ— [illegible]

ಸಿಂಹ— ಆರೋಗ್ಯ [illegible]

ಕನ್ಯಾ— ಆರೋಗ್ಯ [illegible]

ತುಲಾ— ಆರೋಗ್ಯ [illegible]

ವೃಶ್ಚಿಕ— ಆರೋಗ್ಯ [illegible]

ಧನು— ಆರೋಗ್ಯ [illegible]

ಮಕರ— ಆರೋಗ್ಯ [illegible]

ಕುಂಭ— ಆರೋಗ್ಯ [illegible]

ಮೀನ— ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರವಾಗಿರಲಾರದು. ವ್ಯಾಪಾರ ವ್ಯವಹಾರಗಳಲ್ಲಿ ಅಡ್ಡಿ, ಪ್ರವಾಸಕ್ಕೆ ವಿಘ್ನ [illegible]

ತರುಣಿ ಅಪಹಾರದ ಮೊಕದ್ದಮೆಯಲ್ಲಿ ಆಪಾದಿತನ ಖುಲಾಸೆ

ಕೆಂಗೇರಿಯ [illegible] ಶ್ರೀ ನಂಜುಂಡಪ್ಪನವರ [illegible] ಸಬ್ ನ್ಯಾಯಾಧೀಶರು [illegible] ಮದ್ರಾಸ್ [illegible] ಪೋಲೀಸರು ಚೆನ್ನಪಟ್ಟಣದಲ್ಲಿ [illegible] ನ್ಯಾಯಾಧೀಶರು [illegible]

ಪತ್ರಿಕೋದ್ಯಮ ವಿದ್ಯಾರ್ಥಿಗಳ ಕರ್ತವ್ಯ

ಕಾಲೇಜು ಪತ್ರಿಕೋದ್ಯಮ ಸಂಘದಲ್ಲಿ ಎಂ ಎಚ್ ಗೋಪಾಲ್ ರವರ ಭಾಷಣ

ಮೈಸೂರು ೫

ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆ [illegible]

[illegible]

ಪ್ರೈಲಿಗೆ ಪುರಸಭಾಧ್ಯಕ್ಷರ ಭೇಟಿ

ನಗರ ಸಭಾಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರು ನೆನ್ನೆ [illegible]

ಹೈದರಾಬಾದು ಮುಖ್ಯ ಮಂತ್ರಿಗಳೊಡನೆ ಭೇಟಿ

ನಗರದ ದಕ್ಷಿಣ ವಾರ್ಡ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಎಚ್ ಗೋಪಾಲರಾವ್ ಮತ್ತು [illegible] ಹೈದರಾಬಾದು ಮುಖ್ಯ ಮಂತ್ರಿ ಶ್ರೀ ಬಿ ರಾಮಕೃಷ್ಣರಾಯರನ್ನು ಭೇಟಿ ಮಾಡಿ [illegible] ಸಂಭಾಷಣೆ ನಡೆಸಿದರು

ಸಿಂಹಳವನ್ನು ಬಿಡುತ್ತಿರುವ ಭಾರತೀಯರಿಗೆ ಹೊಸ ಸಮಸ್ಯೆ

ಸಿಂಹಳದಿಂದ [illegible] ಭಾರತೀಯರು [illegible] ಸಿಂಹಳವನ್ನು ಬಿಡುತ್ತಿರುವರೆಂದೂ ಹೇಳಲಾಗಿದೆ

ವಾಣಿಜ್ಯ ಸಂಘದ ಅಧ್ಯಕ್ಷರ ಭೇಟಿ

[illegible]

ಆಕಾಶವಾಣಿ ಹಾಡಿನ ಕಾರ್ಯಕ್ರಮ

[illegible]

SRI GAYATHRI
TALKIES
On 5th AND 6th
MOULIN ROUGE
(In Technicolor)
With —Jose Ferrar

On 7th AND 8th
Warner's
BLUE GARDENIA
With Anne Baxter
and Richard Cante

ರಾಜಕಮಲ್ ಟಾಕೀಸ್
1–9 54 ರಿಂದ . ಅಮೋಘ ಪ್ರಾರಂಭ
ಪ್ರತಿ ದಿನ 3 ಆಟಗಳು
[illegible] ಚಿತ್ರ
★ ಪರಿವರ್ತನ ★
ಪಾತ್ರ — [illegible]

Edited, Printed and Published by A R Nagarajan at Sadhvi Press [illegible] Road, Mysore

ಆಂಧ್ರ ಸತ್ಯಾಗ್ರಹದಲ್ಲಿ ಮಾಜಿ ಸಚಿವರ ಪತ್ನಿಯ ಬಂಧನ

ಆಂಧ್ರದಲ್ಲಿ [illegible] ಉತ್ಪಾದನೆ ವಿರುದ್ಧವಾಗಿ ಆರಂಭವಾಗಿರುವ ಸತ್ಯಾಗ್ರಹದಲ್ಲಿ ಇದುವರೆಗೆ ಎರಡು [illegible] ಮಂದಿಯು ದಸ್ತಗಿರಿಯಾಗಿದೆ ಕಮ್ಯೂನಿಸ್ಟ್, ಪ್ರಜಾ ಸಮಾಜವಾದಿ ಮತ್ತು ಕೃಷಿಕಾರ್ ಲೋಕ ಪಕ್ಷಗಳವರು ಕಾನೂನು ಉಲ್ಲಂಘನೆ ಚಳುವಳಿಯಲ್ಲಿ ತೊಡಗಿರುವರು. ಕೃಷಿಕಾರ್ ಲೋಕ ಪಕ್ಷದ ನಾಯಕರೂ, ಆಂಧ್ರದ ಮಾಜಿ ಸಚಿವರೂ ಆದ ಶ್ರೀ ಲಚ್ಚಣ್ಣನವರ ಪತ್ನಿಯೂ ದಸ್ತಗಿರಿಯಾಗಿರುವರು.

ಸೂಕ್ತ ಬಹುಮಾನ

ನೆನ್ನೆ (ತಾ॥ 4 9-54) ಸಾಯಂಕಾಲ 7 ಘಂಟೆ ಸಮಯದಲ್ಲಿ ಅರಮನೆಯ ಮುಂಭಾಗದಲ್ಲಿ ದೀಪದ ಉತ್ಸವವನ್ನು ನೋಡುತ್ತಿದ್ದಾಗ ಲಕ್ಷ್ಮೀನರಸಮ್ಮ ಎಂಬುವರ ಕತ್ತಿನಲ್ಲಿದ್ದ ಚಿನ್ನದ [illegible] ಚಿನ್ನದ [illegible] ಬಿದ್ದುಹೋಗಿರುತ್ತವೆ ಇವು ಸಿಕ್ಕಿರುವವರು ದಯವಿಟ್ಟು [illegible] ಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು

MYSORE DASARA EXHIBITION 1954
(27th September 54 to 14th October 54)
FLOODLIGHT TOURNAMENTS

(Open to students of all the High Schools, Colleges and recognised Gymnasium... The competitors should forward their applications together with the entrance fees through their respective institutions)

Men's Events — *Entrance Fee*
1 Basket Ball Rs 5 per team
2 Volley Ball ,, 5 ,
3 Kho Kho , 3 ,
4 Kabadi 3 ,
5 Table Tennis } , 1/8 for singles & 3 for doubles
6 Competitions
1 Obstacle Race
2 Shot Put
3 Long Jump
4 High Jump } As 4 Per head per item
7 Amateur wrestling Re 1 per head
8 Body Beautiful (Mr Mysore) -do-
9 Weight Lifting -do-

Ladies Events
1 Throw Ball Rs 3 per team
2 Tennicoit -do-
3 Kho Kho -do-
4 Table Tennis Rs 1/8 per single & Rs 3 per double
Competitions
1. Basket Ball Throw
2 Shot Put
3 Potato Race
4 Musical Chair } As 4 per item per head

For Juniors under 14 years
1 Threading the needle
2 Pricking the Baloon } As. 4 per head per item

Last date for receipt of applications together with entrance fees is 20th September 54 before 6 p m

For particulars please apply to
THE SECRETARY,
Dasara Exhibition Committee Mysore

ಪ್ರಭು ದೇವಾ ಥಿಯೇಟರ್
(ಪದ್ಮಾ ಟಾಕೀಸ್)
5-9-54ನೇ ಭಾನುವಾರದಿಂದ : ಅಮೋಘ ಪ್ರಾರಂಭ
★ ಇರುಳು ಕ್ಯೂಪ್ಪಿನ್ ★
ಪ್ರೇಂ ನಜೀರ್, ತಿಕ್ಕುರಿಶಿ, ಲಲಿತ, ರಾಗಿಣಿ ಮುಂತಾದವರು ನಟಿಸಿರುವ ತಮಿಳು ಚಿತ್ರ

ರಿಜಿಸ್ಟರ್ಡ್ ನಂ. 792

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೬] SADHVI . MONDAY 6-9-1954 ಮೈಸೂರು ಸೋಮವಾರ ೬-೯-೧೯೫೪ [ಸಂಚಿಕೆ ೩೩

- ವಿಧಾನ ಸೌಧ ಕಟ್ಟಡದ ಕಾರ್ಮಿಕರ ಮುಷ್ಕರ -

ಏಕೀಕರಣದ ಬಗ್ಗೆ ವೈಯಕ್ತಿಕ ಅಭಿಪ್ರಾಯಕ್ಕೆ ಅವಕಾಶವಿಲ್ಲ

ತುಂಗಭದ್ರ ಸಭೆಯಲ್ಲಿ ಶಾಸನ ಸಭಾ ಕಾಂಗ್ರೆಸ್ ಪಕ್ಷದ ತೀರ್ಮಾನ

ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ಸದಸ್ಯರು ಫಜಲ್ ಅಲಿ ಸಮಿತಿ ಮುಂದೆ ಕರ್ನಾಟಕ ಏಕೀಕರಣದ ಬಗ್ಗೆ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಬಾರದೆಂದು ಕಳೆದ ಜೂನ್ ತಿಂಗಳ ನಡೆದ, ಪಕ್ಷದ ಸಭೆಯಲ್ಲಿ ಮಾಡಲಾದ ನಿರ್ಣಯವನ್ನು ಸಡಿಲಿಸಬಾರದೆಂದು ತುಂಗಭದ್ರೆಯ ವೈಕುಂಠದಲ್ಲಿ ಸೇರಿದ್ದ ಪಕ್ಷದ ಸಭೆಯು ನೆನ್ನೆ ತೀರ್ಮಾನಿಸಿತು. ಈ ಸಂಬಂಧವಾಗಿ ಸರ್ಕಾರವು ನೇಮಿಸಿರುವ ವಿಶೇಷ ಸಮಿತಿಯ ವರದಿಯು ಬರುವವರೆಗೆ ಕರ್ನಾಟಕ ಏಕೀಕರಣದ ಬಗ್ಗೆ ಸದಸ್ಯರ ವೈಯಕ್ತಿಕ ಅಭಿಪ್ರಾಯವನ್ನು ಕೊಡಬಾರದೆಂದು ಹಿಂದಿನ ಸಭೆಯಲ್ಲೂ ಪ್ರಾರ್ಥಿಸಲಾಯಿತು. ವಿಶೇಷ ಸಮಿತಿಯ ವರದಿಯು ಬಂದನಂತರ ತೀರ್ಮಾನವನ್ನು ಕೈಗೊಳ್ಳಲಾಗುವುದೆಂದು ತಿಳಿಸಲಾಯಿತು. ಬಳ್ಳಾರಿ ಜಿಲ್ಲೆ ವಿಷಯವಾಗಿ ಪಕ್ಷವು ಈಗಾಗಲೇ ಕೈಗೊಂಡಿರುವ ನಿರ್ಧಾರವನ್ನು ಬದಲಾಯಿಸಬಾರದೆಂದೂ ಮತ್ತು ಗಡಿ ನಿರ್ಧಾರದ ಬಗ್ಗೆ ಕೇಂದ್ರ ಸರ್ಕಾರದವರೇ ಸರಿ ತೀರ್ಪನ್ನು ಕೊಡುವುದೊಳ್ಳೆಯದೆಂದೂ ಸಭೆಯಲ್ಲಿ ಅಭಿಪ್ರಾಯಪಡಲಾಯಿತು. ಬಳ್ಳಾರಿ ನಗರವೂ ಸೇರಿ ಆ ಜಿಲ್ಲೆಯು ಸಂಸ್ಥಾನದಲ್ಲೇ ಒಂದು ಬಿನ ಕೊಳವಾದ ಆಡಳಿತ ಪ್ರದೇಶವಾಗಿ ಉಳಿಯತಕ್ಕದ್ದೆಂದೂ, ಈ ಸಂದರ್ಭದಲ್ಲಿ ಆ ಪ್ರದೇಶದ ಜನಾಭಿಪ್ರಾಯವನ್ನು ಮನ್ನಿಸತಕ್ಕದ್ದೆಂದೂ ತೀರ್ಮಾನಿಸಲಾಯಿತು.

ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಆಲೂರು, ಆದವಾನಿ, ರಾಯದುರ್ಗ ತಾಲ್ಲೂಕುಗಳೂ ಸೇರಿ ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಗಳು ಮೈಸೂರು ಸಂಸ್ಥಾನದಲ್ಲಿ ಒಂದು ಜಿಲ್ಲೆಯಾಗಿ ಉಳಿಯುವುದು ಒಳ್ಳೆಯದೆಂದೂ, ಈ ಸಮಸ್ಯೆಯು ಭಾಷೆಯ ಆಧಾರದ ಮೇಲೆ ಇತ್ಯರ್ಥಪಡಿಸತಕ್ಕದ್ದಲ್ಲವೆಂದೂ ನುಡಿದರು. ಬಳ್ಳಾರಿ ಸಮಸ್ಯೆಯನ್ನು ಯಾವ ಕಾರಣದಿಂದಲೂ ಪುನರಾರಂಭಿಸಬಾರದೆಂದೂ ಅವರು ಹೇಳಿ, ಫಜಲ್ ಅಲಿ ಸಮಿತಿಯು ಬಂದಾಗ ಸಂಭವಿಸಬಹುದಾದ ಗಲಭೆಗಳನ್ನು ತಡೆಗಟ್ಟಲು ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದೆಂದೂ ತಿಳಿಸಿದರು.

ಟೆನಿಸ್ ಪಂದ್ಯಗಳು

ರಾಜಧಾನಿಯ ಸಿಟಿ ಟೆನ್ನಿಸ್ ಟೂರ್ನಮೆಂಟಿನ ಅಂಗವಾಗಿ ನಡೆಯುತ್ತಿದ್ದ ನಂತರ ಕ್ಲಬ್ಬುಗಳ ಟೆನಿಸ್ ಪಂದ್ಯಗಳಲ್ಲಿ ನೆನ್ನೆ ಗಾರ್ಡನ್ ಕೋರ್ಟಿನ ಶ್ರೀ ಎ. ಆರ್. ರಾಮಕೃಷ್ಣರವರು ಒಂಟಿಕೊಪ್ಪಲು ಕ್ಲಬ್ಬಿನ ಶ್ರೀ ಕೆ. ಸುಬ್ರಹ್ಮಣ್ಯಂರವರನ್ನೂ, ಒಂಟಿಕೊಪ್ಪಲು ಕ್ಲಬ್ಬಿನ ಶ್ರೀ ಗೋವಿಂದರಾಜುರವರು ಗಾರ್ಡನ್ ಕೋರ್ಟಿನ ಶ್ರೀ ಕೆ. ಆರ್. ವಿದ್ಯಾಸಾಗರವರನ್ನೂ ಸೋಲಿಸಿದರು.

ದಿಬ್ರೂಗಡದ ಅಂಚೆ ಕಛೇರಿ ಮತ್ತು ಇತರ ಕಟ್ಟಡಗಳ ನಾಶ

ಅಸ್ಸಾಮಿನ ದಿಬ್ರೂಗಢ ನಗರವು ಬ್ರಹ್ಮಪುತ್ರಾ ನದಿಯ ಪ್ರವಾಹದಿಂದ ಭಾರಿ ಗಂಡಾಂತರಕ್ಕೆ ಸಿಕ್ಕಿರುವುದಾಗಿ ವರದಿಯಾಗಿದೆ. ನದಿಯ ಎರಡು ಪಾರ್ಶ್ವಗಳಲ್ಲೂ ಕಟ್ಟಲಾಗಿದ್ದ ೫೦೦ ಅಡಿ ಉದ್ದದ ಗೋಡೆಗಳು ಕೊಚ್ಚಿಹೋಗಿ ಗಂಟೆಗೆ ೧೫ ಅಡಿಗಳಂತೆ ಭೂಮಿಯು ಕೊರೆಯಲ್ಪಡುತ್ತಿರುವುದರಿಂದ ದಿಬ್ರೂಗಢದ ಅಂಚೆ, ತಂತಿ ಮತ್ತು ಟೆಲಿಫೋನ್ ಉಪಕರಣಗಳನ್ನು ರಕ್ಷಣೆಗಾಗಿ ಸಾಗಿಸಲಾಗಿದೆ. ಅವುಗಳನ್ನು ಮತ್ತು ಇತರ ಕಟ್ಟಡಗಳನ್ನು ಸ್ವಾಭಾವಿಕವಾಗಿ ಕೆಡವಲಾಗುತ್ತಿದೆ. ಮನೆಮಠಗಳನ್ನು ಕಳೆದುಕೊಂಡವರ ಪುನರ್ವಸತಿಗಾಗಿ ಎಂಟು ಲಕ್ಷ ರೂಗಳ ಯೋಜನೆಯೊಂದು ಪರಿಶೀಲಿಸಲ್ಪಡುತ್ತಿದೆ. ಸಾವಿರಾರು ಜನರನ್ನು ಹೊಂದಿರುವುದಾಗಿ ಅಲ್ಲಿನ ಅಧಿಕಾರಿಗಳು ಒಪ್ಪಿಕೊಂಡಿರುತ್ತಾರೆ.

ಕ್ರಯ ಪತ್ರ ಬರೆದು ರಿಜಿಸ್ಟರ್ ಮಾಡಿಸದೆ ಹರಿದುದಕ್ಕೆ ಶಿಕ್ಷೆ

ಮೈಸೂರು ೧೦

೧೧೦ ಗಂಟೆ ಕಾಲ ಸತತವಾಗಿ ಸೈಕಲ್ ಸವಾರಿ ಮಾಡಲು ಎರಡನೇ ಬಾರಿ ಯತ್ನಿಸಿದ ಬೊಂಬಾಯಿನ ಹೈದರಾಲಿಯವರು ೩೬ ಗಂಟೆ ನ ತರ ನೆನ್ನೆ ರಾತ್ರಿ ಸುಮಾರು ೮ ಗಂಟೆ ಸಮಯದಲ್ಲಿ ಸೈಕಲ್ಲಿನಿಂದ ಇಳಿಯಬೇಕಾಯಿತು. ಅವರ ೮೨ ವರ್ಷದ ಮಾತೆಯು ಜೀವನಾಯನ ತಪ್ಪಿಗೆ ಬಂದು ಅಕಸ್ಮಾತ್ ಪ್ರಜ್ಞೆ ತಪ್ಪಿ ಬಿದ್ದರು. ಎಷ್ಟು ಉಪಚರಿಸಿದರೂ ಆಕೆಯು ಮೇಲಕ್ಕೆ ಏಳದಿದ್ದವರಿಂದ ವಿಧಿಯಿಲ್ಲದೆ ಅಲಿಯವರು ಸೈಕಲ್ ಸವಾರಿಯನ್ನ ನಿಲ್ಲಿಸಿದರು.

ಪಾಕ್ ಅನುಮತಿಯಿಲ್ಲದೆ ಸೀಟೊ ಒಪ್ಪಂದಕ್ಕೆ ಜಫರುಲ್ಲಾ ರುಜು

ಮನಿಲಾದಲ್ಲಿ ಆದ ಆಗ್ನೇಯ ಏಷ್ಯಾ ರಾಷ್ಟ್ರಗಳ ಒಪ್ಪಂದಕ್ಕೆ ಪಾಕಿಸ್ತಾನದ ಪ್ರತಿನಿಧಿ ಜಫರುಲ್ಲಾ ಖಾನರು ತಮ್ಮ ಸರ್ಕಾರದ ಅಥವಾ ಮಂತ್ರಿ ಮಂಡಲಿಯ ಅನುಮತಿಯನ್ನೇ ಪಡೆಯದೆ ಅತುರಗವಾಗಿ ರುಜು ಹಾಕಿರುವರೆಂದೂ, ಈ ಬಗ್ಗೆ ಪಾಕಿಸ್ತಾನದ ಪ್ರಧಾನಿ ಮಹಮದಾಲಿಯವರು ಅವರನ್ನು ಸ್ವದೇಶಕ್ಕೆ ಬರುವಂತೆ ಕರೆಸಿ ಅವರ ಆಚರಣೆಯ ಸಮರ್ಥನೆಗಾಗಿ ಕಾರಣ ಕೊಡಬೇಕೆಂದು ಕೇಳಿರುವುದಾಗಿಯೂ ವರದಿಯಾಗಿದೆ. ಮೊನ್ನೆ ರಾತ್ರಿ ಪಾಕಿಸ್ತಾನದ ಮಂತ್ರಿ ಮಂಡಲಿಯ ಸಭೆ ಈ ವಿಷಯವನ್ನು ಪರಿಶೀಲಿಸಿತೆಂದು ಗೊತ್ತಾಗಿದೆ.

ಬೊಂಬಾಯಿಗೆ ಸಂಸ್ಥಾನದಿಂದ ವಿದ್ಯುಚ್ಛಕ್ತಿ

ಜೋಗ್ ವಿದ್ಯುತ್ಕೇಂದ್ರದಿಂದ ಬೊಂಬಾಯಿ ರಾಜ್ಯಕ್ಕೆ ಒಟ್ಟು ೧೦|| ಸಾವಿರ ಕಿಲೊವಾಟ್ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಬೊಂಬಾಯಿಯಲ್ಲಿ ತಿಳಿಸಿರುತ್ತಾರೆ. ಈ ಸಂಬಂಧವಾಗಿ ಆಗಿರುವ ಒಪ್ಪಂದದ ಪ್ರಕಾರ ಬೊಂಬಾಯಿಯ ಕನ್ನಡ ಪ್ರದೇಶಗಳಿಗೆ ಅಗ್ಗದ ದರದಲ್ಲಿ ವಿದ್ಯುಚ್ಛಕ್ತಿಯು ದೊರೆತು ಗೃಹ ಕೈಗಾರಿಕೆಗಳು ಮತ್ತು ಇತರ ಸಣ್ಣ ಕೈಗಾರಿಕೆಗಳಿಗೆ ತುಂಬಾ ಸಹಾಯವಾಗುವುದೆಂದು ಹೇಳಲಾಗಿದೆ.

ಅಧಿಕಾರಿಯಂತೆ ವೇಷ ಧರಿಸಿದ ಮಾಜಿ ಪೋಲೀಸನ ಬಂಧನ

ಬೆಂಗಳೂರಿನ ಮಾರ್ಕೆಟ್ ಪೋಲೀಸರು ಸಿಟಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ ವೇಷಧರಿಸಿದ ಬೋರಯ್ಯ ಎಂಬ ಮಾಜಿ ಪೋಲೀಸನನ್ನು ದಸ್ತಗಿರಿ ಮಾಡಿದರು. ಆತನು ಲಾರಿಯೊಂದನ್ನು ತಡೆದು, ತನಿಖೆ ನಡೆಸುತ್ತಿದ್ದನೆಂದು ಹೇಳಲಾಗಿದೆ. [illegible] ಇವನ ಜೊತೆ ಕೈದಿಗಳನ್ನೂ ವಶಪಡಿಸಿಕೊಳ್ಳಲಾಯಿತು. ಆತನ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ.

ದಸರಾ ಕುಸ್ತಿ ಮೊಕದ್ದಮೆ ಬಗ್ಗೆ ಹೈಕೋರ್ಟಿನಲ್ಲಿ ಅರ್ಜಿ ಪರಿಶೀಲನೆ

ಸರ್ಕಾರದ ಪರ ಅಡ್ವೊಕೇಟ್ ಜನರಲ್ಲರ ವಾದ

(ನಮ್ಮ ಸಂ. ದಾತರಿಂದ) ಬೆಂಗಳೂರು ೧೦

ಕಳೆದ ವರ್ಷ ದಸರಾ ಹಬ್ಬದ ಕಾಲದಲ್ಲಿ ಆರಮನೆ ಕುಸ್ತಿ ಪ್ರಕರಣದ ಸಂಬಂಧವಾಗಿ ಜಯಪುರದ [illegible] ಮೈಸೂರಿನ ೨ನೇ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ನಡೆಯುತ್ತಿರುವ ಮೊಕದ್ದಮೆಗೆ ಸಂಬಂಧಿಸಿದ ದಾಖಲೆಗಳನ್ನು ಹೈಕೋರ್ಟಿಗೆ ತರಿಸಿಕೊಡಬೇಕೆಂತಲೂ, ಕೋರ್ಟಿಗೆ ಸಲ್ಲಿಸಿದ ದೂರಿನ ದೂರು ಮತ್ತು ಎಫ್. ಐ. ಆರ್. ಗಳನ್ನು ಗುಟ್ಟಾಗಿಯೂ, ಹೊರಸಾಗದಂತೆಯೂ [illegible] ಅದೇ ಮೊಕದ್ದಮೆಯನ್ನೇ ವಜಾ ಮಾಡಬೇಕೆಂತಲೂ ಶ್ರೀಗಳಾದ [illegible] ಗೌಡ ಮತ್ತು [illegible]ಯ್ಯನವರು ಹೈಕೋರ್ಟಿನಲ್ಲಿ ಸಲ್ಲಿಸಿದ್ದ ರಿವಿಷನ್ ಅರ್ಜಿಗಳು ಈ ದಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯನವರ ಸಮ್ಮುಖದಲ್ಲಿ ವಿಚಾರಣೆಗೆ ಬಂದಿದ್ದುವು.

ಸರ್ಕಾರದ ಪರವಾಗಿ ಅಡ್ವೊಕೇಟ್ ಜನರಲ್ಲರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ವಾದ ಮಾಡಿ, ಈ ವಿಷಯವನ್ನು ಹೈಕೋರ್ಟಿನ ಬೆಂಚಿಗೆ ಹಾಕಬೇಕೆಂದೂ, ಅದರಲ್ಲಿ ಹೈಕೋರ್ಟಿನ ಪ್ರಶ್ನೆ ಅಧಿಕಾರದ ಚಲಾವಣೆ ವಿಷಯವು ಅಡಕವಾಗಿರುವುದೆಂದೂ ತಿಳಿಸಿದರು.

ಅರ್ಜಿದಾರರ ಪರ ವಕೀಲರಾದ ಶ್ರೀ ವೆಂಕಟಸ್ವಾಮಿನವರು ಅರ್ಜಿಯೊಂದನ್ನು ಸಲ್ಲಿಸಿ, ಸಂಬಂಧಪಟ್ಟ ರಿಕಾರ್ಡುಗಳನ್ನು ಹೈಕೋರ್ಟಿನಿಂದ ಪಡೆದು ನೋಡಲು ಅವಕಾಶ ದೊರೆತು, ಅವುಗಳ ಅಧಿಕೃತ ನಕಲುಗಳನ್ನು ಕೊಡುವಂತೆ ಪ್ರಾರ್ಥಿಸಿದರು.

ವಿಚಾರಣೆಯನ್ನು ೨೦ನೇ ತಾ|| ಗೆ ಮುಂದೆ ಹಾಕಲಾಗಿದೆ.

೨೩ ನೇ ತಾ|| ಬ್ಯಾಂಕು ನೌಕರರ ಸಾಂಕೇತಿಕ ಮುಷ್ಕರ

ಈ ತಿಂಗಳು ೨೩ ನೇ ತಾ|| ಭಾರತದಲ್ಲಿರುವ ಬ್ಯಾಂಕುಗಳ ನೌಕರರೆಲ್ಲರೂ ೧ ದಿನದ ಸಾಂಕೇತಿಕ ಪ್ರತಿಭಟನಾ ಮುಷ್ಕರ ಹೂಡಬೇಕೆಂದು ಅಖಿಲ ಭಾರತ ಬ್ಯಾಂಕು ನೌಕರರುಗಳ ಸಂಘದ ಕೇಂದ್ರ ಸಮಿತಿಯು ತೀರ್ಮಾನಿಸಿದೆ. ನವೆಂಬರ್ ೧ರ ಒಳಗೆ ದೇಶಾದ್ಯಂತ ಸಾರ್ವತ್ರಿಕ ಮುಷ್ಕರವನ್ನಾರಂಭಿಸಬೇಕೆಂದು ಸಮಿತಿಯು ನಿರ್ಣಯ ಮಾಡಿರುತ್ತದೆ. ಕಾರ್ಮಿಕ ಅಪೆಲೇಟ್ ನ್ಯಾಯ ಮಂಡಳಿಯ ತೀರ್ಪನ್ನು ಸರ್ಕಾರದವರು ಬದಲಾಯಿಸಿರುವುದು ನ್ಯಾಯವಲ್ಲವೆಂದು ಸಮಿತಿಯು ತಿಳಿಸಿರುತ್ತದೆ. ಅಕ್ಟೋಬರ್ ೧೭ ಮತ್ತು ೧೮ ನೇ ತಾ|| ನೌಕರರ ಸಂಘದ ಜನರಲ್ ಕೌನ್ಸಿಲ್ ಸಭೆಯನ್ನು ಕರೆದು ಸಾರ್ವತ್ರಿಕ ಮುಷ್ಕರದ ವಿಷಯವನ್ನು ವಿಮರ್ಶಿಸಲಾಗುವುದು.

ಚಾಮರಾಜನಗರದ [illegible] ಹಿಂದೀ ಮಂದಿರದ ಆಶ್ರಯದಲ್ಲಿ ತಾ|| ೧೩-೯-೫೪ ನೇ ಸೋಮವಾರದಿಂದ ಒರುವ [illegible] ಪ್ರವಚನ ಹಿಂದೀ ಅಭ್ಯರ್ಥಿಗಳಿಗೆ ಶಿಕ್ಷಣ ಕೊಡಲಾಗುವುದು. ಸರ್ಕಾರೀ ನೌಕರರಿಗೂ ಮಹಿಳೆಯರಿಗೂ ಮತ್ತು ಸ್ತ್ರೀಯರಿಗೂ ಪ್ರತ್ಯೇಕ ತರಗತಿಗಳನ್ನು ತೆರೆಯಲಾಗಿದೆ.

ನೀರು ಕಂದಾಯದ ಬಗ್ಗೆ ಪೌರಸಭೆ ಮೇಲೆ ದಾವೆ

ಪೌರರ ಪರವಾಗಿ ನಡೆಸಲು ತಗಡೂರು ರಾಮಚಂದ್ರರಾಯರಿಗೆ ಅನುಮತಿ

ಮೈಸೂರು ೧೦

ಇಲ್ಲಿನ ಪೌರಸಭೆಯವರು ನಲ್ಲಿಗಳಿಗೆ ಫ್ಲ್ಯಾಟ್ ರೇಟ್ ಕಂದಾಯವನ್ನು ವಿಧಿಸಿದ ಪ್ರಕಾರ ವಿರುದ್ಧವಾಗಿ ಅವರ ಮೇಲೆ ಶ್ರೀ ತಗಡೂರು ರಾಮಚಂದ್ರರಾಯರು ಮತ್ತು ಶ್ರೀ ಎ. ಎಸ್. ರಾಮಯ್ಯನವರು ನಗರದ ಮುನ್ಸೀಫ್ ಕೋರ್ಟಿನಲ್ಲಿ ಹೂಡಿದ್ದ ದಾವೆಯು ನೆನ್ನೆ ವಿಚಾರಣೆಗೆ ಬಂದಿತ್ತು. ನಗರದ ರೇಟ್ ಪೇಯರುಗಳ ಪರವಾಗಿ ದಾವೆ ನಡೆಸಲು ಶ್ರೀ ತಗಡೂರ ರಾಮಚಂದ್ರರಾಯರಿಗೆ ಮುನ್ಸೀಫರು ಅನುಮತಿ ಇತ್ತರು.

ಪೌರಸಭೆಯವರು ಕೋರ್ಟಿಗೆ ಹೇಳಿಕೆಯೊಂದನ್ನು ಸಲ್ಲಿಸಿ, ಈ ವರ್ಷ ಏಪ್ರಿಲ್ ೧೦ನೇ ತಾ|| ನೀರು ಸರಬರಾಜಿನ ಬಗ್ಗೆ ಹೊಸ ನಿಬಂಧನೆಗಳು ಜಾರಿಗೆ ಬಂದವೆಂದೂ, ಅದರಿಂದ ಅದನ್ನು ಹಾಗೆಯೇ ಜಾರಿಗೆ ತರಲು ರಾಯರ ತಕರಾರು ಸಾಧ್ಯವಿಲ್ಲವೆಂತಲೂ, ಅಷ್ಟರಿಂದ ೬೦೦ ರೂ. ಗಳ ಮೇಲೆ ಮಾಸಿಕ ಬಾಡಿಗೆ ಬಂದಾಯ ಇರುವ ಮನೆಗಳಿಗೆ ಮಾತ್ರ ಮೀಟರ್ ಹಾಕಿ, ಉಳಿದುವುಗಳಿಗೆ ಫ್ಲ್ಯಾಟ್ ರೇಟ್ ಕಂದಾಯ ವಿಧಿಸಲಾಗುತ್ತಿರುವುದೆಂದೂ ತಿಳಿಸಿರುತ್ತಾರೆ.

ವಾದಿಯರು ಪ್ರತಿ ಹೇಳಿಕೆ ಕೊಟ್ಟು ಈ ರೀತಿ ಮಾಡುವುದು ಪಕ್ಷಪಾತವಾಗುವುದಲ್ಲದೆ, ಸರ್ಕಾರದ ಕಾನೂನು ಕಟ್ಟಳೆಗೆ ವಿರುದ್ಧವೂ ಮತ್ತು ರಾಜ್ಯಾಂಗ ಬಾಹಿರವೂ ಆಗುವುದೆಂದೂ, ಸರ್ಕಾರದ ರೂಲ್ಸಿನ ೪೫, ೫೧ ಮತ್ತು ೬೦ನೇ ವಿಧಿಗಳ ಪ್ರಕಾರ ಫ್ಲ್ಯಾಟ್ ರೇಟನ್ನು ವಿಧಿಸಲು ಅವಕಾಶವೇ ಇಲ್ಲವೆಂದೂ ತಿಳಿಸಿರುತ್ತಾರೆ.

ಗಣಪತಿ ಮಂಗಳಾರತಿ ಮತ್ತು ವಿಸರ್ಜನೋತ್ಸವ

ರಾಜಧಾನಿಯ ಕೊತ್ವಾಲ್ ರಾಮಯ್ಯನವರ ಬೀದಿಯಲ್ಲಿರುವ ಭಾವಸಾರ ಕ್ಷತ್ರಿಯ ಸೋಷಿಯಲ್ ಇನ್‌ಸ್ಟಿಟ್ಯೂಟಿನಲ್ಲಿ ನಡೆಯುತ್ತಿರುವ ಗಣಪತಿ ಮಹೋತ್ಸವದ ಅಂಗವಾಗಿ ನಾಳೆ ಸಂಜೆ ೫ ಘಂಟೆಗೆ ಗಣಪತಿ ಮಂಗಳಾರತಿಯೂ ಅನಂತರ ಮೆರವಣಿಗೆ ನಡೆದು ಕೃಷ್ಣಣ್ಣನವರ ತೋಟದ ಕೊಳದಲ್ಲಿ ವಿಸರ್ಜನೆಯೂ ಜರುಗುವುದು. ಪೌರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಭಾರತಕ್ಕೆ ಆಕ್ರಮಣ ಭೀತಿ ತಡೆಯಲು ಪಾಕಿಸ್ತಾನದ ನೆರವು

ಮನಿಲಾ ಸಮ್ಮೇಳನಕ್ಕೆ ಪಾಕಿಸ್ತಾನದ ಪ್ರತಿನಿಧಿಯಾಗಿ ತೆರಳಿರುವ ಸರ್ ಮಹಮದ್ ಜಫರುಲ್ಲಾ ಖಾನರವರು ಅಲ್ಲಿನ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ, ಭಾರತಕ್ಕೆ ಕಮ್ಯೂನಿಸ್ಟ್ ಅಥವಾ ಇತರ ಯಾವ ರಾಷ್ಟ್ರದಿಂದಲೇ ಆಗಲಿ ಆಕ್ರಮಣ ಅಥವಾ ಬೇರೆ ವಿಧದ ಭೀತಿಯೊದಗಿದರೂ ಅಗ, ಭಾರತವು ಅನುಮತಿ ಕೊಟ್ಟರೆ, ಪಾಕಿಸ್ತಾನವು ಭಾರತಕ್ಕೆ ಸಹಾಯ ನೀಡುವುದೆಂದು ತಿಳಿಸಿರುವರು.

ದೇವದಾಸಿಯರಿಂದ ಖಾಸಗಿ ಸಮಾರಂಭಗಳಲ್ಲಿ ನೃತ್ಯವಿಲ್ಲ

ಆಂಧ್ರದ ಮಂತ್ರಿಮಂಡಲದ ಸಭೆಯು ಮೊನ್ನೆ ಸಮಾವೇಶಗೊಂಡು ಸಂಸ್ಥಾನದ ದೇವದಾಸಿಯರು ಮದುವೆ ಮತ್ತು ಮೆರವಣಿಗೆ ಮೊದಲಾದ ಖಾಸಗಿ ಸಮಾರಂಭಗಳಲ್ಲಿ ನರ್ತನ ಮಾಡುವುದನ್ನು ನಿಷೇಧಿಸುವ ಬಗ್ಗೆ ಶಾಸನವನ್ನು ಮಾಡಲು ನಿರ್ಧರಿಸಿ ಇದಕ್ಕಾಗಿ ಸಂಸ್ಥಾನ ಸರ್ಕಾರದವರು ಕೇಂದ್ರದಿಂದ ಪೂರ್ವಭಾವಿಯಾಗಿ ಸಮ್ಮತಿಯನ್ನು ಪಡೆಯುವರೆಂದು ಹೇಳಲಾಗಿದೆ

ಪ್ರಾಥಮಿಕ ಶಾಲಾ ಮಕ್ಕಳಿಗೆ ಸುರಕ್ಷತೆಯ ಶಿಕ್ಷಣ

ಸಂಸ್ಥಾನದ ಶಾಲೆಗಳಲ್ಲಿ ಮಕ್ಕಳಿಗೆ ಸೇಫ್ಟಿ ಫಸ್ಟ್ ಕ್ರಮಗಳ ಶಿಕ್ಷಣವನ್ನು ಕಲಿಸಲು ಸರ್ಕಾರದವರು ಯೋಜನೆಯೊಂದನ್ನು ಮಂಜೂರು ಮಾಡಿರುತ್ತಾರೆ ಇದನ್ನು ಮೊದಲು ಪ್ರಾಥಮಿಕ ಶಾಲೆಗಳಲ್ಲಿ ಜಾರಿಗೆ ತರಲಾಗುವುದು. ಸುರಕ್ಷಿತವಾಗಿ ಸೈಕಲ್ ಸವಾರಿ ಮಾಡುವುದು. ರಸ್ತೆಗಳಲ್ಲಿ ಹೋಗುವಾಗ ನಿಯಮಗಳ ಪ್ರದರ್ಶನ ಮಾಡುವುದು, ಅವುಗಳ ಬಗ್ಗೆ ಪತ್ರಿಕೆ ಮತ್ತು ರೇಡಿಯೋ ಮೂಲಕ ಪ್ರಚಾರ ಮಾಡುವುದು ಈ ಕ್ರಮಗಳನ್ನು ಕೈಗೊಳ್ಳಲಾಗುವುದು ವಿದ್ಯಾರ್ಥಿಗಳಿಗೆ ಪೋಲೀಸು ಅಧಿಕಾರಿಗಳು ಶಿಕ್ಷಣವೀಯುವರು ವಾಹನ ಸಂಚಾರ ವಿಶೇಷವಿರುವಾಗ ಪೋಲೀಸು ಅಧಿಕಾರಿಗಳು ಶಾಲಾ ಪ್ರದೇಶಗಳಲ್ಲಿ ಮಾರ್ಗದರ್ಶನ ಮಾಡುವರು

ನಂಜನಗೂಡಿನಲ್ಲಿ ಕ್ರಿಕೆಟ್ ಪಂದ್ಯ

ಕಳೆದ ಬುಧವಾರ ನಂಜನಗೂಡಿನಲ್ಲಿ ಮೈಸೂರು ಬನುಮಯ್ಯ ಕಾಲೇಜಿನವರಿಗೂ ಮತ್ತು ನಂಜನಗೂಡ ಧನ್ವಂತರಿ ಕ್ರಿಕೆಟ್ ಕ್ಲಬ್ಬಿನವರಿಗೂ ನಡೆದ ಪಂದ್ಯದಲ್ಲಿ ನಂಜನಗೂಡು ಧನ್ವಂತರಿ ಕ್ರಿಕೆಟ್ ಕ್ಲಬ್ಬಿನವರು ಇನ್ನಿಂಗ್ಸ್ ಮತ್ತು ೩೫ ರನ್ನುಗಳಿಂದ ಜಯಗಳಿಸಿದರು.

ಪ್ರಾಪ್ತ ವಯಸ್ಕರ ವಿವಾಹಕ್ಕೆ ಪೋಷಕರ ಅನುಮತಿ ಅನಗತ್ಯ

ಭಾರತದ ಲೋಕಸಭೆಯಲ್ಲಿ ವಿಶೇಷ ವಿವಾಹದ ಮಸೂದೆಯ ಬಗ್ಗೆ ಚರ್ಚೆ ನಡೆದು ೧೮ ವರ್ಷದ ತರುಣಿಯೂ ಮತ್ತು ೨೧ ವರ್ಷದ ತರುಣನೂ ವಿವಾಹವಾಗಲು ತಮ್ಮ ಪೋಷಕರ ಅನುಮತಿ ಪಡೆಯಬೇಕಾಗಿಲ್ಲವೆಂದು ನಿರ್ಧರಿಸಲಾಯಿತು. ವಿವಾಹವಾಗಲಿರುವ ತರುಣತರುಣಿಯರ ಅರ್ಹತೆ ಬಗ್ಗೆ ವೈದ್ಯಕೀಯ ಸರ್ಟಿಫಿಕೇಟುಗಳನ್ನು ಪಡೆದಿರಬೇಕೆಂದು ಸೂಚಿಸಲ್ಪಟ್ಟ ಒಂದು ತಿದ್ದುಪಡಿಯು ತಿರಸ್ಕರಿಸಲ್ಪಟ್ಟಿತು.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೬.೫ ಕ್ಲಾರಿಯೊನೆಟ್. ೬.೩೦ ಆರ್. ಕೆ. ಶ್ರೀಕಂಠನ್ ದೇವರ ನಾಮಗಳು. ಮಧ್ಯಾಹ್ನ ೧.೫೦ ಮತ್ತು ೧-೫೦ ರೆಕಾರ್ಡುಗಳು. ೨ ಬಾಲ ಜಗತ್— ಮಕ್ಕಳ ಕಾರ್ಯಕ್ರಮ ಸಂಜೆ ೫.೪೦ ಆರ್. ಕೆ. ಶ್ರೀಕಂಠನ್ ಸಂಗೀತ. ೬ ಹಿಂದಿ ಪಾಠ. ೬.೧೫ ಬಿ. ಎ. ದಾಸಿಗ ಸದ್ಯ ಪಠಣ. ೬.೫ ರೆಕಾರ್ಡು ಹಾಗೆನ್ನ. ರ. ೭.೩೦ ಗೋಪಾಲಕೃಷ್ಣ ಅವರ ಭಾಷಣ ೮ ಹೆಬ್ಬಾರ್ ಕೃಷ್ಣ ಭಾಗವತರ್, ಕಥಾ ಕಾಲಕ್ಷೇಪ. ಸ್ವಾತಂತ್ರ್ಯೋದ್ಯಾನ. ೯.೫ ವಾದ್ಯ ವೃಂದ. ೯.೩೦ ರಾಷ್ಟ್ರೀಯ ಕಾರ್ಯಕ್ರಮ, ಅರಿಯಕುಡಿ ರಾಮಾನುಜಯ್ಯಂಗಾರ್ – ಕರ್ನಾಟಕ ಸಂಗೀತ.

ಮಧ್ಯ ಪೂರ್ವ ರಕ್ಷಣಾ ಒಪ್ಪಂದಕ್ಕೆ ಈಜಿಪ್ಟ್

ಮಧ್ಯ ಪೂರ್ವ, ರಕ್ಷಣಾ ವ್ಯವಸ್ಥೆಗೆ ಅಮೆರಿಕಾ, ಪಾಕಿಸ್ತಾನ ಮತ್ತು ಟರ್ಕಿಗಳೊಡನೆ ಸಖ್ಯದಲ್ಲೇ ಈಜಿಪ್ಟ್ ಸೇರಲಿರುವುದೆಂದು ಗೊತ್ತಾಗಿದೆ

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಆ. ಪೈ.	ರೂ. ಆ. ಪೈ.
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಹುಣಸೆ	[illegible] ೧೦ ೦	
ಉದ್ದು	[illegible]	
ತೊಗರಿ	[illegible]	
ಹುರುಳಿಕಾಳು	[illegible]	[illegible]
ಕೊಬ್ಬರಿ	[illegible]	[illegible]
ತೆಂಗಿನಕಾಯಿ ೧,೦೦೦	[illegible]	[illegible]

SREE GANESHA
TALKIES
GALA RELEASE
On 11-9-54 :: Daily 3 Shows
For 5 Days Only
Universal International's
THE GLASS WEB
In 3-Dimension
With :- Edward G. Robinson, Kathreen Hughes
(The Ultimate Suspense Drama in 3-D)
The Viewers required to see the film will be supplied for a rental of 2 as. each, which have to be returned after the show

ಪ್ರಭಾ ★ 10—9—54 ರಿಂದ ಜಯಪ್ರದ 2 ನೇ ವಾರ ದಿನವಹಿ 3 ಆಟಗಳು
ಮಿ ಶಾಂ ತಾ ರಾ ಮ್ ರ ವ ರ
ಸುಭಾ-ಕ-ತಾರ
ಪಾತ್ರ :— ಜಯಶ್ರೀ, ಪ್ರದೀಪ್ ಕುಮಾರ್, ಬೇಬಿ ರಾಜಶ್ರೀ, ವಿ. ಶಾಂತಾರಾಮ್.
ಬರಲಿರುವ ಪ್ರದರ್ಶನ : 10-9-54 ರಿಂದ ೩ ದಿನಗಳ ಕಾಲ ರವರ ★ ನೌಜವಾನ್ ★

ಮೈಸೂರು ದಸರಾ ವಸ್ತು ಪ್ರದರ್ಶನ 1954
(ತಾ|| 27—9—54 ರಿಂದ ತಾ|| 14—10—54 ರ ವರೆಗೆ)
ಈ ವರ್ಷದ ದಸರಾ ವಸ್ತು ಪ್ರದರ್ಶನದ ಮಹಿಳಾ ವಿಭಾಗದ ಅಂಗವಾಗಿ ಈ ಕೆಳಗೆ ಕಂಡ ಸ್ಪರ್ಧೆಗಳನ್ನು ಸ್ತ್ರೀಯರಿಗಾಗಿ ಏರ್ಪಡಿಸಲಾಗಿದೆ
—: ಇದಕ್ಕೆ ಪ್ರವೇಶ ಧನವಿಲ್ಲ :—
1. ಭಾರತೀಯ ಉಡುಪುಗಳ ಸ್ಪರ್ಧೆ
2. ರಂಗೋಲೆ ಸ್ಪರ್ಧೆ
ಅ) ಬಿಳಿ ರಂಗೋಲೆ — ಆ) ಬಣ್ಣದ ರಂಗೋಲೆ
ಇ) ಹೂವಿನ ರಂಗೋಲೆ — ಈ) ಧಾನ್ಯದ ರಂಗೋಲೆ
3. ಜಡೆ ಶೃಂಗಾರ ಸ್ಪರ್ಧೆ
ಅ) ಹೂವಿನಿಂದ ಮಾಡಿದ ಜಡೆ ಶೃಂಗಾರ — ಆ) ಹೂವಿಲ್ಲದ ಜಡೆ ಶೃಂಗಾರ
ಈ ಸ್ಪರ್ಧೆಗಳಿಗೆ ಸೇರಬಿಚ್ಛಿಸುವ ಮಹಿಳೆಯರು ತಾ|| 15-9-54 ರೊಳಗಾಗಿ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ಮೂಲಕ ತಿಳಿಸಬೇಕಾಗಿ ಕೋರಿದೆ
ಪ್ರಧಾನ ಕಾರ್ಯದರ್ಶಿ,
ವಸ್ತು ಪ್ರದರ್ಶನ ಸಮಿತಿ, ಮೈಸೂರು

ಉತ್ತಮವಾದ ಒಗೆಗೆ
808
ಸಾಬೂನು
ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ಜೀವವಿಮೆ ....
ಗಂಡನ ಕರ್ತವ್ಯವೂ, ಹೆಂಡತಿಯ ಹಕ್ಕೂ, ಮಗುವಿನ ಅವಶ್ಯಕತೆಯೂ ಆಗಿದೆ ....
ಮೈಸೂರು ಸರ್ಕಾರದ ವಿಮಾ ಇಲಾಖೆ
ಅನೇಕ ವರುಷಗಳ ನಂಬಿಕೆ, ಸೇವೆ ಸಹಕಾರ ಸಲ್ಲಿಸಿದೆ,
ಪೂರ್ಣ ಭದ್ರತೆ—ಕಡಿಮೆ ವೆಚ್ಚ, ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚುತ್ತಿರುವುದು ! ಅತ್ಯಂತ ಅನುಕೂಲವಾದ ಪ್ರೀಮಿಯಂ ದರ, ಸುಲಭ ಸಾಲ ಸೌಕರ್ಯ, ತಡವಿಲ್ಲದ ವಿಮಾ ಪಾವತಿ ಸರ್ಕಾರಿ ನೌಕರರ ಪ್ರಜೆಗಳ ಕಾಪಾಡಿಕೆಯಲ್ಲಿ ವಿಮೆ ಮಾಡಲು ಇಂದೇ ನಿರ್ಧರಿಸಿರಿ :
ಇದಕ್ಕಾಗಿ ಪಾವತಿ ಮಾಡಬೇಕಾದ ಹಣವನ್ನು ಕಳೆಯದೆ ಪಾಲಿಸಿ ಸೇಕ್ಷನ್ನಲ್ಲಿ ಸ್ವೀಕರಿಸಲಾಗುತ್ತದೆ
ಮೈಸೂರು ಸರ್ಕಾರದ ವಿಮಾ ಇಲಾಖೆ, ಬೆಂಗಳೂರು

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
12-9-54 ನೇ :: ಭಾನುವಾರದಿಂದ :: 5 ದಿನಗಳು ಮಾತ್ರ
★ **ಪೆಂಪಲ್ಲ ಕೊಡಕು** ★ (ಸಾಕು ಮಗ)
ಪಾತ್ರ:- ಪುಷ್ಪವಲ್ಲಿ, ಸಾವಿತ್ರಿ, ಶಿವಾಜಿ ಗಣೇಶ, ರಂಗರಾವ್ ಮುಂತಾದವರು
17-9-54 ನೇ :: ಶುಕ್ರವಾರದಿಂದ :: ಅಮೋಘ ಪ್ರಾರಂಭ
★ **ಸುಖಿಂ ಎಂಗೆ** ★ (ಸುಖವೆಲ್ಲಿ)
ಮಾಡರ್ನ್ ಥಿಯೇಟರ್ಸ್‌ರವರ ತಮಿಳು ಚಿತ್ರ

Edited, Printed and Published by A. R. Nagarajan at Sadhvi [illegible] Subbiah Road, Mysore

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೭] SADHVI : SATURDAY 11-9-1954 ಮೈಸೂರು : ಶನಿವಾರ ೧೧-೯-೧೯೫೪ [ಸಂಚಿಕೆ : ೩೭

ಕಲ್ಕತ್ತ ಗೋವಧೆ ನಿರೋಧಕರು-ಪೊಲೀಸರಿಗೆ ಘರ್ಷಣೆ

ನಗರದ ಎಲ್ಲ ವಾರ್ಡುಗಳಲ್ಲೂ ತೆರಿಗೆದಾರರ ಸಂಘಗಳು

ರಚಿಸಲು ಪ್ರಜಾ ಸಮಾಜವಾದಿ ಪಕ್ಷದ ತೀರ್ಮಾನ

ಮೈಸೂರು ೧೧

ನಗರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯು ನೆನ್ನೆ ಶ್ರೀ ಕೆ ... ಆಳಮ್ಮನವರ ಅಧ್ಯಕ್ಷತೆಯಲ್ಲಿ ನಡೆದು ನಗರದ ಎಲ್ಲ ವಾರ್ಡುಗಳಲ್ಲೂ ತೆರಿಗೆದಾರರ ಸಂಘಗಳನ್ನು ಸ್ಥಾಪಿಸುವಂತೆಯೂ, ಇದಕ್ಕೆ ಪೌರಸಭಾ ಸದಸ್ಯರುಗಳೆಲ್ಲರೂ ಸಹಕಾರ ನೀಡುವಂತೆ ಕೋರಬೇಕೆಂದೂ ನಿರ್ಧರಿಸಲಾಯಿತು. ಇದೇ ... ನೇ ತಾ|| ನಿಂದ ಒಂದು ವಾರ ಕಾಲ ಸದಸ್ಯರ ನೋಂದಣಿ ಕಾರ್ಯವನ್ನು ನಡೆಸಬೇಕೆಂದೂ, ... ಗಳಾದ ಬಿ. ಶ್ರೀಕಂಠಪ್ಪ ಮತ್ತು ವೇದಾಂತ ಹೆಮ್ಮಿಗೆಯವರು ಈ ಕಾರ್ಯದ ವ್ಯವಸ್ಥೆಯ ಜವಾಬ್ದಾರಿಯನ್ನು ವಹಿಸಬೇಕೆಂದೂ ತೀರ್ಮಾನಿಸಲಾಯಿತು.

ನಾಳೆ ನೀರು ಸರಬರಾಜು ಇಲ್ಲ

ನಾಳೆ ಭಾನುವಾರ ನಗರದಲ್ಲಿ ಬೆಳಗ್ಗೆ ೮ ಗಂಟೆಯಿಂದ ಮಧ್ಯಾಹ್ನ ೧ ಗಂಟೆವರೆಗೆ ವಿದ್ಯುಚ್ಛಕ್ತಿ ಇರುವುದಿಲ್ಲವಾದ ಪ್ರಯುಕ್ತ, ಆ ಹೊತ್ತಿನಲ್ಲಿ ನೀರು ಸರಬರಾಜು ಸಹ ಇರುವುದಿಲ್ಲವೆಂದೂ, ನಗರ ನಿವಾಸಿಗಳು ಮುಂಚಿತವಾಗಿಯೇ ನೀರನ್ನು ಶೇಖರಿಸಿಕೊಳ್ಳಬೇಕೆಂದೂ ಪೌರಸಭಾ ಕಮೀಷನರವರು ತಿಳಿಸಿರುತ್ತಾರೆ.

ಗಣಪತಿ ಮಂಗಳಾರತಿ ಮತ್ತು ಸಂಗೀತ

ರಾಜಧಾನಿಯ ವಾಣಿವಿಲಾಸ ರಸ್ತೆಯಲ್ಲಿರುವ ... ಕ್ಯಾತನಹಳ್ಳಿ, ಪಟೇಲ್ ಸಿದ್ದಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿ ಸಂಘದವರು ನಾಳೆ ಸಂಜೆ ೬ ಗಂಟೆಗೆ ಶ್ರೀ ವಿದ್ಯಾ ಗಣಪತಿ ವಿ.ಹಾ ಮಂಗಳಾರತಿಯನ್ನು ನೆರವೇರಿಸುವರು. ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಬಾಲಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸುವರು. ಮಹಾರಾಜಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಡಿ. ಎಲ್ ನರಸಿಂಹಾಚಾರ್ಯರು ಭಾಷಣ ಮಾಡುವರು. ಆ|| ವಿ|| ಬಿ.ಎಂ. ಶಿವ... ನವರ ಸಂಗೀತವು ನಡೆಯುವುದು.

ರಾಜಧಾನಿಯ ಜಯಲಕ್ಷ್ಮೀಪುರದಲ್ಲಿರುವ ಶ್ರೀ ಅನಂತಸ್ವಾಮಿಗಳವರ ಆಶ್ರಮದ ... ಯಲ್ಲಿ ಶ್ರೀ ಸ್ವಾಮಿಗಳವರ ಜನ್ಮೋತ್ಸವವು ... ನೇ ತಾ|| ನಿಂದ ನಡೆಯುತ್ತಿದೆ. ಅದರಂಗವಾಗಿ ನಾಳೆ ಸಂಜೆ ... ಗಂಟೆಗೆ ... ವಿ|| ಬಿ. ದೇವೇಂದ್ರಪ್ಪನವರು ಮತ್ತು ... ಯವರಿಂದ ಸಂಗೀತವು ನಡೆಯುವುದು.

ಪ್ರವಾಹ ತಡೆಯದಿದ್ದಲ್ಲಿ ಇಡೀ ಅಸ್ಸಾಂ ಪ್ರಾಂತದ ನಾಶ

ಪ್ರವಾಹವನ್ನು ತಡೆಯದಿದ್ದರೆ ಇಡೀ ಅಸ್ಸಾಂ ಕಣಿವೆಯೇ ನಾಶವಾಗಿ ಪ್ರಾಂತದ ಇರುವಿಕೆಗೆ ಧಕ್ಕೆ ಬರುವುದೆಂದು ಅಸ್ಸಾಂ ಸರ್ಕಾರದವರು ಪ್ರಧಾನಿ ನೆಹರೂರವರು ಅಲ್ಲಿಗೆ ಪ್ರವಾಸ ... ಕೊಟ್ಟಿದ್ದಾಗ ಸಲ್ಲಿಸಿದ ಮನವಿಯಲ್ಲಿ ತಿಳಿಸಿರುತ್ತಾರೆ. ... ಮತ್ತು ... ರುಗಳ ನಷ್ಟ ೧೬|| ಕೋಟಿ ರೂ. ಆಗಿರುವುದು ಹೇಳಲಾಗಿದೆ.

ಗೋ ವಧಾ ನಿರೋಧ ಪ್ರದರ್ಶಕರಿಗೂ, ಪೊಲೀಸರಿಗೂ ಘರ್ಷಣೆ

ಕಲ್ಕತ್ತೆಯ ಶಾಸನ ಸಭಾ ಭವನದ ಆವರಣದಲ್ಲಿ ೫,೦೦೦ ಜನ ಗೋವಧಾ ನಿರೋಧ ಚಳುವಳಿಗಾರರು ಮತ್ತು ಅವರ ಸಹಾನುಭೂತಿಗಾರರಿಗೂ, ಪೊಲೀಸರಿಗೂ ನೆನ್ನೆ ಘರ್ಷಣೆ ನಡೆದುದರ ಪರಿಣಾಮವಾಗಿ ಒಬ್ಬನು ಮೃತಪಟ್ಟು ೩೧ ಜನರಿಗೆ ಗಾಯವಾಗಿದೆ. ಗಾಯಗೊಂಡವರಲ್ಲಿ ಒಬ್ಬ ಅಧಿಕಾರಿಯೂ, ೬ ಮಂದಿ ಪೊಲೀಸರೂ ಇರುವರು. ಜನರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಶಾಸನ ಸಭಾ ಭವನವನ್ನು ಪ್ರವೇಶಿಸಲೆತ್ನಿಸಿ ಪೊಲೀಸರ ಮೇಲೆ ಕಲ್ಲುಗಳನ್ನು ಎಸೆದುದರಿಂದ ಕೆಲ ಸಲ ಅಶ್ರು ವಾಯು ಪ್ರಯೋಗ ಮತ್ತು ಹಲವಾರು ಬಾರಿ ಲಾಠಿ ಪ್ರಹಾರಗಳು ಆದುವು. ಮೆರವಣಿಗೆಯ ನಾಯಕತ್ವ ವಹಿಸಿದ್ದ ಸೋಹನಲಾಲ್ ದುಗಾಡ್ ಮತ್ತು ಇತರ ೮೫ ಜನರನ್ನು ಬಂಧಿಸಲಾಗಿದೆ.

ಆಫ್ರಿಕಾ ಭೂಕಂಪದಲ್ಲಿ ೫,೦೦೦ ಮಂದಿಗೆ ಗಾಯ

ಉತ್ತರ ಆಫ್ರಿಕದ ಅಲ್ಜೀರ್ಸ್ ಪ್ರಾಂತದ ಆರ್ಲಿಯನ್ಸ್‌ವಿಲ್ಲೆಯಲ್ಲಿ ಕಳೆದ ದಿವಸ ಒಂದೇ ಸಮನೆ ಭೂಕಂಪದಲ್ಲಿ ಐದಾರು ಸಾವಿರ ಮಂದಿಗೆ ಗಾಯವಾಗಿರುವುದೆಂದು ತಿಳಿದುಬಂದಿದೆ. ೨೦,೦೦೦ ಜನರು ನೆಲೆಯಿಲ್ಲದಾಗಿರುವರು. ೪೦೦ ಕೋಟಿ ಫ್ರಾಂಕಿನಷ್ಟು ಆಸ್ತಿ ನಷ್ಟವಾಗಿದೆ. ಕಲ್ಲು, ಇಟ್ಟಿಗೆ ಮುಂತಾದುವು ಬಿದ್ದು ಸಾವಿರ ಜನರ ತಲೆ ಸೀಳಿರುತ್ತವೆ. ಆ ಊರಿನಲ್ಲಿ ಒಂದು ಮನೆಯೂ ಜಖಂ ಆಗದೆ ಉಳಿದಿಲ್ಲ.

ಗೋಮಟಗಿರಿಯಲ್ಲಿ ಮಸ್ತಕಾಭಿಷೇಕ

ಇಲವಾಲದ ಬಳಿ ಇರುವ ಶ್ರೀ ಗೋಮಟಗಿರಿ ಕ್ಷೇತ್ರದಲ್ಲಿ ಪ್ರತಿ ವರ್ಷದಂತೆ ಈ ಸಾರಿಯೂ ಕಳೆದ ೫ ನೇ ತಾ|| ಶ್ರೀ ಗೋಮಟೇಶ್ವರ ಸ್ವಾಮಿಯವರಿಗೆ ಮಹಾ ಮಸ್ತಕಾಭಿಷೇಕವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಸರ್ದಾರ್ ಕೆ. ಬಸವರಾಜ ಅರಸಿನವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಬಾಲಸುಬ್ರಹ್ಮಣ್ಯಂ ಮತ್ತು ಇತರ ಅಧಿಕಾರಿಗಳು ಭಾಗವಹಿಸಿದ್ದರು. ಸಂಸ್ಥಾನದ ಎಲ್ಲ ಕಡೆಗಳಿಂದಲೂ ಅನೇಕ ಭಕ್ತರು ಆಗಮಿಸಿದ್ದರು. ಆ ಕ್ಷೇತ್ರದ ಅಭಿವೃದ್ಧಿ ಕೆಲಸಗಳನ್ನು ಸೇವಾ ಸಮಿತಿಯವರು ನಡೆಸುತ್ತಿರುವರು.

ಮಹಿಳೆಯ ಮೇಲೆ ಕೈ ಮಾಡಿದ ಆಪಾದನೆ ಬಗ್ಗೆ ತೀರ್ಪು

ರಾಜಧಾನಿಯ ದೇವರಾಜ ಮೊಹಲ್ಲಾ ... ಗಾಡಿ ... ನವರ ಗಲ್ಲಿಯಲ್ಲಿ ವಾಸವಾಗಿರುವ ನಾಗಮ್ಮ ಉರುಫ್ ಜಯಮ್ಮನವರ ಮೇಲೆ ಶ್ರೀಗಳಾದ ಎಸ್. ಪಿ. ನಾಗನರಸಿಂಹಶೆಟ್ಟಿ ಮತ್ತು ಅವರ ಸಹೋದರ ಶ್ರೀ ಎಸ್. ಪಿ. ... ರವರುಗಳು ಕೈ ಮಾಡಿದರೆಂದು ಶ್ರೀ ... ರವರು ಹೂಡಿದ್ದ ಮೊಕದ್ದಮೆಯಲ್ಲಿ ಎರಡನೇ ನಗರ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು ಆಪಾದಿತರು ತಪ್ಪಿತಸ್ಥರೆಂದು ತಿಳಿಸಿ, ಅವರಿಗೆ ಎಚ್ಚರಿಕೆಯಿತ್ತು ಬಿಡುಗಡೆ ಮಾಡಿದರು.

ಜನವರಿಯಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ

ಬೆಂಗಳೂರು ೧೧

ವಯಸ್ಕರ ಮತದಾನ ಪದ್ಧತಿಯ ಮೇರೆ ಇದೇ ಮೊದಲಾಗಿ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಸಂಸ್ಥಾನದ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸಲಾಗುವುದೆಂದು ಸ್ಥಳೀಯ ಸಂಸ್ಥೆಗಳ ಕಮೀಷನರಾದ ಶ್ರೀ ಎಸ್ ಎಸ್ ಹಿರಣ್ಣಯ್ಯನವರು ತಿಳಿಸಿರುತ್ತಾರೆ. ೧೯೫೪ ರ ಗ್ರಾಮ ಪಂಚಾಯಿತಿ ಶಾಸನದ ಪ್ರಕಾರ ೧,೦೦೦ ಪ್ರಜಾ ಸಂಖ್ಯೆಯುಳ್ಳ ಪ್ರತಿ ಗ್ರಾಮಕ್ಕೂ ಪಂಚಾಯಿತಿಯು ಇರುವುದು.

"ಸುಳ್ಳು ಆಜ್ಞೆ"ಯಿಂದ ಮುಲಾಜೆಯಾದವನಿಗೆ ೫ ವರ್ಷ ಸಜಾ

ಬೆಂಗಳೂರಿನ ಮುಖ್ಯ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ ಎನ್ ಪದ್ಮನಾಭಯ್ಯನವರು ನೆನ್ನೆ ಎಸ್ ಎಸ್ ಕಮಾಲ್ ಉರುಫ್ ಜಲ್ ಎಂಬಾತನಿಗೆ ೫ ವರ್ಷ ಕಠಿಣ ಸಜಾ ವಿಧಿಸಿದರು. ಕೆಲವು ತಿಂಗಳ ಹಿಂದೆ ಅವನು ಕ್ರಿಮಿನಲ್ ಮೊಕದ್ದಮೆ ಯೊಂದರಲ್ಲಿ ವಿಚಾರಣಾಧೀನನಾಗಿದ್ದ ನ್ಯಾಯಾಧೀಶರ ಹೆಸರಿನಲ್ಲಿ ಸುಳ್ಳು ಆಜ್ಞೆಯೊಂದನ್ನು ಪಡೆದು ಬಿಡುಗಡೆ ಹೊಂದಿದ್ದ ಬಗ್ಗೆ ಶಿಕ್ಷೆಯನ್ನು ವಿಧಿಸಲಾಯಿತು. ಈ ಕಾರ್ಯದಲ್ಲಿ ಅವನಿಗೆ ಸಹಾಯ ಮಾಡಿದ ಜೈಲು ವಾರ್ಡರ್ ಅಂತೋನಿ ಎಂಬುವನಿಗೂ ೫ ವರ್ಷ ಕಠಿಣ ಸಜಾ ಕೊಡಲಾಗಿದೆ. "ಆಜ್ಞಾ ಪತ್ರ"ವನ್ನು ತಯಾರಿಸಲು ಸಹಾಯಕಳಾದ ಕಮಲಮ್ಮ ಎಂಬ ಮಹಿಳೆಗೆ ೨ ವರ್ಷ ಕಠಿಣ ಸಜಾ ವಿಧಿಸಲಾಗಿದೆ.

ಅಕ್ಟೋಬರ್‌ನಿಂದ ಸರ್ಕಾರೀ ಅಕ್ಕಿ ಮಾರಾಟ ಇಲ್ಲ

ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ಡಿಪೋಗಳ ಮೂಲಕ ಸಾರ್ವಜನಿಕರಿಗೆ ಒದಗಿಸುತ್ತಿದ್ದ ಅಕ್ಕಿಯನ್ನು ಇದೇ ಅಕ್ಟೋಬರ್ ೧ನೇ ತಾರೀಖಿನಿಂದ ಮುಂದೆ ಸರಬರಾಜು ಮಾಡುವ ಜವಾಬ್ದಾರಿಯು ತಮಗೆ ತಪ್ಪಿದೆಂದೂ, ಜನರು ಬಹಿರಂಗ ಮಾರುಕಟ್ಟೆಯಲ್ಲೇ ಕೊಳ್ಳಬೇಕಾಗುವುದೆಂದೂ ತಿಳಿಸಿರುತ್ತಾರೆ. ತಮ್ಮ ಬಳಿ ಇರುವ ಧಾನ್ಯದಲ್ಲಿ ಬಹು ಭಾಗವನ್ನು ಕೇಂದ್ರ ಆಹಾರ ರಿಸರ್ವಿಗೆ ಒಪ್ಪಿಸಲು ನಿರ್ಧಾರವಾಗಿರುವುದಾಗಿಯೂ ಸರ್ಕಾರದವರು ತಿಳಿಸಿರುತ್ತಾರೆ. ಬಹಿರಂಗ ಮಾರುಕಟ್ಟೆಯಲ್ಲಿ ಅಕ್ಕಿಯು ನ್ಯಾಯವಾದ ಬೆಲೆಯಲ್ಲಿ ಬೇಕಾದಷ್ಟು ದೊರೆಯುತ್ತಿರುವುದೆಂದೂ ಪ್ರಕಟಣೆಯು ತಿಳಿಸಿರುತ್ತದೆ.

ದೇವಿ ಸಾಕಮ್ಮನವರಿಗೆ ತಲೆ ಮೇಲೆ ಕಲ್ಲು ಬಿದ್ದು ಗಾಯ

ಮೈಸೂರು ೧೧

ಧರ್ಮ ಪರಾಯಣೆ ದೇವಿ ಸಾಕಮ್ಮನವರು ನೆನ್ನೆ ತಮ್ಮ ಮನೆಯ ಕಟ್ಟಡದಲ್ಲಿ ಕುಳಿತಿದ್ದಾಗ ಗೋಡೆಯ ... ನಾಗವಾದ ಸೈಜುಗಲ್ಲು ಬಿದ್ದು ಅವರ ತಲೆ ಜಖಂ ಆಯಿತು. ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಯಿತು. ಈ ಬಗ್ಗೆ ಕೃಷ್ಣರಾಜಾ ಪೋಲೀಸರು ತನಿಖೆ ನಡೆಸುತ್ತಿರುವರು.

ಕೈ ಅಕ್ಕಿ ಬಳಕೆಯಿಂದ ಗ್ರಾಮ ನಿರುದ್ಯೋಗ ನಿವಾರಣೆ

ಅಖಿಲ ಭಾರತ ಕೈ ಅಕ್ಕಿ ಪ್ರಚಾರಕ ಆರ್.ಎ. ಪಟೇಲರ ವಿವರಣೆ

ಮೈಸೂರು ೧೧

ಅಖಿಲ ಭಾರತ ಕೈ ಅಕ್ಕಿ ತಯಾರಿಕಾ ಪ್ರಚಾರದ ವ್ಯವಸ್ಥಾಪಕರಾದ ಶ್ರೀ ರಾಜಿಭಾಯ್ ಎಸ್ ಪಟೇಲ್‌ರವರು ನೆನ್ನೆ ರಾತ್ರಿ ಇಲ್ಲಿಗೆ ಆಗಮಿಸಿ ಮರುದಿನ ಬೆಳಗ್ಗೆ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿದರು.

ದೇಶದಲ್ಲಿ ಶೇಕಡ ೬೦ ಜನರು ಕೈ ಅಕ್ಕಿಯನ್ನು ಉಪಯೋಗಿಸುತ್ತಿರುವರೆಂದೂ ಇದನ್ನು ಹೆಚ್ಚು ಪ್ರಚಾರಕ್ಕೆ ತಂದಲ್ಲಿ ೬೦ ಲಕ್ಷ ಜನರಿಗೆ ಉದ್ಯೋಗ ದೊರೆಯುವುದೆಂದೂ ಅವರು ತಿಳಿಸಿದರು. ಅದನ್ನು ಅರ್ಥದಷ್ಟು ಕಡಿಮೆ ಮಾಡಿದರೆ ಶೇಕಡ ೬೦ ಮಂದಿಗೆ ಕೆಲಸವಿಲ್ಲದಂತಾಗುವುದೆಂದೂ, ಗ್ರಾಮಗಳಲ್ಲಿ ಕೆಲಸವು ಸಿಕ್ಕದೆ ಹಳ್ಳಿಗರು ಪಟ್ಟಣಗಳಿಗೆ ಬರುತ್ತಿರುವುದರಿಂದ ಈ ಕೈಗಾರಿಕೆಗೆ ಉತ್ತೇಜನ ಕೊಡುವುದರ ಮೂಲಕ ಅವರುಗಳಿಗೆ ಉದ್ಯೋಗ ದೊರಕಿಸಿದಂತಾಗುವುದಲ್ಲದೆ ಇದಕ್ಕಾಗಿ ಯಾವ ಬಂಡವಾಳವನ್ನೂ ಹಾಕಬೇಕಾಗುವುದಿಲ್ಲವೆಂದೂ, ರೈತನು ತನ್ನ ವಿರಾಮ ಕಾಲದಲ್ಲಿ ಇದನ್ನು ನಡೆಸಬಹುದೆಂದೂ ಅವರು ತಿಳಿಸಿ ವ್ಯರ್ಥವಾಗುತ್ತಿರುವ ಮನುಷ್ಯ ಶಕ್ತಿಯನ್ನು ಉಪಯೋಗಿಸಿಕೊಳ್ಳಲು ಅವಕಾಶವಾಗುವುದೆಂದು ಹೇಳಿದರು. ಗಿರಣಿ ಅಕ್ಕಿಯಲ್ಲಿ ಶೇಕಡ ೩೦ ಮಾತ್ರ ವಿಟಮಿನ್ "ಬಿ" ಯು ಇರುವುದೆಂದೂ, ಕೈ ಅಕ್ಕಿಯಲ್ಲಿ ಶೇಕಡ ೬೦ ರಷ್ಟು ಸಾರವು ದೊರೆಯುವುದೆಂದೂ ಅವರು ನುಡಿದರು.

ಅಗ್ಗವಾಗಿ ಸಿಕ್ಕುವುದಾದರೂ ಮಿಲ್ಲಿನಿಂದ ತಯಾರಿಸಲಾದ ವಸ್ತ್ರಗಳನ್ನು ಕೊಳ್ಳದೆ ಗ್ರಾಮೀಣರು ಕೈಯಿಂದ ತಯಾರಾದ ವಸ್ತ್ರಗಳನ್ನು ಮಾತ್ರ ಕೊಳ್ಳುವರೆಂದೂ ಆ ಮನೋಭಾವವು ನಮ್ಮ ಜನರಲ್ಲೂ ಬೆಳೆಯಬೇಕೆಂದೂ ಅವರು ನುಡಿದರು.

ಅನಂತರ ಶ್ರೀ ಪಟೇಲ್‌ರವರು ಕೇಂದ್ರ ಆಹಾರ ಸಂಶೋಧನಾಲಯ, ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯ ಮತ್ತು ಎಂ. ಆರ್. ಪುಟ್ಟಸ್ವಾಮಿಯವರ ಅಗರಬತ್ತಿ ಕಾರ್ಖಾನೆಗಳಿಗೆ ಭೇಟಿಯಿತ್ತರು. ಇಂದು ರಾತ್ರಿ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತು ಅಲ್ಲಿಂದ ಶಿವಮೊಗ್ಗಕ್ಕೆ ಪ್ರಯಾಣ ಮಾಡುವರು.

ಗಣಪತಿ ಮಂಗಳಾರತಿ

ದಿವಾನರ ರಸ್ತೆಯಲ್ಲಿರುವ ಲಿಂಗೋಜಿರಾವ್ ರಾಮರಾವ್ ಉತ್ತರಾದಿ ವಿದ್ಯಾರ್ಥಿ ನಿಲಯದಲ್ಲಿ ನಾಳೆ ವಿದ್ಯಾ ಗಣಪತಿ ಮಂಗಳಾರತಿಯು ಇದೆ. ಪ್ರಥಮ ದರ್ಜೆ ಕಾಲೇಜಿನ ಶ್ರೀ ಡಿ. ಸು ... ರಾಯರು ಭಾಷಣ ಮಾಡುವರು.

ಪ್ರಧಾನಿ ನೆಹರೂರವರು ದೆಹಲಿ ... ಸಂಘದಲ್ಲಿ ಭಾಷಣ ಮಾಡಿ ವಿಶ್ವದ ರಾಷ್ಟ್ರಗಳು ಶಸ್ತ್ರಾಸ್ತ್ರವನ್ನು ತಗ್ಗಿಸುವುದಾಗಿ ಹೇಳುತ್ತಾ, ಶಸ್ತ್ರಕ್ಕೆ ಪ್ರೋತ್ಸಾಹಕೊಡುವ ಕಾರ್ಯದಲ್ಲಿ ನಿರತರಾಗಿರುವ ... ವನ್ನು ಟೀಕಿಸಿದರು.

ಅಕ್ಟೋಬರ್ ೧ ರಿಂದ ಮಾರ್ಕೆಟ್ ಅಂಗಡಿಗಳು ಬಂದ್

ವರ್ತಕರ ಸಂಘಕ್ಕೆ ಮನ್ನಣೆಗಾಗಿ ಒತ್ತಾಯಪಡಿಸಲು ಯತ್ನ

ಮೈಸೂರು ೧೧

ನಗರದ ಪೌರಸಭಾ ಮಾರ್ಕೆಟ್ಟುಗಳ ವರ್ತಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಶ್ರೀ ಎಸ್. ಗೋಪಾಲರಾವ್‌ರವರ ಅಧ್ಯಕ್ಷತೆಯಲ್ಲಿ ಜರುಗಿ ಪೌರಸಭಾ ಅಧಿಕಾರಿಗಳು ಸಂಘಕ್ಕೆ ಮನ್ನಣೆ ಕೊಡುವುದಿಲ್ಲವೆಂದು ತಿಳಿಸಿರುವ [illegible] ಪತ್ರವನ್ನು ಪರಿಶೀಲಿಸಿ ಸಂಘದ ಬಗ್ಗೆ [illegible] ರಿಜಿಸ್ಟರ್ ಆದ ಸಂಘವನ್ನು ಪೌರಸಭೆಯವರು ಪುರಸ್ಕರಿಸದಿರುವುದಕ್ಕೆ ಪ್ರತಿಭಟಿಸಲು ಮತ್ತು ಸಂಘಕ್ಕೆ ಮನ್ನಣೆಯಾಗುವಂತೆ ಒತ್ತಾಯಪಡಿಸಲು ಇದೇ ಅಕ್ಟೋಬರ್ ೧ ನೇ ತಾರೀಖಿನಿಂದ ಎಲ್ಲಾ ಅಂಗಡಿಗಳನ್ನೂ ಮುಚ್ಚಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಯಿತು. ಎಂತಹ ಸನ್ನಿವೇಶವೊದಗಿದರೂ ಮಾರ್ಕೆಟ್ ವರ್ತಕರು ಶಾಂತಿ ಮತ್ತು ಒಗ್ಗಟ್ಟಿನಿಂದ ಕೂಡಿ ಇರಬೇಕೆಂದೂ, ನಾಗರಿಕರು ವರ್ತಕರಿಗೆ ಬೆಂಬಲ ನೀಡಬೇಕೆಂದೂ ಕೋರಲಾಯಿತು.

ಭಾರತ ಸೇವಾ ದಳದ ಸಹಸ್ರ ಮಂದಿಯ ಶ್ರಮದಾನ ಶಿಬಿರ

ಭಾರತ ಸೇವಾ ದಳದ ಒಂದು ಸಾವಿರ ಮಂದಿ ಸೇವಾದಳ ಬಂಧುಗಳು ಮೇಲುಕೋಟೆ ಬಳಿ [illegible] ಗ್ರಾಮದ ಹತ್ತಿರ ಶಿಬಿರವನ್ನು [illegible] ಇದೇ ೨೫ ನೇ ತಾ|| ನಿಂದ ೧೫ ದಿವಸಗಳು ಜರುಗುವುದು. ದಳಪತಿ ಶ್ರೀ ಎನ್. ಎ. [illegible] ರು ಶಿಬಿರಾಧಿಪತಿಗಳಾಗಿರುವರು. ಮೈಸೂರು ಮತ್ತು ಮಂಡ್ಯ ಜಿಲ್ಲೆಯ [illegible] ಈ ಶಿಬಿರದಲ್ಲಿ ಸೇರ [illegible] ಮೈಸೂರು ಹಾಗೂ ಮಂಡ್ಯ ಜಿಲ್ಲಾ ಸೇವಾದಳ ಕಛೇರಿಗೆ ಬರೆಯಬೇಕೆಂದು ತಿಳಿಸಲಾಗಿದೆ.

ವೀಣಾ ವಾದನ

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಾಳೆ ಸಂಜೆ ೬ ಘಂಟೆಗೆ ಶಾಲಾ ಬಂಧಿತರುಗಳಿಂದ ವಿದ್ವಾಂಸರಾದ ಶಾಸ್ತ್ರದ ಬಗ್ಗೆ ವ್ಯಾಖ್ಯಾನವೂ ನಂತರ ಸಂಗೀತ ವಿದ್ವಾನ್ ದೊರೆಸ್ವಾಮಯ್ಯಂಗಾರ್ಯರ ವೀಣಾ ವಾದನವು [illegible] ವೆಂಕಟೇಶ [illegible] ರವರ ಮೃದಂಗದೊಡನೆಯೂ ನಡೆಯುವುವು.

ಪದ್ಮ ವಿಭೂಷಣ ಪ್ರಶಸ್ತಿಯ ವಾಪಸು

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಹಸೇನ್ ಮದಾನಿಯವರ ಸಾಹಿತ್ಯ ಸೇವೆ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿ ಅವರಿಗೆ ಕೊಟ್ಟಿದ್ದ ಎರಡನೇ ವರ್ಗದ ಪದ್ಮವಿಭೂಷಣ ಪ್ರಶಸ್ತಿಯನ್ನು ವಾಪಸು ಕಳುಹಿಸಿ, ಪ್ರಶಸ್ತಿಯನ್ನು ಸ್ವೀಕರಿಸುವ ಸಂಪ್ರದಾಯವು ತಮ್ಮ ಪೂರ್ವಿಕರಿಂದಲೂ ಬಂದಿಲ್ಲವಾದುದರಿಂದ ಅದನ್ನು ಅಂಗೀಕರಿಸಲು ತಮ್ಮ ಅಪೇಕ್ಷೆ ಇದ್ದ ಪುದಿಲ್ಲವೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

ನೋಟೀಸು

[illegible] ಬಗ್ಗೆ [illegible] ತಮ್ಮ [illegible] ಪಡುವುದೇನೆಂದರೆ —

ನನ್ನ ತಮ್ಮ ಸುಮಾರು 26 ವರ್ಷದ [illegible] ಈ 17–18 ದಿವಸಗಳಲ್ಲಿ ಅತ್ತಿಗೆ [illegible] ಹೋಗಿದ್ದೇನೆಂದು [illegible] ಎಲ್ಲಿ [illegible] ಸಿಕ್ಕಿಲ್ಲ [illegible] ಯಾರಿಗಾದರೂ [illegible]

[illegible] ಸಿಂಗಾಚಾರ್ಯರ್,

[illegible] ವಿದ್ಯಾರ್ಥಿ ನಿಲಯ

[illegible] ರಸ್ತೆ, ಮೈಸೂರು

ಅಮೇರಿಕಕ್ಕೆ ಲಿಬಿಯಾದಲ್ಲಿ ವಿಮಾನ ನೆಲೆ

ಲಿಬಿಯಾದಲ್ಲಿರುವ ವಿಮಾನ ನೆಲೆಗಳನ್ನು ಅಮೇರಿಕವು ಉಪಯೋಗಿಸಿಕೊಳ್ಳುವ ಬಗ್ಗೆ ಎರಡು ರಾಷ್ಟ್ರಗಳಿಗೂ ಒಪ್ಪಂದವಾಗಿರುವುದೆಂದೂ, ಇದರ ಪ್ರಕಾರ ಅಮೇರಿಕವು ಲಿಬಿಯಾವಿಗೆ ಈ ವರ್ಷ ೫೦ ಲಕ್ಷ ಮತ್ತು ಬರುವ ಸಾಲಿನಿಂದ ೨೦ ವರ್ಷಗಳ ವರೆಗೆ ಪ್ರತಿ ವರ್ಷವೂ ೨೦ ಲಕ್ಷ ಡಾಲರ್‌ನಂತೆ ಕೊಡಲು ಒಪ್ಪಿರುವುದಾಗಿಯೂ ಗೊತ್ತಾಗಿದೆ. ಅಲ್ಲದೆ ಲಿಬಿಯಾದ [illegible] ಯೋಜನೆಗಳ ಅಭಿವೃದ್ಧಿಗಾಗಿ [illegible] ಪ್ರತಿ ವರ್ಷವೂ ಸಹಾಯ ಮಾಡುವುದೆಂದೂ ವರದಿಯಾಗಿದೆ.

ಪುದುಚೇರಿಯಲ್ಲಿ ಸರ್ಕಾರದ ಆಸ್ತಿಗಳ ಪಟ್ಟಿ ತಯಾರಿ

ಫ್ರೆಂಚ್ ಭಾರತದ ಮಹಾ ಪಟ್ಟಣವಾದ ಪುದುಚೇರಿಯಲ್ಲಿರುವ ಸರ್ಕಾರದ ಎಲ್ಲಾ ಚರಸ್ಥಿರ ಆಸ್ತಿಗಳ ಪಟ್ಟಿ [illegible] ಲೆಕ್ಕ ಹಾಕಿ [illegible] ಅಧಿಕಾರಿಗಳಿಗೆ ಆಜ್ಞೆಯಾಗಿದೆ. ಫ್ರೆಂಚರು ಸ್ವಲ್ಪದಲ್ಲೇ ಪಟ್ಟಣದಿಂದ ಹೊರಡುವ ಪೂರ್ವಭಾವಿಯಾಗಿ ಈ ಏರ್ಪಾಡೆಂದು ನಂಬಲಾಗಿದೆ.

ಉಪನಯನ ಮತ್ತು ವಿವಾಹ

ಬೆಂಗಳೂರಿನಲ್ಲಿ ಚೀಫ್ ಕೈಲ್ಟ್ [illegible] ಆಗಿರುವ ಶ್ರೀ ಪಿ. ಆರ್. ಸುಬ್ರಹ್ಮಣ್ಯಂರವರು ತಮ್ಮ ಸೋದರರಾದ ಚಿ|| ಬಾಲಸುಬ್ರಹ್ಮಣ್ಯನಿಗೆ ಉಪನಯನವನ್ನೂ, ಸೋದರ ಸೊಸೆ ಸೌ|| ಪದ್ಮಾವತಿಯನ್ನು ಮೈಸೂರಿನ ಶ್ರೀ ಎ. ಶ್ರೀನಿವಾಸ ಅಯ್ಯಂಗಾರರ ಪುತ್ರರೂ, ಕೈಲ್ಟ್ ಅಕೌಂಟ್ಸ್ ಆಫೀಸಿನ ನೌಕರರೂ ಆದ ಶ್ರೀ ಎಂ. ಎಸ್. ರಂಗನಾಥ್‌ರವರಿಗೆ ಕೊಟ್ಟು ವಿವಾಹವನ್ನೂ ನೆನ್ನೆ ಬೆಂಗಳೂರಿನಲ್ಲಿ ನೆರವೇರಿಸಿದರು.

ರಾಜಧಾನಿ [illegible] ಕೊನೆ [illegible] ಶ್ರೀ ಬಿ. ಎಲ್. ನಾರಾಯಣಸ್ವಾಮಿ ಶೆಟ್ಟರು ತಮ್ಮ ಪುತ್ರ ಶ್ರೀ ಬಿ. ಎನ್. [illegible] ರವರಿಗೆ ಹಿಂದೂಪುರದ [illegible] ವರ್ತಕರಾದ ಶ್ರೀ ಪಿ. ಕೃಷ್ಣಯ್ಯಶೆಟ್ಟರವರ ಮಗಳು ಸೌ|| ಪುಷ್ಪವತಮ್ಮನನ್ನ ತಂದುಕೊಂಡ ನೆನ್ನೆ ಬಾಗ [illegible] ಶೆಟ್ಟರ ಛತ್ರದಲ್ಲಿ ವಿವಾಹವನ್ನು ನೆರವೇರಿಸಿದರು.

ಆಗ್ನೇಯ ಏಷ್ಯಾ ಒಪ್ಪಂದಕ್ಕೆ ಕೊಲಂಬೊ ರಾಷ್ಟ್ರಗಳ ಸಮ್ಮೇಳನ

ಸಿಂಹಳದ ಪ್ರಧಾನಿ ಕೊಟೆಲಾವಾಲಾರವರು ನೆನ್ನೆ ಒಂದು ಹೇಳಿಕೆಯನ್ನಿತ್ತು, ಆಗ್ನೇಯ ಏಷ್ಯಾ ರಕ್ಷಣಾ ಒಪ್ಪಂದದಿಂದ ಏಷ್ಯದ ಈ ಭಾಗಗಳಲ್ಲಿ ಶಾಂತಿಯನ್ನು ಕಲಕಿದಂತಾದೀತೆ, ಅಥವಾ ಹೊರಗಿನ ಆಕ್ರಮಣವನ್ನು ಎದುರಿಸಲು ಸಹಾಯವಾಗುವುದೋ ಎಂಬುದನ್ನು ಪರಿಶೀಲಿಸಲು ಕೊಲಂಬೊ ರಾಷ್ಟ್ರಗಳ ಸಮ್ಮೇಳನವೊಂದನ್ನು ಕರೆಯಬೇಕಾಗಬಹುದೆಂದು ತಿಳಿಸಿದರು.

SRI GAYATHRI TALKIES

On 11th & 12th Sept. 54

20th Century's

LEAVE HER TO HEAVEN

(Technicolor)

With -Cornel Wilde, Gen Tierney

ಬರೋಡ ನಗರದ ಮನೆಗಳು ಕುಸಿದುವು

ಬರೋಡಾದಲ್ಲಿರುವ ಒಡೋಚ್ ನಗರದಲ್ಲಿ ಕಳೆದ ಭಾನುವಾರ ಆದ ಭಾರಿ ಮಳೆಯ ಪರಿಣಾಮವಾಗಿ ೫೦ ಮನೆಗಳು ಕುಸಿದು, ೬೬ ಗೃಹಗಳಿಗೆ ಹಾನಿಯಾಯಿತು. ೫ ಜನರ ಪ್ರಾಣ ಹಾನಿಯಾಗಿದೆ. ೫ ಲಕ್ಷ ರೂ. ಆಸ್ತಿ ನಷ್ಟವಾಗಿದೆ. ೧ ದಿನದಲ್ಲಿ ೧೯ ಅಂಗುಲ ಮಳೆಯಾಗಿದೆ.

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಸಮ್ಮೇಳನ

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಸಮ್ಮೇಳನವು ನೆಲಮಂಗಲದಲ್ಲಿ ಈ ತಿಂಗಳ ೧೮ ಮತ್ತು ೧೯ನೇ ತಾ|| ಸೇರುವುದು. ರೆವಿನ್ಯೂ ಮಂತ್ರಿ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸುವರು. ಸಿದ್ದಗಂಗಾ ಮಠದ ಸ್ವಾಮಿಗಳವರು ಆರಂಭೋತ್ಸವವನ್ನು ನೆರವೇರಿಸುವರು.

ವಿದ್ಯಾ ಗಣಪತಿ ಪೂಜೆ

ಚಾಮರಾಜನಗರದ ಶ್ರೀ ಇನ್‌ಸ್ಟಿಟ್ಯೂಟ್ ಆಫ್ [illegible] ಮತ್ತು ಆರವಿಂದ ಹಿಂದೀ ಮಂದಿರದ ವಿದ್ಯಾರ್ಥಿ ಸಂಘದವರು ಕಳೆದ ಬುಧವಾರದಿಂದ ಶನಿವಾರದವರೆಗೆ ಶ್ರೀ ವಿದ್ಯಾ ಗಣಪತಿ ಪೂಜಾ ಮಹೋತ್ಸವವನ್ನು ನೆರವೇರಿಸಿದರು. ಬುಧವಾರ ಶ್ರೀಮತಿ ರುಕ್ಮಿಣಮ್ಮನವರಿಂದ ಹಾಡುಗಾರಿಕೆಯೂ ಶ್ರೀ ಕೃಷ್ಣಮೂರ್ತಿಯವರಿಂದ ಮಂಜರಿ, ಲಕ್ಷ್ಮೀನರಸಿಂಹಯ್ಯನವರಿಂದ ಹಾರ್ಮೋನಿಯಂ, ಶ್ರೀ ಸುಬ್ಬಸ್ವಾಮಯ್ಯನವರ ಡೋಲಕ್‌ನೊಡನೆ ನಡೆಯಿತು. [illegible] ವಾರ ವಿದ್ಯಾ [illegible] ಹಮೂರ್ತಿಯವರಿಂದ ಕಿರಾತಾರ್ಜುನೀಯ ಎಂಬ ಹರಿಕಥೆಯೂ ನಡೆಯಿತು. ಶುಕ್ರವಾರ ಶ್ರೀ ಕೃಷ್ಣವರ್ಮ ಮತ್ತು ಶ್ರೀ ಕಪಲಂದೆ ತಿಪ್ಪನವರಿಂದ ಹಾಡು [illegible] ಸಿ. ಎಸ್. ಪುಟ್ಟಣ್ಣ ಮತ್ತು ಶ್ರೀ ಕಪಲಂದೆ ಶಿವಪ್ಪನವರಿಂದ ಕೊಳಲು ಡೋಲಕ್ ವಾದನದೊಡನೆ ಸುಶ್ರಾವ್ಯವಾಗಿ ನೆರವೇರಿತು. ಶನಿವಾರ ಶ್ರೀ ವಿದ್ಯಾಗಣಪತಿಗೆ ಹೂವಿನ ಪಲ್ಲಕ್ಕಿ ಉತ್ಸವವು ವಿದ್ಯಾರ್ಥಿ [illegible] ವಂಗಳವಾದ್ಯಗಳು ಮತ್ತು ಬಾಣಬಿರುಸುಗಳೊಡನೆ ನೆರವೇರಿಸಲ್ಪಟ್ಟಿತು.

ಪ್ರತಿ ದಿವಸ ಕಾರ್ಯಕ್ರಮವೂ, ಮಹಾ ಮಂಗಳಾರತಿ ಮತ್ತು [illegible] ರವರಿಂದ ವಂದನಾರ್ಪಣೆಯಾದನಂತರ ಪ್ರಸಾದ ವಿನಿಯೋಗದೊಡನೆ ಮುಕ್ತಾಯವಾಗುತ್ತಿತ್ತು.

ಲೆಬನಾನ್ ಮಂತ್ರಿಮಂಡಲವು ಹಲವು ಆಂತರಿಕ ಕಾರಣಗಳಿಗಾಗಿ ಮೊನ್ನೆ ರಾಜೀನಾಮೆಯಿತ್ತಿರುವುದೆಂದೂ, ಅಲ್ಲಿನ ಅಧ್ಯಕ್ಷರು ಹೊಸ ಸರ್ಕಾರದ ರಚನೆ ಬಗ್ಗೆ ಸಮಾಲೋಚನೆಗಳನ್ನು ನಡೆಸುತ್ತಿರುವರೆಂದೂ ಗೊತ್ತಾಗಿದೆ.

SREE GANESHA TALKIES

GALA RELEASE

On 11-9-54 Daily 3 Shows

For 5 Days Only

Universal International's

THE GLASS WEB

In 3-Dimension

With – Edward G Robinson, Kathreen Hughes

(The Ultimate Suspense Drama in 3-D)

ವಿರಾಮ ವೇತನದ ಕಾಗದ ಪತ್ರಗಳ ವಿಲೇವಾರಿ

ಬೇಗನೆ ಆಗಬೇಕೆಂದು ಅಧಿಕಾರಿಗಳಿಗೆ ರೆವಿನ್ಯೂ ಮಂತ್ರಿಗಳ ಸೂಚನೆ

ಬೆಂಗಳೂರು ೧೧

ಸರ್ಕಾರದ ಕಾರ್ಯದರ್ಶಿಗಳು, ಎಲ್ಲ ಇಲಾಖಾ ಮತ್ತು ಜಿಲ್ಲಾಧಿಕಾರಿಗಳು ಮುತ್ತು [illegible] ಅಧಿಕಾರಿಗಳ ಸಭೆಯು ನೆನ್ನೆ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಸ್ಥಾನದ ಅಕೌಂಟೆಂಟ್ ಜನರಲ್ಲರು ಹಾಜರಿದ್ದರು. ನಿವೃತ್ತ ನೌಕರರ ವಿರಾಮ ವೇತನಗಳಿಗೆ ಸಂಬಂಧಿಸಿದ ಕಾಗದ ಪತ್ರಗಳ ವಿಲೇವಾರಿಯು ತಡವಾಗುತ್ತಿರುವುದನ್ನು ತಿಳಿಸಿ, ಅದರಿಂದ ವೇತನದಾರರಿಗೆ ಉಂಟಾಗುತ್ತಿರುವ ತೊಂದರೆ ಕಡೆಗೆ ಅಧಿಕಾರಿಗಳ ಗಮನವನ್ನು ರೆವಿನ್ಯೂ ಮಂತ್ರಿಯವರು ಸೆಳೆದರು. ಮುಂದೆ ಈ ಬಗ್ಗೆ ದಸ್ತಾವೇಜುಗಳು ಬೇಗ ತಯಾರಾಗಬೇಕೆಂದು ಅವರು ಸೂಚಿಸಿದರು. ಅನಂತರ ಅಧಿಕಾರಿಗಳು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವ ವಿಷಯವನ್ನು ಚರ್ಚಿಸಿದರು.

ಮೈಸೂರು ಪೇಟೆ ಧಾರಣೆ

ಪದಾರ್ಥ	[illegible]	[illegible]
ಕಡಲೇಕಾಯಿ	[illegible]	[illegible]
ಎಳ್ಳು	[illegible]	[illegible]
ಹರಳುಬೀಜ	[illegible]	[illegible]
ಹುಚ್ಚೆಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರುಕಾಳು	[illegible]	[illegible]
ಅವರೆ	[illegible]	[illegible]
ಕಡಲೆ	[illegible]	[illegible]
ಧನಿಯ	[illegible]	[illegible]
ಹುಣಸೆಹಣ್ಣು	[illegible]	[illegible]
ಬೆಲ್ಲ	[illegible]	[illegible]
ಕೊಬ್ಬರಿ	[illegible]	[illegible]

ಆಕಾಶವಾಣಿ ನಾಳೆ ಕಾರ್ಯಕ್ರಮ

[illegible]

ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರಕಟಣೆ

ಇದರಿಂದ ಸಕಲ ಸ್ತ್ರೀಪುರುಷರಿಗೂ ತಿಳಿಯಪಡಿಸುವುದೇನೆಂದರೆ, ಮೈಸೂರು ಸಿಟಿ ಸರಸ್ವತಿಪುರಂನ ಸಮಿತಿಯಿಂದ ಕಟ್ಟಿಸಿರುವ 6 ಮನೆಗಳು [illegible] ಬಗ್ಗೆ [illegible] ಪೂರ್ವದ ಕಡೆಯ ಮೂಲೆಯ ಮನೆ ಎರಡು ಮನೆಗಳ ಬೆಲೆ ರೂ. 7,000 ರೂಪಾಯಿ, ಮಧ್ಯದ ಎರಡು ಮನೆಗಳ ಬೆಲೆ ರೂ. 6,900 ರೂಪಾಯಿ, ಪಶ್ಚಿಮದ ಕಡೆಯ ಎರಡು ಮನೆಗಳ ಬೆಲೆ ರೂ. 6,750 ರೂಪಾಯಿಗಳು. ಮನೆಗಳು ಅಧುನಿಕ ರೀತಿಯಲ್ಲಿ ಕಟ್ಟಿರುವುದು [illegible] ಸ್ನಾನದ ಮನೆಯಲ್ಲಿ ಹಂಡೆ [illegible] ಮನೆಗೆ ಎಲ್ಲಾ [illegible] ವಾಸಕ್ಕೆ ಕೊಂಡು [illegible] ಮನೆ ಅಥವಾ ಸೈಟುಗಳಿಲ್ಲದವರು ಮನೆ ಬೆಲೆಯ 1/4 ಭಾಗವನ್ನು ಅಡ್ವಾನ್ಸಾಗಿ [illegible] ಕಛೇರಿಯಲ್ಲಿ ದೊರೆಯುವ ನಿರ್ದಿಷ್ಟ [illegible] ನಮೂನೆಯಲ್ಲಿ 1954 ನೇ ಸೆಪ್ಟೆಂಬರ್ ತಾ|| 28 ನೇ ಮಂಗಳವಾರ ಮಧ್ಯಾಹ್ನ 3 ಗಂಟೆಯೊಳಗೆ ಅರ್ಜಿ ಹಾಕಿಕೊಳ್ಳತಕ್ಕದ್ದು. ಮನೆ [illegible] ರಾದ ಅರ್ಜಿದಾರರು [illegible] ಒಂದು [illegible] ಯಾವ ಕಾರಣವನ್ನೂ ಕೊಡದೆ [illegible] ಸ್ವಾಧೀನ ಪಡೆಯತಕ್ಕದ್ದು. [illegible] ಅರ್ಜಿ ಹಾಕಿಕೊಳ್ಳತಕ್ಕದ್ದು.

(ರುಜು) ಎಸ್. ಲಿಂಗಣ್ಣ

ಅಧ್ಯಕ್ಷರು

ಪ್ರಭುದೇವಾ ಥಿಯೇಟರ್

(ಸದ್ಯಾ ಟಾಕೀಸ್)

12-9-54 ನೇ :: ಭಾನುವಾರದಿಂದ :: 5 ದಿನಗಳು ಮಾತ್ರ

ಸಾಕು ಮಗ (ತೆಲುಗು)

17-9-54 ನೇ ಶುಕ್ರವಾರದಿಂದ ಅನೋನ್ಯ ಪ್ರೇಮದ

ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ ★ ಸುಖಂ ಎಂಗೆ (ತಮಿಳು)

Edited, Printed and Published by K. R. Nagarajan at Sadhvi Press D. Subbiah Road, Mysore

ರಿಜಿಸ್ಟರ್ಡ್ ನಂ 792

ಇಂದಿನ ಪತ್ರಿಕೆ 6 ಪುಟ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಪುಟ : ೧೩] SADHVI SUNDAY 12-9-1954 ಮೈಸೂರು : ಭಾನುವಾರ ೧೨-೯-೧೯೫೪ [ಸಂಚಿಕೆ : ೩೯

ಕ್ವೆಮಾಯ್ ಮೇಲೆ ಧಾಳಿಗೆ ೩ ಲಕ್ಷ ಕಮ್ಯೂನಿಸ್ಟರು

ಕ್ವೆಮಾಯ್ ದ್ವೀಪದ ಮೇಲೆ ಧಾಳಿಗಾಗಿ ೩ ಲಕ್ಷ ಚೀಣರ ಸೇನೆ

ರಾಷ್ಟ್ರೀಯ ಚೀಣಾಗೆ ಸೇರಿರುವ ದ್ವೀಪಗಳಲ್ಲೊಂದಾದ ಕ್ವೆಮಾಯ್ ಮೇಲೆ ಧಾಳಿ ನಡೆಸಲು ಕಮ್ಯೂನಿಸ್ಟ್ ಚೀಣರು ೩,೨೦,೦೦೦ ಸೈನಿಕರನ್ನು ಸಜ್ಜುಗೊಳಿಸುತ್ತಿದ್ದಾರೆಂದು ವರದಿಯಾಗಿದೆ. ಸೈನಿಕರ ಸಹಾಯಕ್ಕಾಗಿ ಗನ್ ಬೋಟುಗಳು, ಜಂಕುಗಳೇ ಮುಂತಾದ ವಿವಿಧ ದೋಣಿಗಳ ಸಮೂಹವೊಂದನ್ನು ಕೂಡಿಸಲಾಗಿದೆ. ದ್ವೀಪದ ರಕ್ಷಣೆಗಾಗಿ ೪೦೦ ಫಿರಂಗಿ ತೋಪುಗಳನ್ನು ಸ್ಥಾಪಿಸಲಾಗಿರುವುದೆಂದೂ ಆಕ್ರಮಣವನ್ನು ಅವುಗಳ ಸಹಾಯದಿಂದ ಹಿಮ್ಮೆಟ್ಟಿಸಲು ಸಾಧ್ಯವಾಗುವುದೆಂದೂ ದ್ವೀಪದ ಸೇನಾನಿ ಜನರಲ್ ಲಿಯು ಯ ಚ [illegible]ವರು ಹೇಳುತ್ತಾರೆ.

ನೌಕರರ ದ್ವಿಪತ್ನಿ ವಿವಾಹಕ್ಕೆ ನಿಷೇಧ

ಒಬ್ಬ ಪತ್ನಿಯು ಇರುವಾಗಲೇ ಮತ್ತೊಬ್ಬಳನ್ನು ಸರಕಾರದ ಅನುಮತಿಯಿಲ್ಲದೆ ಯಾವ ನೌಕರನೂ ವಿವಾಹವಾಗಕೂಡದೆಂದು ಕಾನೂನನ್ನು ಭಾರತ ಸರಕಾರದವರು ನೌಕರರ ನಡತೆ ನಿಬಂಧನೆಗೆ ಸೇರಿಸಿರುತ್ತಾರೆ. ಇದಲ್ಲದೆ, ಯಾವ ನೌಕರನೂ ಸರ್ವಿಸ್ ವಿಷಯವಾಗಿ ತನ್ನ ಪುರೋಭಿವೃದ್ಧಿ ಸಾಧಿಸಿಕೊಳ್ಳಲು ರಾಜಕೀಯ ಅಥವಾ ಇನ್ನಾವ ಹೊರಗಿನ ಪ್ರಭಾವವನ್ನು ಮೇಲಧಿಕಾರಿಗಳ ಮೇಲೆ ತರಕೂಡದು. ಗೊತ್ತುಪಡಿಸುವ ಮಿತಿ ಧನವನ್ನು ಮೀರಿದ ಮಾಡಲಾಗದೆ ಸರ್ಕಾರಕ್ಕೆ ಪೂರ್ವಭಾವಿಯಾಗಿ ತಿಳಿಸದೆ ನೌಕರರು ಚರ ಸ್ಥಿರ ಆಸ್ತಿಗಳನ್ನು ಕೊಂಡ ಖರೀದಿ ಅಥವಾ ವಿಲೇ ಮಾಡುವಂತಾಗಲಿ ಕೂಡದೆಂದೂ, ಇದು ನೌಕರನ ಕುಟುಂಬ ವರ್ಗಕ್ಕೂ ಅನ್ವಯಿಸುವುದೆಂದೂ ಸೂಚಿಸಲಾಗಿದೆ. ೧,೦೦೦ ರೂ. ಗೆ ಮೇಲ್ಪಟ್ಟ ಆಸ್ತಿ ಕ್ರಯ ವಗೈರೆ ಮಾಡಿಕೊಂಡರೆ ಅದನ್ನು ತಕ್ಷಣವೇ ಸರ್ಕಾರಕ್ಕೆ ತಿಳಿಸಬೇಕು ಸೂಚಿಸಲಾಗಿದೆ.

ಎಸ್ ಎಸ್ ಎಲ್ ಸಿ ಪರೀಕ್ಷೆ ಸ್ಥಳಗಳು

ನಾಳೆಯಿಂದ ಪ್ರಾರಂಭವಾಗುವ ಎಸ್ ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ... ರಿಂದ ... ವರೆಗಿನ ರಿಜಿಸ್ಟರು ನಂಬರುಗಳ ವಿದ್ಯಾರ್ಥಿಗಳಿಗೆ ಮಹಾರಾಜಾ ಹೈಸ್ಕೂಲಿನಲ್ಲೂ ... ರಿಂದ ... ವರೆಗಿನ ರಿಜಿಸ್ಟರು ನಂಬರುಗಳ ವಿದ್ಯಾರ್ಥಿಗಳಿಗೆ ... ಹೈಸ್ಕೂಲಿನಲ್ಲೂ ಪರೀಕ್ಷೆಯನ್ನು ನಡೆಸಲಾಗುವುದೆಂದು ತಿಳಿಸಲಾಗಿದೆ.

ವಸ್ತು ಪ್ರದರ್ಶನದಲ್ಲಿ ಹಿಂದೂಸ್ತಾನ್ ಶಿಕ್ಷಕ ವಿಮಾನ

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯವರು ತಯಾರಿಸಿರುವ ಶಿಕ್ಷಕ ವಿಮಾನವೊಂದನ್ನು ದಸರಾ ವಸ್ತು ಪ್ರದರ್ಶನದಲ್ಲಿ ಇರಿಸಲಾಗುವುದು. ಅದಲ್ಲದೆ ಕಾರ್ಖಾನೆಯು ತಯಾರಿಸುವ ಪೂರ್ಣ ಲೋಹದ ಬಸ್ಸನ್ನು ಪ್ರದರ್ಶನಕ್ಕೆ ಇಡಲಾಗುವುದು. ವಿಜಯದಶಮಿ ದಿನ ಶಿಕ್ಷಕ ವಿಮಾನದ ಕ್ರೀಡೆಯು ಪ್ರದರ್ಶಿಸಲಾಗುವುದು.

ದಸರಾ ಉತ್ಸವದಲ್ಲಿ ಚಮೂ ದಳದವರ ಸೇವೆಯ ಅಗತ್ಯ

ಸ್ಕೌಟು ಮಾಸ್ಟರ ಸಭೆಯಲ್ಲಿ ಭಾಷಣ

ಮೈಸೂರು ೧೧

ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೆಚ್ ಪಿ ಶ್ರೀರಂಗರಾಜ್ ರವರ ಅಧ್ಯಕ್ಷತೆಯಲ್ಲಿ ಕಳೆದ ಮಂಗಳವಾರ ಸ್ಕೌಟ್ ಮತ್ತು ಕಬ್ ಮಾಸ್ಟರುಗಳ ಸಭೆಯು ನಡೆಯಿತು. ಜಿಲ್ಲಾ ಸ್ಕೌಟ್ ಕಮಿಷನರರಾದ ಶ್ರೀ ಬಿ ಟಿ ಶ್ರೀನಿವಾಸಯ್ಯಂಗಾರ್ಯರು ಭಾಷಣ ಮಾಡಿ, ಶ್ರವಣಬೆಳಗೊಳ ಹರಿಹರದ ರಸ್ತೆ ನಿರ್ಮಾಣ, ದಸರಾ ಉತ್ಸವ ಮತ್ತು ವಸ್ತು ಪ್ರದರ್ಶನದಲ್ಲಿ ಕೆಲಸ, ಕ್ಯಾತವಾನಹಳ್ಳಿಯಲ್ಲಿ ಶ್ರಮದಾನ ಶಿಬಿರ ಈ ಕಾರ್ಯಕ್ರಮಗಳಿಗಾಗಿ ನಗರದ ಸುಮಾರು ೨೦೦ ಮಂದಿ ಚಮೂ ದಳದವರ ಸೇವೆಯು ಆವಶ್ಯಕವೆಂದು ತಿಳಿಸಿದರು. ಶಕ್ಯವಾದ ಚಮೂ ಮತ್ತು ಬಾಲ ಚಮೂಗಳನ್ನು ಆದಿಯಲ್ಲಿ ಮುಖ್ಯೋಪಾಧ್ಯಾಯರು ಮತ್ತು ಸ್ಕೌಟು ಅಧ್ಯಾಪಕರುಗಳು ಸಹಾಯ ಮಾಡಬೇಕೆಂದು ಅವರು ಪ್ರಾರ್ಥಿಸಿದರು.

ಅಸಿಸ್ಟೆಂಟ್ ಸ್ಟೇಟ್ ಸ್ಕೌಟ್ ಕಮಿಷನರರಾದ ಶ್ರೀ ಎಂ ರಾಮಸ್ವಾಮಿ ಯವರು ಭಾಷಣ ಮಾಡಿ ಸಮಾಜ ಸೇವೆಯ ಮಹತ್ವವನ್ನು ಒತ್ತಿ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಚಮೂಗಳ ನಿಸ್ವಾರ್ಥ ಸೇವೆಯ ಗುರಿಯನ್ನು ಕುರಿತು ವಿವರಿಸಿದರು. ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಸ್ಕೌಟುಗಳು ಅನೇಕ ಸೇವೆ ಸಲ್ಲಿಸಲು ಅವಕಾಶವಿರುವುದಾಗಿ ತಿಳಿಸಿದರು.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಶ್ರೀ ಎಂ ಜಿ ಶ್ರೀನಿವಾಸನ್ ಮತ್ತು ಶ್ರೀ ಜಿ ಮುಕುಂದರವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲಾಯಿತು. ಸ್ಕೌಟ್ ಚಳವಳಿಗೆ ಅವರಿಂದ ಆದ ಸೇವೆಯನ್ನು ಸ್ಮರಿಸಲಾಯಿತು.

ಕಾರ್ಯದರ್ಶಿ ಶ್ರೀ ಎಂ ಎಸ್ ತಿರುಮಲಾಚಾರ್ಯರಿಂದ ವಂದನಾರ್ಪಣೆ ಪತ್ರಗಳ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಕೆ ಪುಟ್ಟಸ್ವಾಮಯ್ಯರಿಗೆ ಅಸ್ತ್ರದರ್ಶ ಶಾಂತ್ಯುತ್ಸವ

ರಾಜಧಾನಿಯ ಅಡ್ವೊಕೇಟರಾದ ಶ್ರೀ ಕೆ ಪುಟ್ಟಸ್ವಾಮಯ್ಯನವರ ಉಗ್ರರಥ (೬೦ನೇ ವರ್ಷ ವಯಸ್ಸಿನ) ಶಾಂತ್ಯುತ್ಸವವನ್ನು ಕಳೆದ ಗುರುವಾರ ಅವರ ಗೃಹದಲ್ಲಿ ಅವರ ಮಕ್ಕಳಾದ ಶ್ರೀ ಕೆ ಚಂದ್ರಶೇಖರಯ್ಯ ಮತ್ತು ಸಹೋದರರು ನೆರವೇರಿಸಿದರು. ಹಲವಾರು ಇಷ್ಟ ಮಿತ್ರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಅಕ್ಟೋಬರ್ ೨ರಿಂದ ೧೨೦ ಕ್ಷೇಮ ಯೋಜನೆಗಳ ಆರಂಭ

ಅಕ್ಟೋಬರ್ ೨ ನೇ ತಾ|| ಗಾಂಧಿ ಜಯಂತಿ ದಿನ ದೇಶದಲ್ಲಿ ೨೪ ಲಕ್ಷ ಪ್ರಜೆಗಳಿರುವ ಒಟ್ಟು ೨,೪೦೦ ಹಳ್ಳಿಗಳಿಗೆ ಸಂಬಂಧಿಸಿದಂತೆ ೧೨೦ ಕ್ಷೇಮ ವಿಸ್ತರಣಾ ಯೋಜನೆಗಳನ್ನು ಆರಂಭಿಸಲಾಗುವುದೆಂದು ಗೊತ್ತಾಗಿದೆ.

ಗೋಕರ್ಣ ಕ್ಷೇತ್ರಕ್ಕೆ ಶೃಂಗೇರಿ ಸ್ವಾಮಿಗಳವರ ಭೇಟಿ

ಹಿರಿಯ ಸ್ವಾಮಿಗಳು ಕಾಲಟಿ ಕ್ಷೇತ್ರದಲ್ಲಿ ನೆಲಸುವರು

ಶೃಂಗೇರಿ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ನವರಾತ್ರಿಯ ನಂತರ ಗೋಕರ್ಣಕ್ಕೆ ಭೇಟಿಯಿತ್ತು ಶ್ರೀ ಮಹಾಬಲೇಶ್ವರ ಸ್ವಾಮಿಯ ಸೇವೆಯನ್ನು ನಡೆಸಿ, ಅಲ್ಲಿಂದ ಶಂಕರಾಚಾರ್ಯರ ಜನ್ಮ ಸ್ಥಳವಾದ ಕಾಲಟಿ ಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿ ತಾವು ನೆಲೆಸಿ ಕಿರಿಯ ಸ್ವಾಮಿಗಳಾದ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳನ್ನು ದಕ್ಷಿಣ ದೇಶದ ಪ್ರವಾಸಕ್ಕೆ ಕಳುಹಿಸುವರೆಂದು ವರದಿಯಾಗಿದೆ. ಉತ್ತರ ದೇಶದ ಭಕ್ತರೂ ಪ್ರಾರ್ಥಿಸಿಕೊಂಡರೆ ಅಲ್ಲಿಯ ಪ್ರವಾಸ ಕೈಗೊಳ್ಳುವರೆಂದು ತಿಳಿದುಬಂದಿದೆ.

ಆಫ್ರಿಕಾ ನಗರದಲ್ಲಿ ಪುನಃ ಭೂಕಂಪ

ಕಳೆದ ಗುರುವಾರ ಆಫ್ರಿಕದ ಅಲ್ಜೀರಿಯಾ ಪ್ರಾಂತದ ಆರ್ಲಿಯನ್ಸ್‌ವಿಲ್ಲೆ ನಗರದಲ್ಲಿ ಆದ ಭೂಕಂಪದ ಅನಾಹುತಕ್ಕೆ ಸಿಕ್ಕಿದವರನ್ನು ಪಾರು ಮಾಡುವ ಪ್ರಯತ್ನದಲ್ಲಿದ್ದಾಗ ನೆನ್ನೆ ಅಲ್ಲಿ ಪುನಃ ಪುನಃ ಭೂಕಂಪಗಳಾದುವೆಂದೂ, ಹಾನಿಗೊಳಗಾದ ಕಟ್ಟಡಗಳಲ್ಲಿ ಭಾರಿ ಬಿರುಕುಗಳು ಬಂದುವೆಂದೂ ತಿಳಿದುಬಂದಿದೆ.

ಪರ್ಷಿಯದಲ್ಲಿ ೫೦೦ ಜನ ಗೂಢಚಾರರ ಬಂಧನ

ಪರ್ಷಿಯದ ಸೈನ್ಯ, ಪೊಲೀಸು ಮತ್ತು ರಕ್ಷಕ ದಳಗಳಲ್ಲಿ ಕಮ್ಯೂನಿಸ್ಟರ ಗೂಢಚಾರರ ಗುಂಪೊಂದು ಇರುವುದನ್ನು ಪತ್ತೆ ಹಚ್ಚಲಾಗಿರುವುದೆಂದೂ, ಆ ಸಂಬಂಧವಾಗಿ ಇಬ್ಬರು ಸೈನ್ಯಾಧಿಕಾರಿಗಳೂ ಸೇರಿ, ೫೦೦ ಜನರನ್ನು ಬಂಧಿಸಲಾಗಿರುವುದೆಂದೂ ವರದಿಯಾಗಿದೆ. ದಸ್ತಗಿರಿಯಾದ ಅಧಿಕಾರಿಗಳನ್ನು ಮಿಲಿಟರಿ ನ್ಯಾಯಮಂಡಲದ ಮುಂದೆ ವಿಚಾರಣೆಗೆ ಗುರಿಪಡಿಸಲಾಗುವುದು.

ಬ್ಲೇಡು, ಪೆನ್ಸಿಲ್ ಮುಂತಾದುವುಗಳ ಮೇಲೆ ಹೆಚ್ಚು ಸುಂಕ

ಸೀಮೆ ಸಿಗರೇಟ್, ಹಳೆಯ ವರ್ತಮಾನ ಪತ್ರಿಕೆ, ಮಾದಕ ದ್ರವ್ಯ, ಉಣ್ಣೆ ಬಟ್ಟೆ, ದ್ರಾಕ್ಷಾರಸ, ಥರ್ಮಾಸ್ ಫ್ಲಾಸ್ಕ್, ಬ್ಲೇಡು ಮತ್ತು ಪೆನ್ಸಿಲು ಇವುಗಳ ಮೇಲೆ ಭಾರತ ಸರ್ಕಾರದವರು ಆಮದು ಸುಂಕವನ್ನು ಹೆಚ್ಚಿಸಿರುತ್ತಾರೆ. ಇದರಿಂದ ಸರ್ಕಾರಕ್ಕೆ ೨ ಕೋಟಿ ರೂ. ಹೆಚ್ಚು ವರಮಾನ ಬರುವ ನಿರೀಕ್ಷೆಯಿದೆ.

ಬೆಂಗಳೂರಿನಲ್ಲಿ ಪ್ರವಾಸಿಗರ ಕಛೇರಿ ಆರಂಭ

ಕೇಂದ್ರ ಸರ್ಕಾರದವರು ಪ್ರವಾಸಿಗರಿಗಾಗಿ ಏರ್ಪಡಿಸಿರುವ ಮಾಹಿತಿ ಕಛೇರಿಯ ಆರಂಭೋತ್ಸವವನ್ನು ... ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನೆರವೇರಿಸಿದರು. ಹೋಟೆಲ್ ... ಕಟ್ಟಡದ ಹಿಂದೆ ಭಾಗದಲ್ಲಿ ಪ್ರವಾಸಿಗರ ಕಛೇರಿಯನ್ನು ತೆರೆಯಲಾಗಿದೆ.

ಕಲ್ಕತ್ತದಲ್ಲಿ ಕರಪಾತ್ರಿ ಸ್ವಾಮಿಗಳವರ ಬಂಧನ

ಪುನಃ ಅಶ್ರುವಾಯು ಪ್ರಯೋಗ

ಗೋವಧಾ ನಿರೋಧ ಚಳುವಳಿಯ ಮುಖಂಡರಾದ ಸ್ವಾಮಿ ಕರಪಾತ್ರಿಜಿಯವರನ್ನು ನೆನ್ನೆ ಕಲ್ಕತ್ತಾ ಪೊಲೀಸರು ದಸ್ತಗಿರಿ ಮಾಡಿದರು. ಇನ್ನಿಬ್ಬರು ಗೋರಕ್ಷಣಾ ಸಮಿತಿ ಸದಸ್ಯರನ್ನೂ ಬಂಧಿಸಲಾಗಿದೆ. ನೆನ್ನೆ ಚಳುವಳಿಗಾರರು ಅಂಗಡಿಗಳನ್ನು ಮುಚ್ಚಿ ಹರತಾಳವನ್ನಾಚರಿಸುವಂತೆ ಪ್ರೇರೇಪಿಸುತ್ತಿದ್ದರು. ಸರ್ಕಾರಿ ಬಸ್ಸು ಮತ್ತು ಟ್ರಾಂಗಳ ಮೇಲೆ ಕಲ್ಲನ್ನು ಬೀರಲಾಯಿತು. ಚಳುವಳಿ ಸಮಿತಿ ಕಾರ್ಯದರ್ಶಿ ಸೂರ್ಯನಾಥ ಪಾಂಡೆಯವರನ್ನೂ ಬಂಧಿಸಲಾಗಿದೆ. ಪೊಲೀಸರು ಪ್ರದರ್ಶನಕಾರರ ಗುಂಪನ್ನು ಚೆದುರಿಸಲು ೭ ರೌಂಡು ಅಶ್ರುವಾಯುವನ್ನು ಪ್ರಯೋಗಿಸಿದರು. ಶಾಸನ ಸಭಾ ಭವನಕ್ಕೆ ನೆನ್ನೆ ಹೋಗಲೆತ್ನಿಸಿದ ಹಲವು ಸ್ತ್ರೀಯರು ಸೇವಕರನ್ನು ಪೊಲೀಸರು ತಡೆದು ೧೪ ಮಂದಿಯನ್ನು ದಸ್ತಗಿರಿ ಮಾಡಿರುವರು. ಮೊನ್ನೆ ದಸ್ತಗಿರಿಯಾದ ೯೦ ಮಂದಿಯ ಪೈಕಿ ೭೪ ಜನರನ್ನು ತಲಾ ೩೦೦ ರೂ ಜಾಮೀನಿನ ಮೇಲೆ ಬಿಡಲಾಯಿತು.

ಚೀಣಾಕ್ಕೆ ಕೆ ಜಿ. ಒಡೆಯರ್ ಮತ್ತು ಗೋವಿಂದರೆಡ್ಡಿ

ಪಾರ್ಲಿಮೆಂಟಿನ ಸದಸ್ಯರು, ವಿದ್ಯಾ ಪ್ರವೀಣರು, ಸಮಾಜ ಸೇವಾ ಕಾರ್ಯಕರ್ತರು ಮತ್ತು ವ್ಯಾಪಾರಿಗಳುಳ್ಳ ೩೫ ಜನರ ನಿಯೋಗವೊಂದು ಈ ತಿಂಗಳು ಮೂರನೇ ವಾರದಲ್ಲಿ ಚೀಣಕ್ಕೆ ತೆರಳಲಿದೆ. ಪಾರ್ಲಿಮೆಂಟಿನಲ್ಲಿ ಮೈಸೂರಿನ ಸದಸ್ಯರಾಗಿರುವ ಶ್ರೀ ಎಂ ಗೋವಿಂದರೆಡ್ಡಿ ಮತ್ತು ಶ್ರೀ ಕೆ ಜಿ. ಒಡೆಯರ್‌ರವರು ಅದರಲ್ಲಿ ಇರುವರು.

ಟಿ ಎಸ್ ಸುಬ್ಬಣ್ಣನವರ ಮೇಲಿನ ಮೊಕದ್ದಮೆ ವಜಾ

ಮೈಸೂರು ಜಿಲ್ಲಾ ಬಸ್ಸು ಕೆಲಸಗಾರರ ಮುಖಂಡರಾದ ಶ್ರೀ ಟಿ ಎಸ್ ಸುಬ್ಬಣ್ಣನವರ ಮೇಲೆ ಲಕ್ಷ್ಮೀಪುರಂ ಪೊಲೀಸರು ಹೂಡಿದ್ದ ಮೊಕದ್ದಮೆಯೊಂದನ್ನು ದ್ವಿತೀಯ ನಗರ ನ್ಯಾಯಾಧೀಶರು ವಜಾ ಮಾಡಿರುತ್ತಾರೆ. ಕಳೆದ ಡಿಸೆಂಬರಿನಲ್ಲಿ ಚಾಮುಂಡಿ ಬಸ್ ಸರ್ವಿಸ್ಸಿನ ಬಸ್ಸೊಂದನ್ನು ತಡೆದರೆಂದು ಶ್ರೀ ಟಿ.ಎಸ್. ಸುಬ್ಬಣ್ಣ ಮತ್ತು ಇನ್ನಿಬ್ಬರ ಮೇಲೆ ಬಸ್ ಮಾಲೀಕರು ಪೊಲೀಸರಿಗೆ ದೂರು ಕೊಟ್ಟಿದ್ದರು. ಶ್ರೀ ಸುಬ್ಬಣ್ಣನವರಿಂದ ಕೃತ್ಯವೆಸಗಲ್ಪಟ್ಟಿರುವುದೆಂಬ ಪಕ್ಕಾ ರುಜುವಾತಿಲ್ಲವೆಂದು ನ್ಯಾಯಾಧೀಶರು ಹೇಳಿ ಆಪಾದಿತರುಗಳನ್ನು ಬಿಡುಗಡೆ ಮಾಡಿರುತ್ತಾರೆ.

ಅಂತರ ವಿಶ್ವವಿದ್ಯಾಲಯ ಹಬ್ಬಕ್ಕೆ ಮೈಸೂರಿನ ವಿದ್ಯಾರ್ಥಿ ತಂಡ

ದೆಹಲಿಯಲ್ಲಿ ನವೆಂಬರ್ ತಿಂಗಳು ನಡೆಯುವ ಅಂತರ ವಿಶ್ವವಿದ್ಯಾಲಯದ ಹಬ್ಬಕ್ಕಾಗಿ ಮೈಸೂರಿನ ೧೦ ವಿದ್ಯಾರ್ಥಿಗಳ ತಂಡವನ್ನು ಕಳುಹಲು ಇಲ್ಲಿನ ವಿಶ್ವವಿದ್ಯಾನಿಲಯದವರು ನಿರ್ಧರಿಸಿರುತ್ತಾರೆ. ಲಲಿತ ಕಲೆ ಮತ್ತು ನಾಟಕದಲ್ಲಿ ಕುಶಲತೆಗಳು ಬೆಳೆಯುವುದನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಹಬ್ಬವನ್ನು ಕೇಂದ್ರ ಸರ್ಕಾರದವರು ಏರ್ಪಡಿಸಿರುವರು.

ರಾಶಿ ಭವಿಷ್ಯ

ಆರೋಗ್ಯ ಆರ್ಥಿಕ ಮಾನಸಿಕ ... ನೌಕರಿ ... ವ್ಯಾಪಾರ ... ಪ್ರವಾಸ ...

ವೃಷಭ — ಆರೋಗ್ಯ ... ವ್ಯಾಪಾರ, ಉ ... ನೌಕರಿಯು ... ಪ್ರವಾಸ ... ಎತ್ತರದಿಂದ ಬೀಳುವ ...

ಮಿಥುನ — ಆರೋಗ್ಯಕ್ಕೆ ಕ್ಲೇಶ ... ಹಣದ ತೊಂದರೆ ವಿಶೇಷ ... ವ್ಯಾಪಾರ ಉದ್ಯೋಗದಲ್ಲಿ ... ನೌಕರಿಯಲ್ಲಿ ತಪ್ಪು ಕಲ್ಪನೆ ಮತ್ತು ... ಪ್ರವಾಸದಲ್ಲಿ ವಿಘ್ನ ... ಚಿಂತೆ ನಿವಾರಣೆ ...

ಕಟಕ — ಆರೋಗ್ಯ ... ಉದ್ಯೋಗ ... ಪ್ರವಾಸ ... ವಿಘ್ನ ವಿಶೇಷ ಚಿಂತೆ ...

ಸಿಂಹ — ಆರೋಗ್ಯ ... ವ್ಯಾಪಾರ ಉದ್ಯೋಗ, ನೌಕರಿಯಲ್ಲಿ ... ಆರ್ಥಿಕ ಸ್ಥಿತಿ ... ಪ್ರ ... ಆರೋಗ್ಯಕ್ಕೆ ಕ್ಲೇಶ ... ಆಕಸ್ಮಿಕ ಖರ್ಚು, ...

ಕನ್ಯಾ — ಆರೋಗ್ಯ ಆರ್ಥಿಕ ಮಾನಸಿಕ ... ವ್ಯಾಪಾರ ಉದ್ಯೋಗ ... ಕಾರ್ಯ ... ಪ್ರವಾಸದಲ್ಲಿ ವಿಘ್ನ ... ಎತ್ತರದಿಂದ ಬೀ ... ಪ್ರಸಂಗ ...

ತುಲಾ — ಆರೋಗ್ಯ ಆರ್ಥಿಕ ಮಾನಸಿಕ ... ವ್ಯಾಪಾರ ಉದ್ಯೋಗ ನೌಕರಿ ... ಪ್ರವಾಸ ... ಆಕಸ್ಮಿಕ ...

ವೃಶ್ಚಿಕ — ಆರೋಗ್ಯ ... ವ್ಯಾಪಾರ ಉದ್ಯೋಗ, ನೌಕರಿಯಲ್ಲಿ ... ಪ್ರವಾಸದಲ್ಲಿ ವಿಘ್ನ ...

ಧನು — ಆರೋಗ್ಯ ... ಮಾನಸಿಕ ಸ್ಥಿತಿ ... ವ್ಯಾಪಾರ ಉದ್ಯೋಗ ನೌಕರಿಯಲ್ಲಿ ಹಾನಿ ... ಪ್ರವಾಸದಲ್ಲಿ ವಿಘ್ನ ...

ಮಕರ — ಆರೋಗ್ಯ ಆರ್ಥಿಕ ... ವ್ಯಾಪಾರ ಉದ್ಯೋಗ ನೌಕರಿ ...

ಕುಂಭ — ಆರೋಗ್ಯ ಆರ್ಥಿಕ, ಮಾನಸಿಕ ... ವ್ಯಾಪಾರ ಉದ್ಯೋಗ, ನೌಕರಿ ... ಕಾರ್ಯ ...

ಮೀನ — ಆರೋಗ್ಯ ಸ್ಥಿತಿಗೆ ... ಉದ್ಯೋಗ ... ನೌಕರಿಯಲ್ಲಿ ... ಕೈಗೊಂಡ ಕಾರ್ಯದಲ್ಲಿ ... ಎತ್ತರದಿಂದ ...

... ಸಿಂಹ ... ನಗರದವರ ... ನಾಮ ... ಶ್ರೀ ಎಸ್ ... ಬಳಿ ... ಬೆಂಗಳೂರಿಗೆ ... ಅವರಿಗೆ ...

ಮೈಸೂರು ಹಿಂದೀ ಪ್ರಚಾರಕರ ಸಮ್ಮೇಳನ

ಮೈಸೂರು ಸಂಸ್ಥಾನದ ಹಿಂದೀ ಪ್ರಚಾರಕರ ಏಳನೇ ಸಮ್ಮೇಳನವು ... ತಿಂಗಳ ... ನೇ ತಾ|| ಗಳಲ್ಲಿ ಬೆಂಗಳೂರಿನಲ್ಲಿ ನೆರವೇರಿದ ... ಅದರ ಆರಂಭೋತ್ಸವವನ್ನು ನೆರವೇರಿಸಲು ಬಿಹಾರ್ ಗೌರ್ನರರಾದ ಶ್ರೀ ... ದಿವಾಕರರನ್ನು ... ಸಮ್ಮೇಳನದ ಅಂಗವಾಗಿ ಬೆಂಗಳೂರಿನ ... ಹಿಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ... ನಡೆಯುವುದು. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ... ಪದವೀಧರರು ... ಮಾನ್ಯತೆ ಪಡೆದ ವಿದ್ಯಾಸಂಸೆಗಳ ಹಿಂದಿ ಅಧ್ಯಾಪಕರ ... ಹಿಂದಿ ಪ್ರಚಾರ ಸಂಸ್ಥೆಗಳ ... ಪ್ರತಿನಿಧಿಗಳಾಗಬಹುದು ... ತಿಂಗಳು ... ಪ್ರವೇಶ ... ಆದರೆ ... ಪ್ರವೇಶ ... ರೂ ... ದರೇಶು ...

ನಗರದಲ್ಲಿ ಭಾರತದ ವಯಸ್ಕರ ಶಿಕ್ಷಣ ಗೋಷ್ಠಿ

ಅಕ್ಟೋಬರ್ ... ರಿಂದ ... ನೇ ತಾ ... ವರೆಗೆ ಮೈಸೂರಿನಲ್ಲಿ ... ವಯಸ್ಕರ ... ಶಿಕ್ಷಣ ... ಸೇರುವುದು ... ಯೋಜನೆ ಆಡಳಿತದ ವಿಶೇಷಾಧಿಕಾರಿಯಾದ ಶ್ರೀ ಎ ... ಅವರು ... ಸಹಿತ ಮೈಸೂರಿನ ... ಹಾರಾಡುವ ಗೋಷ್ಠಿಯು ಪ್ರಾರಂಭೋತ್ಸವವನ್ನು ನೆರವೇರಿಸುವರು ... ಶಿಕ್ಷಣದ ಒಟ್ಟುಗೂಡದ ಬಗ್ಗೆ ... ಪುಸ್ತಕಗಳು ... ಪ್ರದರ್ಶನವೂ ನಡೆಯುವುದು.

ಕಲಾವಿದರ ಕೂಟ

ರಂಜಭಾಗ್ಯದ ... ಕಲಾ ಸಂಘದ ... ಯಲ್ಲಿ ನಾಟಕ ನೃತ್ಯ ಸಂಗೀತ ... ಕಲೆಗಳಲ್ಲಿ ... ನೆರವಾಗುವಂತೆ ... ಕಲಾವಿದರ ಕೂಟವನ್ನು ರಚಿಸಲು ... ಸೇರುವ ... ಮುನ್ಸಿಪಲ್ ... ಕಾರ್ಯದರ್ಶಿ ... ಶ್ರೀ ... ದೂರವಾಣಿ ... ತಿಳಿಸಿದ್ದಾರೆ.

ವಿವಾಹ ಮಹೋತ್ಸವಗಳು

ಕೊಳ್ಳೇಗಾಲದ ಶ್ರೀ ವಿ ವೆಂಕಟಸುಬ್ಬಯ್ಯರವರು ತಮ್ಮ ಕಿರಿಯ ಸಹೋದರರೂ ಕೊಳ್ಳೇಗಾಲದ ಬೋರ್ಡ್ ಪ್ರೌಢಶಾಲೆಯ ಹಿಂದಿ ಪಂಡಿತರೂ ಆದ ಶ್ರೀ ಎ ... ರಂಗನಾಥ ... ರವರಿಗೆ ದಕ್ಷಿಣ ರೈಲ್ವೆಯ ಶ್ರೀ ಎಂ ಎಸ್ ಬಾಲಸುಬ್ರಹ್ಮಣ್ಯಂರವರ ಕುಮಾರಿ ... ಅಲುಮೇಲು ... ಕೊಂಡ ... ವಿವಾಹವನ್ನು ನೆರವೇರಿಸಿದರು.

ವಿ|| ತಿರುಮಲೆ ರಾಮಚಂದ್ರಾಚಾರ್ಯರ ... ಹೋದರರಿಂದ ಶ್ರೀ ಎ ... ಸಂಪತ್ಕುಮಾರ ... ವರನ್ನು ... ಯೋಗ ನರಸಿಂಹಾಚಾರ್ಯರ ಪುತ್ರ ಶ್ರೀ ಗೋವಿಂದರಾಜರವರಿಗೆ ಕೊಟ್ಟು ಮೊನ್ನೆ ಸರಸ್ವತೀಪುರದಲ್ಲಿ ವಿವಾಹವು ಜರುಗಿತು.

ನಗರದ ಅನಂತ ... ಫ್ಯಾಕ್ಟರಿಯ ... ಕಂಪನಿ ... ಶ್ರೀ ... ವಲಿಯ ... ಬೆಂಗಳೂರಿನ ಶ್ರೀ ... ಪಲಿಯಾರರ ... ಶ್ರೀ ಎಸ್ ... ಕಳೆದ ... ನೆರವೇರಿಸಿದ.

ಅಯ್ಯನಾರ್ ... ಗಣಪತಿ ಸಂಗೀತ

ರಂಜಭಾಗ್ಯದ ... ಕೃಷ್ಣನ ... ಗಣಪತಿ ... ವಿದ್ಯಾರ್ಥಿನಿ ... ಕಾರ್ಯಕ್ರಮ ನಡೆಯಿತು.

ಅಖಿಲ ಕರ್ನಾಟಕ ಅಭಿವೃದ್ಧಿ ಸಮ್ಮೇಳನ

ಗುಂಡ್ಲುಪೇಟೆ ... ಕರ್ನಾಟಕ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಮ್ಮೇಳನವು ... ಶ್ರೀ ... ಅಧ್ಯಕ್ಷತೆ ವಹಿಸುವರು.

ಆಕಾಶವಾಣಿ ... ಕಾರ್ಯಕ್ರಮ

...

ವಿದ್ಯುಚ್ಛಕ್ತಿ ತಗುಲಿ ಮರಣ ವಿಷಾದಾಂತ್ಯ

ತಿರುನಲ್ವೇಲಿಯ ಪಿ ಎಸ್ ರಾಮಕೃಷ್ಣ ... ಯ್ಯರ್ ಎಂಬ ಯುವಕನು ತನ್ನ ವಿವಾಹಕ್ಕಾಗಿ ತಿರುವನಂತಪುರಕ್ಕೆ ತಂದೆ ಮತ್ತು ಸಹೋದರಿಯೊಡನೆ ಹೋಗಿ ಒಂದು ಹೊಟೇಲಿನಲ್ಲಿ ಇಳಿದುಕೊಂಡಿದ್ದಾಗ, ಕಂಡಿಯ ಬಚ್ಚಲು ಮನೆಗೆ ಹೋದ ಸಮಯದಲ್ಲಿ ಅವನಿಗೆ ವಿದ್ಯುಚ್ಛಕ್ತಿ ತಗಲಿ, ಸಹಾಯಕ್ಕಾಗಿ ಕೂಗಿಕೊಳ್ಳಲು ಅವರ ರಕ್ಷಣೆಗೆ ಬಂದ ವರನಿಗೂ ವಿದ್ಯುಚ್ಛಕ್ತಿ ತಗಲಿ ಮೃತಪಟ್ಟನೆಂದು ವರದಿಯಾಗಿದೆ. ತಂದೆಯನ್ನು ಸಂರಕ್ಷಿತವಾಗಿ ಹೊರತರಲಾಯಿತು.

ಕಾಲೇಜು ಸಂಸ್ಕೃತ ಸಂಘದ ಆರಂಭ ಭಾಷಣ

ಮಹಾರಾಜಾ ಕಾಲೇಜಿನ ಸಂಸ್ಕೃತ ಸಂಘದ ಆರಂಭ ಭಾಷಣವನ್ನು ಜಿಲ್ಲಾಧಿಕಾರಿಗಳಾದ ಶ್ರೀ ಕೆ ಬಾಲಸುಬ್ರಹ್ಮಣ್ಯಂರವರ ಕಳೆದ ಮಂಗಳವಾರ ಮಾಡಿದರು. ಪ್ರೊ|| ಎ ಟಿ ತಿರುನಾರಾಯಣ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಟಿ ಎಸ್ ಗೋಪಾಲರವರಿಂದ ಸಂಸ್ಕೃತ ವಾಚನವೂ, ಶ್ರೀಮತಿ ರಂಗಮಣಿಯವರಿಂದ ಸಂಗೀತವೂ ಇದ್ದುವು. ಶ್ರೀ ಬಿ ಎಸ್ ನಾಗರಾಜರಾಯರು ವಂದನೆಗಳನ್ನು ಸಲ್ಲಿಸಿದರು.

ರಷ್ಯಕ್ಕೆ ಭಾರತೀಯ ನಿಯೋಗದಲ್ಲಿ ಇಬ್ಬರು ಬೆಂಗಳೂರಿನವರು

ರಷ್ಯಕ್ಕೆ ತೆರಳಲಿರುವ ... ಭಾರತೀಯ ... ನಿಯೋಗದಲ್ಲಿ ಬೆಂಗಳೂರಿನ ... ಪತ್ರಿಕೆಯ ... ಶ್ರೀ ... ಸಮಾಜ ಸೇವಾ ... ಶ್ರೀಮತಿ ... ರಂಗನಾಥರವರು ... ಅಕ್ಟೋಬರ್ ... ನೇ ತಾ|| ... ಬಿಟ್ಟು ... ಹೋಗುವರು ... ಇರುವರು ... ಭಾರತ ಸೇವಕ ಸಮಾಜದ ... ಯೋಜನಾ ... ದಿಂದ ಗೊತ್ತಾಗಿದೆ.

ರಾಜಕಮಲ್ ಟಾಕೀಸ

8 9 54 ರಿಂದ ಅನೇಕ ... 2ನೇ ...

★ ಪರಿವರ್ತನ

... ಸಾವಿತ್ರಿ ... ಎಸ್ ... ನಾಗೇಶ್ವರರಾವ್ ಜೋಗರಾವ್ ...

QUOTATIONS

To
The Suppliers Dealing i[n]
Building Materials

Gentlemen—

Pleas[e] be good enough [to] quote your lowest rates [for] the supply of following bu[ild]ing materials required for [our] Factory at Mysore

1. Sand (Pure river sand)
2. 1/2" to 3/4 granite me[tal]
3. 1 1/2" granite metal
4. Size stones with sizes
5. Size Dindu stones
6. First Class burnt brick[s]

The quotations should r[each] the undersigned before ... September 1954

(Sd.) C. N. Krishnamurthi
For the Indian Hume Pipe Co., L[td]
Raja[ji]nagar
P O YESHAVANTPUR
BANGALORE

ಉತ್ತಮವಾದ ಒಗಗೆ
808
ಸಾಬೂನು
ರಾಜಾ ಸೋಪ್ ಫ್ಯಾಕ್ಟರಿ ಮೈಸೂರು.

12 9-54 ನೇ ಭಾನುವಾರದಿಂದ 5 ದಿನಗಳು ಮಾತ್ರ

ಪ್ರಭುದೇವಾ ಥಿಯೇಟರ್ (ಪಠ್ಯಾ ಟಾಕೀಸ್)

ಸಾಕುಮಗ (ತೆಲುಗು)

17 9 54 ನೇ ... ಶುಕ್ರವಾರದಿಂದ ... ಅಪೋಲೋ ಪ್ರಾರಂಭ

... ಪ್ರೈಸ್ ಯಂಗ್ ...

ಸುವಿಧಿ ಎಗೆ

Edited Printed and Published by A. R. Nagarajan at Sadhvi Press D. Subbai Road Mysore

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿ ಪತ್ರಿಕೆ 3 ಕಾಸು

ಎಲ್ಲ ವಿಧವಾದ
ಅಲೋಪತಿಕ್ ಔಷಧಿ
ಗಳ ಯುಕ್ತವಾದ ಬೆಲೆಗೆ
ದೊರೆಯುತ್ತವೆ
ರಘುಲಾಲ್
ಅಂಡ್ ಕಂಪೆನಿ,
ಕೆಮಿಸ್ಟ್ಸ್
207 ಸಯ್ಯಾಜಿರಾವ್ ರಸ್ತೆ,
ಮೈಸೂರು

ಸಂಪುಟ ೧೩] SADHVI MONDAY 13-9-1954 ಮೈಸೂರು ಸೋಮವಾರ ೧೩-೯-೧೯೫೪ [ಸಂಚಿಕೆ ೪೦

ವಿಯಟ್ನಾಂ ಪ್ರಧಾನಿಗೂ ಮುಖ್ಯ ಸೇನಾಪತಿಗೂ ಘರ್ಷಣೆ

ನ್ಯಾಯ ಸಂಶೋಧನೆಯನ್ನು ನಡೆಸಬೇಕು

ವಕೀಲರುಗಳಿಗೆ ಡಾ|| ಜೆರೋಮ್ ಹಾಲ್ ರವರ ಸಲಹೆ

ಮೈಸೂರು ೧೨

ಅಮೇರಿಕದ ಇಲ್ಲಿನಾಯ್ ವಿಶ್ವವಿದ್ಯಾಲಯದ ಪ್ರೊಫೆಸರರಾದ ಡಾ|| ಜೆರೋಂಹಾಲ್‌ರವರು ಇಲ್ಲಿನ ವಕೀಲರುಗಳ ಸಂಘದಲ್ಲಿ ಕಳೆದ ಶನಿವಾರ ಭಾಷಣ ಮಾಡಿ ದೇಶದಲ್ಲಿ [illegible] ನ್ಯಾಯ [illegible] ವಕೀಲರು [illegible] ತಿಳಿಸಿದರು. ವಕೀಲರುಗಳು ನ್ಯಾಯಶಾಸ್ತ್ರದ ವಿಷಯವಾಗಿ ಸಂಶೋಧನೆ ನಡೆಸಬೇಕು [illegible] ಸಂಶೋಧನೆ [illegible] ಸಂಘದ ಅಧ್ಯಕ್ಷರಾದ [illegible] ಸ್ವಾಗತ ಭಾಷಣ ಮಾಡಿದರು.

ಕೈ ಕತ್ತರಿಸಿದ ಪ್ರಸಂಗ

[illegible] ಕತ್ತರಿಸಲಾಗಿರುವುದೆಂದೂ [illegible] ಪೊಲೀಸರು ತನಿಖೆ ನಡೆಸುತ್ತಿರುವರು.

ರಾಷ್ಟ್ರೀಯ ಚೀಣಾದ ೨ ವಿಮಾನಗಳ ನಾಶ

ಚೀಣದ ಅಮಾಯ್ ದ್ವೀಪದ ಮೇಲೆ ರಾಷ್ಟ್ರೀಯ ಚೀಣದ ವಿಮಾನ ಧಾಳಿಗಳು [illegible] ಕೆಂಪು ಚೀಣ ವಿಮಾನ ವಿಧ್ವಂಸಕ ತೋಪುಗಳು ನೆನ್ನೆ ವಿಮಾನಗಳನ್ನು ಹೊಡೆದ ಉರುಳಿಸಿದುವು [illegible] ವರದಿಯಾಗಿದೆ. ಮತ್ತೊಂದು ವಿಮಾನ [illegible] ಒಂದು ವಿಮಾನವು ಸಮುದ್ರಕ್ಕೆ ಬಿತ್ತು. ಅದರಲ್ಲಿದ್ದ ಇಬ್ಬರು ಪೈಲಾಟ್ [illegible] ನಂತರ ಬೇರೆ ಎರಡು ವಿಮಾನಗಳು ಧಾಳಿ ಮಾಡಿದುವೆಂದೂ ಅವುಗಳು [illegible] ಬಾಂಬುಗಳನ್ನು ಹಾಕಿದವೆಂದೂ [illegible]ಲಾಗಿದೆ.

ಅಮೇರಿಕಾ ಗೂಢಚಾರನಿಗೆ ಜೀವಾವಧಿ ಸಜಾ

ಮಾಸ್ಕೋ ನಗರದಲ್ಲಿ ಅಮೇರಿಕದ ಪರವಾಗಿ ಗೂಢಚಾರ ಕೆಲಸ ನಡೆಸುತ್ತಿದ್ದನೆಂದು [illegible] ಎಂಬ ಅಮೇರಿಕಾ ಪ್ರಜೆ[illegible] ನ್ಯಾಯಾಲಯ [illegible] ಶಿಕ್ಷೆ ವಿಧಿಸುತ್ತ [illegible] ವರ್ಷದಿಂದ ಜೀವಾವಧಿ ಸಜಾವರೆಗಿನ್ನ ವಿಧಿಸಲಾಯಿತು. ಶಿಕ್ಷೆಯಾದವರಲ್ಲಿ [illegible] ಮಹಿಳೆಯೂ ಇರುವರು.

೨೫ ವರ್ಷದನಂತರ ಮೆಹರ್ ಬಾಬಾರವರ ಬಹಿರ್ಮುಖ

[illegible] ವರ್ಷಗಳಿಂದಲೂ [illegible] ಮೌನಧಾರಣೆ ಮಾಡಿದ್ದ ಮೆಹರ್ ಬಾಬಾರವರು ನೆನ್ನೆ ಅಹಮದ್ ನಗರದಲ್ಲಿ [illegible] ಜನಗಳಿಗೆ ದರ್ಶನ [illegible] ದರ್ಶನಕ್ಕಾಗಿ ವಿಶೇಷ ಕಛೇರಿ [illegible] ಹೊರಗಿನಿಂದ ಬಂದ [illegible] ಮಾನವನ [illegible] ಬಾಬಾರವರ [illegible] ಬೋಧನೆಗಳನ್ನು ಹರಡುವುದಕ್ಕಾಗಿ [illegible] ತಿಳಿಸಿದರು.

ತೆರೆಖೋಲ್ ಕೋಟೆಗೆ ಪುನಃ ಸತ್ಯಾಗ್ರಹಿಗಳ ದಂಡು

[illegible] ಸತ್ಯಾಗ್ರಹಿಗಳ [illegible] ಪೋರ್ಚುಗೀಸ್ ಪೊಲೀಸರು [illegible] ಸತ್ಯಾಗ್ರಹಿಗಳನ್ನು ಬಂಧಿಸಿ ಹಿಂಸೆ ಮಾಡಿದ ನಂತರ [illegible] ಕೋಟೆಯಲ್ಲಿ ಸತ್ಯಾಗ್ರಹ ಮಾಡಲು [illegible] ಸತ್ಯಾಗ್ರಹಿಗಳ ಮತ್ತೊಂದು ತಂಡವು ಹೊರಟಿದೆ.

ರಾಷ್ಟ್ರಾಧ್ಯಕ್ಷರ ಕಾರ್ಯದರ್ಶಿಯ ನಿವೃತ್ತಿ

ರಾಷ್ಟ್ರಾಧ್ಯಕ್ಷರ ಕಾರ್ಯದರ್ಶಿಯವರಾದ ಶ್ರೀ [illegible] ಲಾಲ್‌ರವರು ನಿವೃತ್ತಿ ಪೂರ್ವಭಾವಿಯಾಗಿ ಎರಡು ತಿಂಗಳ ರಜಾ ಪಡೆದಿರುವರು. ರಾಜ್ಯ [illegible] ಜನರಲ್ಲಾಗಿದ್ದ [illegible] ಕಾರ್ಯದರ್ಶಿಯಾಗಿ ನೇಮಕ [illegible] ರಾಜೇಂದ್ರ ಪ್ರಸಾದರ [illegible] ಮಧ್ಯ ಪ್ರದೇಶದ [illegible] ರವರನ್ನು ರಾಷ್ಟ್ರಾಧ್ಯಕ್ಷರ ಜಂಟಿ ಕಾರ್ಯದರ್ಶಿಯಾಗಿ ತೆಗೆದುಕೊಳ್ಳಲಾಗಿದೆ.

ಭಾರತ ಮತ್ತು ಚೀಣಾಗಳಿಗೆ ವಾಣಿಜ್ಯ ಒಪ್ಪಂದ

ಭಾರತ ಮತ್ತು ಚೀಣಗಳಿಗೆ ಕಳೆದ ಜೂನ್ ತಿಂಗಳಿಂದ ನಡೆಯುತ್ತಿರುವ ವಾಣಿಜ್ಯ ಮಾತುಕತೆಗಳು ಶೀಘ್ರದಲ್ಲೇ ಮುಗಿದು ಒಪ್ಪಂದಕ್ಕೆ ರುಜು ಬೀಳಲಿರುವುದಾಗಿ ಭಾರತದಲ್ಲಿರುವ ಚೀಣಾ [illegible] ಭಾರತ [illegible] ಪ್ರಜೆಗಳು [illegible] ಆದರಿಂದ [illegible] ಅವಕಾಶವಿದೆ [illegible] ಯಿಸಲ್ಪಡು[illegible].

೫ ಸಾವಿರ ಜಿಲ್ಲಾ ವಿದ್ಯಾಧಿಕಾರಿಗಳಿಗೆ ನಿವೃತ್ತಿ ಪೂರ್ವದ ರಜಾ

[illegible] ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಂ. [illegible] ವೆಂಕಟೇಶ [illegible] ನಿವೃತ್ತಿ ಪೂರ್ವವಾಗಿ [illegible] ತಿಂಗಳ [illegible] ದಿನಗಳ ರಜಾ ಕೊಡಲಾಗಿದೆ.

ವಿಯಟ್ನಾಮಿನಲ್ಲಿ ಸೈನ್ಯಾಧಿಕಾರಿಗೂ, ಪ್ರಧಾನಿಗೂ ಘರ್ಷಣೆ

ವಿಯಟ್ನಾಮಿನ ಸೈನ್ಯದ ಪ್ರಧಾನ ಸೇನಾನಿ ಜನರಲ್ [illegible] ಯವರು ದೇಶವನ್ನು ಕೂಡಲೇ ಬಿಟ್ಟುಹೋಗಬೇಕೆಂತ [illegible] ಮಾಡಿದ ಆಜ್ಞೆಯನ್ನು ಅವರು [illegible] ಸೈನ್ಯ [illegible] ದಳಗಳ [illegible] ಅವರ [illegible] ತೋಪುಗಳು [illegible] ಅಲ್ಲಿನ ಪ್ರಧಾನಿ [illegible] ಪ್ರಧಾನಿಯ [illegible] ಜನ ಪೊಲೀಸರ [illegible] ಸೈನ್ಯಾಧಿಕಾರಿಯು [illegible] ವಿರುದ್ಧವಾಗಿ [illegible] ಪ್ರಧಾನಿಯವರ ಕಡೆ [illegible] ಸೈನ್ಯ [illegible] ಪ್ರವೇಶ [illegible] ಮುಖ್ಯ ಸೇನಾನಿ [illegible] ಪ್ರಧಾನಿಯವರು [illegible] ಆಜ್ಞೆಯನ್ನು [illegible].

ಪರ್ಷಿಯಾದಲ್ಲಿ ಸಾಮೂಹಿಕವಾಗಿ ಮಿಲಿಟರಿ ಶಕ್ತಿ ಪ್ರದರ್ಶನ

ಪರ್ಷಿಯದ [illegible] ನಡೆಯುತ್ತಿರುವ ಕಮ್ಯೂನಿಸ್ಟರನ್ನು ಬಂಧಿಸುವ [illegible] ಪ್ರದರ್ಶನಗಳನ್ನು ನಡೆಸುವಂತೆ ಸೈನ್ಯಕ್ಕೆಲ್ಲ ಆಜ್ಞೆ ಕೊಡಲಾಗಿದೆ. [illegible] ಗಂಟೆಗಳ ಕಾಲ ಈ ಕ್ರಮಗಳನ್ನು ನಡೆಸಲಾಗುವುದು. [illegible] ಅಧಿಕಾರಿಗಳನ್ನು ಬಂಧಿಸಲಾಗಿದೆ. ಹಲವು ನಾಗರಿಕರನ್ನು ವಶಕ್ಕೆ [illegible] ಪ್ರಧಾನಿ [illegible] ಹಿರಿಯ ಮತ್ತು ಇಪ್ಪತ್ತು [illegible] ಅಧಿಕಾರಿಗಳನ್ನೂ ಬಂಧಿಸಲಾಗಿದೆ. ಪರ್ಷಿಯದ ಕಮ್ಯೂನಿಸ್ಟರು [illegible] ರಾಜಕೀಯ ವಲಯಗಳ ಸುದ್ದಿಯು ತಿಳಿಸುತ್ತದೆ.

○ [illegible] ವಿದ್ಯಾರ್ಥಿಗಳು ಮತ್ತು [illegible] ವಿದ್ಯಾರ್ಥಿನಿಯರು [illegible] ವಿದ್ಯಾರ್ಥಿಗಳ [illegible] ಅದರಿಂದ ಹಣ ಪಡೆದರು [illegible].

ತಾಯಿನಾಡು ಪತ್ರಿಕೆಯ ೨೭ ನೇ ವಾರ್ಷಿಕೋತ್ಸವ

ಬೆಂಗಳೂರು ೧೨

ಇಲ್ಲಿನ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ನೆನ್ನೆ ತಾಯಿನಾಡು ಪತ್ರಿಕೆಯ ೨೭ ನೇ ವಾರ್ಷಿಕೋತ್ಸವವು ನಡೆಯಿತು. ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ಡಾ|| ರಾಜೇಂದ್ರ ಪ್ರಸಾದರ ಛಾಯಾಚಿತ್ರವನ್ನು ಅನಾವರಣ ಮಾಡಿದರು. ಶ್ರೀಮತಿ [illegible] ಅವರಿಂದ ಪ್ರಾರ್ಥನೆ ಮತ್ತು ಸಂಗೀತವಾದನಂತರ ಶ್ರೀ ಪಿ. ಆರ್. ರಾಮಯ್ಯನವರು ಸ್ವಾಗತ ಭಾಷಣ ಮಾಡಿದರು.

[illegible] ಭಾಷಣ ಮಾಡಿ ದಿವಂಗತ ಎಂ. ವೆಂಕಟಕೃಷ್ಣಯ್ಯನವರು ಪತ್ರಿಕೋದ್ಯಮಕ್ಕೆ ಹಾಕಿರುವ ಅಸ್ತಿಭಾರವನ್ನು ಕುರಿತು ವಿವರಿಸಿದರು. ಜನರು ಪತ್ರಿಕೆಗಳನ್ನು ಉಚಿತವಾಗಿ ಓದುವುದನ್ನು ಬಿಟ್ಟು ಕೊಂಡು ಓದುವ ಅಭ್ಯಾಸ ಮಾಡಬೇಕೆಂದು ತಿಳಿಸಿದರು. ರಾಷ್ಟ್ರಾಧ್ಯಕ್ಷರು ರಾಜರ್ಷಿಗಳಾಗಿರುವರೆಂದು ಹೇಳಿದರು.

ಶ್ರೀಗಳಾದ ಡಿ. ಸಿ. ಸುಬ್ಬರಾಮಯ್ಯ, ಎಸ್. [illegible] ಮತ್ತು [illegible] ಭಾಷಣ ಮಾಡಿ "ತಾಯಿನಾಡು" ವನ್ನು [illegible].

ಮದ್ರಾಸ್ ನಗರ ಪ್ರತ್ಯೇಕ ಸಂಸ್ಥಾನವಾಗಬೇಕೆಂದು ಸಲಹೆ

ಆಂಧ್ರದ ಮುಖ್ಯ ಮಂತ್ರಿ ಟಿ. ಪ್ರಕಾಶಂ ಮತ್ತು ಅಡ್ವೊಕೇಟ್ ಜನರಲ್ ನರಸರಾಜುರವರು ಸಂಸ್ಥಾನಗಳ ಪುನರ್ರಚನಾ ಸಮಿತಿಯವರನ್ನು ನೆನ್ನೆ ಭೇಟಿ ಮಾಡಿ ಮದ್ರಾಸು ನಗರವು ಪ್ರತ್ಯೇಕ ಸಂಸ್ಥಾನವಾಗುವಂತೆ ಮಾಡುವ ಅವಶ್ಯಕತೆಯನ್ನು ಒತ್ತಿ ಹೇಳಿದರು. [illegible] ಆಂಧ್ರದವರ ವಾದವನ್ನು [illegible] ನಗರವನ್ನು [illegible] ನಗರದ ಮೇಲೆ [illegible] ತಮಿಳರು ಅಲ್ಲಿ [illegible] ಮದ್ರಾಸು ನಗರದಲ್ಲಿ [illegible] ಮದ್ರಾಸ್ ನಗರದಲ್ಲಿ [illegible] ತಮಿಳರು ಮತ್ತು ತೆಲುಗರು [illegible] ರಾಯರು [illegible] ಸಮಿತಿಯವರ ಗಮನಕ್ಕೆ ತಂದಿರುತ್ತಾರೆ.

ವಿಮಾನ ಕಂಪೆನಿ ನೌಕರರ ಪ್ರತಿಭಟನಾ ದಿನಾಚರಣೆ

[illegible] ಭಾರತದ ವಿಮಾನ ಕಂಪೆನಿಗಳ ನೌಕರರು ಪ್ರತಿಭಟನಾ ದಿನ [illegible] ಬೇಡಿಕೆಗಳ [illegible] ಸಭೆಯು [illegible].

○ ಮೈಸೂರು ನಗರದಲ್ಲಿನ [illegible] ಶಿಕ್ಷಣಾಲಯ [illegible] ಎಂ. ಬಿ. [illegible] ನವರು [illegible] ಲಾಗಿದೆ.

ಗ್ರಾಮ ಕೈಗಾರಿಕೆ ಅಭಿವೃದ್ಧಿಗಾಗಿ ೭ ವರ್ಷದ ಯೋಜನೆ

ಬೆಂಗಳೂರು ೧೨

ಬೆಂಗಳೂರು ನಗರದ ಅಭಿವೃದ್ಧಿಗಾಗಿ ೫ ಕೋಟಿ ರೂ ಯೋಜನೆ

ಜೋಗ್ ಜಲಪಾತದ ಯೋಜನೆಯಿಂದ ೩ ಲಕ್ಷ ಕಿಲೋವಾಟ್ ವಿದ್ಯುಚ್ಛಕ್ತಿ ಉತ್ಪಾದನೆ

ನಗರಹವೇಲಿಗೆ ವಿಮಾನದಲ್ಲಿ ಪೋರ್ಚುಗೀಸ್ ಸೈನ್ಯ!

ಪಿರಿಯಾಪಟ್ಟಣದ ಚುನಾವಣೆಯಲ್ಲಿ ಪ್ರಜಾ ಪಕ್ಷದ ಸ್ಪರ್ಧೆ

ಕ್ರೀಡಾ ಕೇಂದ್ರದ ಆರಂಭ ಮತ್ತು ಗಣಪತಿ ನಾಗಳಾರತಿ

ಉಪನ್ಯಾಸ ಮತ್ತು ವಾಕ್ಪರ್ಧೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಪೋರ್ಚುಗಲ್ಲಿಗೆ ಭಾರತ ಸರ್ಕಾರದ ಮತ್ತೊಂದು ಪತ್ರ

ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟ್ ಸಂಘದ ಭಾಷಣ

ಮೈಸೂರು ೧೨

ಹತ್ತಿ ಬೇಲು ಬಿದ್ದು ಕೆಲಸಗಾರನ ಮರಣ

ಖಡ್ಗ ಮೃಗದ ಮರಿಗೆ ಎಮ್ಮೆ ಸಾಕು ತಾಯಿ

ವೈಯಕ್ತಿಕ ಇನಾಂ ಮಸೂದೆಯ ಬದಲಾವಣೆ

ಚೀಣಾ ಸರ್ಕಾರದಿಂದ ಚಿಯಾಂಗರಿಗೆ ಕ್ಷಮೆಯಿಲ್ಲ

ರಾಷ್ಟ್ರೀಯ ಚೀಣಾದ ಅಧಿಕಾರಿಗಳೂ, ಅಧಿಕಾರಿಗಳೂ, ಸೈನಿಕರೂ ಶರಣಾಗತರಾಗಬೇಕೆಂದೂ, ಹಾಗೆ ಮಾಡಿದರೆ ಅವರನ್ನು ಶಿಕ್ಷಿಸುವುದಿಲ್ಲವೆಂದೂ, ಚಿಯಾಂಗ್ ಶೈಕ್‌ರಿಗೆ ಮಾತ್ರ ರಿಯಾಯಿತಿಯನ್ನು ತೋರಿಸುವುದೇ ಇಲ್ಲವೆಂದೂ ಪ್ರಜಾ ಚೀಣಾ ಸರ್ಕಾರದವರು ಘೋಷಿಸಿರುವುದಾಗಿ ನವ ಚೀಣಾ ವಾರ್ತಾ ಸಂಸ್ಥೆಯು ಹೇಳಿದೆ.

★ ಬೆಂಗಳೂರಿನಲ್ಲಿ ಮೊನ್ನೆ ಲಾರಿಯೊಂದು ಹೋಗುತ್ತಿದ್ದಾಗ ಹಿಂಭಾಗದ ಚಕ್ರದ ಲೋಹದ ಭಾಗವು ಕಿತ್ತು ರಸ್ತೆಯಲ್ಲಿ ಹೋಗುತ್ತಿದ್ದ ಎರಡು ಮಕ್ಕಳಿಗೆ ಬಡಿದು ತುಂಬಾ ಗಾಯವಾಗಿರುವುದಾಗಿ ವರದಿಯಾಗಿದೆ.

ನೋಟೀಸ್

(ಕೋರ್ಟ್ ಆರ್ಡರ್ ಪ್ರಕಾರ)

ಮೈಸೂರು ಸಿಟಿ ಒಂದನೇ ಮುನ್ಸೀಫ್ ಕೋರ್ಟಿನಲ್ಲಿ

O.S. 458-54

ವಾದಿಯರು — (1) ತಗಡೂರು ರಾಮಚಂದ್ರರಾವ್ (2) ಎ. ಎಸ್. ರಾಮಯ್ಯ

Vs

ಪ್ರತಿವಾದಿಯರು — (1) ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರು (2) ಮೈಸೂರು ಮುನಿಸಿಪಲ್ ಅಸೆಸಿಂಗ್ ಆಫೀಸರ್, ಮೈಸೂರು

ಪ್ರತಿವಾದಿಯರು 52-53 ನೇ ಸಾಲಿನಲ್ಲಿ ... ಈ ದಾವೆಯು 28-9-54ಕ್ಕೆ ... ಕೋರ್ಟ್ ಆರ್ಡರ್ ಪ್ರಕಾರ ಪತ್ರಿಕೆ ಮೂಲಕ ಪ್ರಕಟಿಸಲಾಗುತ್ತದೆ.

ತಗಡೂರು ರಾಮಚಂದ್ರರಾವ್

ಎ. ಎಸ್. ರಾಮಯ್ಯ

Edited, Printed and Published by A. R. Nagarajan at Sadhvi Press D Subbiah Road, Mysore

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
17-9-54 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ಮಾಡರ್ನ್ ಥಿಯೇಟರ್ಸ್ ರವರ ತಮಿಳು ಚಿತ್ರ
ಸುಖಂ ಎಂಗೆ
(ಸುಖ ಎಲ್ಲಿ)
ತಾರಾ — ಸಾವಿತ್ರಿ, ಕೆ. ಆರ್. ರಾಮಸ್ವಾಮಿ ಮುಂತಾದವರು

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ



ಒಂದು ಪ್ರತಿಗೆ 3 ಕಾಸು

ಚಂದಾ ದರ
ಬೆಂಗಳೂರಿನ ಹೊರಗೆ
ತಿಂಗಳಿಗೆ ಎಂಟಾಣೆ
ಊರಿನ ಹೊರಗೆ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೩] SADHVI TUESDAY 14-9-1954 ಮೈಸೂರು : ಮಂಗಳವಾರ ೧೪-೯-೧೯೫೪ [ಸಂಚಿಕೆ : ೫೧

ಭಾರತ ಸರ್ಕಾರದ ವೆಚ್ಚಕ್ಕಾಗಿ ೨೧೫ ಕೋಟಿ ಹೆಚ್ಚು ಬೇಡಿಕೆ

ಹೊನ್ನೆಮರಡು ಯೋಜನೆ ಪರಿಶೀಲನೆಗೆ ಕೇಂದ್ರದ ಪ್ರವೀಣರು

ಬೆಂಗಳೂರು ೧೪

ಸರ್ಕಾರದ ಮುಖ್ಯ ವಿದ್ಯುತ್ ಇಂಜಿನಿಯರ್ ಕಾರ್ಯದರ್ಶಿಯವರಾದ ಶ್ರೀ ಬಿ. ಕೆ. ಶ್ರೀನಿವಾಸಾಚಾರ್ಯರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಹೊನ್ನೆಮರಡು ವಿದ್ಯುಚ್ಛಕ್ತಿ ಯೋಜನೆಯನ್ನು ಕುರಿತು ಮೈಸೂರು ಅಧಿಕಾರಿಗಳೊಡನೆ ಪರಿಶೀಲನೆ ನಡೆಸಲು ಸಂಸ್ಥಾನಕ್ಕೆ ಬರಲಿರುವ ಕೇಂದ್ರದ ಪ್ರವೀಣರ ತಂಡವೊಂದು ಬರಲಿರುವುದಾಗಿ ತಿಳಿಸಿರುತ್ತಾರೆ. ಅದನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಲಾಗುವುದೆಂದು ಅವರು ಸೂಚಿಸಿರುತ್ತಾರೆ. ಜೋಗ್ ವಿದ್ಯುದಾಗಾರದಿಂದ ಮುಂಬಯಿ ಸಂಸ್ಥಾನಕ್ಕೆ ೧೦ ಸಾವಿರ ಕಿಲೋವಾಟ್ ಶಕ್ತಿಯನ್ನು ಒಂದು ವರ್ಷದಲ್ಲಿ ಕೊಡಲಾಗುವುದೆಂದು ಅವರು ತಿಳಿಸುತ್ತಾ, ಮುಂಬಯಿ ಮತ್ತು ಮೈಸೂರುಗಳಿಗೆ ಆದ ಒಪ್ಪಂದದ ಪ್ರಕಾರ ಮೈಸೂರು ಸಂಸ್ಥಾನಕ್ಕೆ ಹೆಚ್ಚಿನ ವಿದ್ಯುಚ್ಛಕ್ತಿ ದೊರಕುವಂತಾಗಿದೆಯೆಂದೂ ಅವರು ತಿಳಿಸಿದರು.

ವಿವಾಹಕ್ಕೆ ಹೆದರಿ ನಿರುದ್ಯೋಗಿ ಯುವಕನ ಆತ್ಮಹತ್ಯಾ ಪ್ರಯತ್ನ

ಕಳೆದ ೧೨ ತಿಂಗಳಿಂದಲೂ ಉದ್ಯೋಗವನ್ನು ಹುಡುಕಿ ಬೇಸತ್ತ ಬೆಂಗಳೂರಿನ ೨೨ ವರ್ಷದ ನಿರುದ್ಯೋಗಿ ಕೆ. ಪಾರ್ಥಸಾರಥಿಯು ಮಧ್ಯೆ ತನ್ನ ವಿವಾಹದ ಸುದ್ದಿಯನ್ನು ಕೇಳಿ ಭೀತನಾಗಿ ತನ್ನನ್ನು ತಾನೇ ಮುಕ್ತಿಗೊಳ್ಳುವ ಸ್ಥಿತಿಯನ್ನು ಮುಟ್ಟುವುದಕ್ಕೆ ಗುರಿ ಮಾಡಲೆತ್ನಿಸಿದಾಗ ಎಂದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿ, ಕಳೆದ ಶುಕ್ರವಾರ ಮೈಲುತುತ್ತ ತಿಂದನು. ವಿಮುಖನಾಗಿ ಆರಂಭವಾಗಿ ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತೆಂದೂ ವರದಿಯಾಗಿದೆ. ಪೋಲೀಸರು ಅವನ ಮೇಲೆ ಮೊಕದ್ದಮೆ ದಾಖಲು ಮಾಡಿಕೊಂಡಿರುತ್ತಾರೆ.

ಪೂಜೆಗೆ ಸೇರಿಸಲಿಲ್ಲವೆಂದು ಹರಿಜನ ವಿದ್ಯಾರ್ಥಿಗಳ ಮೊಕದ್ದಮೆ

ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿ ಗುಲಗಂಜಿಹಳ್ಳಿಯ ಪಾಠಶಾಲೆಯ ಉಪಾಧ್ಯಾಯರಾದ ಶ್ರೀ ಲಿಂಗಶೆಟ್ಟಪ್ಪ ಮತ್ತು ಇತರ ೧೦ ಜನರ ಮೇಲೆ ತುಮಕೂರು ಎರಡನೇ ನ್ಯಾಯಾಧೀಶರ ಕೋರ್ಟಿನಲ್ಲಿ ಹಳ್ಳಿಯ ಹರಿಜನ ವಿದ್ಯಾರ್ಥಿಗಳು ಮೊಕದ್ದಮೆಯನ್ನು ಹೂಡಿ, ಆಪಾದಿತರು ಕಳೆದ ತಿಂಗಳು ೧೭ನೇ ತಾ॥ ಶಾಲೆಯಲ್ಲಿ ನಡೆದ ಶಾರದಾ ಪೂಜೆಗೆ ತಮ್ಮನ್ನು ಸೇರಿಸದೆ, ಹೊರದೂಡಿದರೆಂದು ತಿಳಿಸಿರುತ್ತಾರೆ.

ಜೂಜಾಡುತ್ತಿದ್ದವರ ಪತ್ತೆ

ರಾಜಧಾನಿಯ ಬನಶಂಕರಿ ಕೋಟೆ ಬೀದಿಯಲ್ಲಿ ನೆನ್ನೆ ರಾತ್ರಿ ಇಸ್ಪೀಟು ಜೂಜಾಡುತ್ತಿದ್ದ ಮಂದಿಯನ್ನು ಮತ್ತು ಇತರ ೫ ಜನರ ಬಳಿ ಇದ್ದ ರೂ ೨೦೦ ಗಳನ್ನೂ, ವಾಣಿವಿಲಾಸ ಮಾರ್ಕೆಟ್ ಬಳಿ ಜೂಜಾಡುತ್ತಿದ್ದ ನರಸಿಂಹಯ್ಯ ಮತ್ತು ಇಬ್ಬರ ಬಳಿ ಇದ್ದ ರೂ ೮-೫-೦ ಗಳನ್ನು 'ಬಿ' ಡಿವಿಜನ್ ಪೋಲೀಸರು ವಶಪಡಿಸಿಕೊಂಡು ಅವುಗಳ ಮೇಲೆ ಮೊಕದ್ದಮೆಯು ಹೂಡಿರುವರು.

ಬಂಗಾಳಾ ಶಾಸನಸಭಾ ಭವನಕ್ಕೆ ೩ ಮೆರವಣಿಗೆ ತಂಡಗಳು

ಪಶ್ಚಿಮ ಬಂಗಾಳ ಶಾಸನ ಸಭೆಗೆ ಹೊರಗಡೆ ಪ್ರತಿಬಂಧಾಜ್ಞೆಯಿದ್ದರೂ ಸಭಾ ಭವನಕ್ಕೆ ನೆನ್ನೆ ೩ ವಿವಿಧ ಮೆರವಣಿಗೆ ತಂಡಗಳು ಪ್ರತ್ಯೇಕ ಬೇಡಿಕೆಗಳನ್ನು ಮಂಡಿಸಲು ಬಂದಾಗ ಅವುಗಳನ್ನು ಪೋಲೀಸರು ತಡೆದರು. ಗೋವಧಾ ನಿರೋಧ ಚಳವಳಿಗೆ ಸೇರಿದ ಮಹಿಳೆಯರು ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಬಂದಿತ್ತೆಂದು, ಅವರಲ್ಲಿ ೭೧ ಮಂದಿಯನ್ನು ಪೋಲೀಸರು ಶಾಸನಸಭಾ ಭವನಕ್ಕೆ ದೂರದಲ್ಲೇ ಬಂಧಿಸಿದರೆಂದು ವರದಿಯಾಗಿದೆ. ಇತರರು ಘೋಷಣೆಗಳನ್ನು ಕೂಗುತ್ತಾ ಚದುರಿದರು.

ಇದಾದನಂತರ ಪೌರ ಸೇವಾ ಸಂಘದ ೧,೦೦೦ ಕಾರ್ಯಕರ್ತರು ೨೪ ದಿನಗಳಿಂದಲೂ ನಿಲ್ಲ ಮುಷ್ಕರವನ್ನು ತೆರೆ. ಬೇಕೆಂಬ ಬೇಡಿಕೆ ನಲ್ಲಿಯು ಆ ಪ್ರದೇಶಕ್ಕೆ ಬಂದಿದ್ದರು. ಅವರ ಪ್ರತಿನಿಧಿಗಳೊಡನೆ ಆ ದಿನ ಸಂಧಾನ ಸಾಗುವುದಾಗಿ ಮುಖ್ಯ ಮಂತ್ರಿಯವರು ಭರವಸೆಯಿತ್ತ ಮೇಲೆ ಅವರು ಚದುರಿದರು.

ನಿರಾಶ್ರಿತರ ಗುಂಪೊಂದು ಇದೇ ಸಭೆಯ ಬಳಿ ಡಾ॥ ಜಿತೇಂದ್ರಚಂದ್ರ ಲಾಹಿರಿ ಎಂಬವರ ನೇತೃತ್ವದಲ್ಲಿ ಬಂದಾಗ ಪೋಲೀಸರು ಅವರನ್ನು ತಡೆದರು. ಅವರುಗಳು ನಿರಾಶ್ರಿತರ ಕಾಲೋನಿಗಳ ವ್ಯವಸ್ಥೆ, ಸ್ಥಿರ ನೆಲೆಗಳ ವಿಸ್ತಾರ, ಅವರ ಆಸ್ತಿಗಳ ವಿನಿಮಯ ಮುಂತಾದ ವಿಷಯಗಳ ಬಗ್ಗೆ ಮೊದಲೇ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಅವರ ಪ್ರತಿನಿಧಿಗಳನ್ನು ಒಂದು ವಾರದೊಳಗೆ ಕಾಣುವುದಾಗಿ ಮುಖ್ಯ ಮಂತ್ರಿಯವರು ಭರವಸೆಯಿತ್ತ ಮೇಲೆ ಗುಂಪು ಚದುರಿತು.

ಹಾರುವ ತಟ್ಟೆಯಿಂದ ಇಬ್ಬರು ಭೂಮಿಯ ಮೇಲೆ ಇಳಿದರೇ ?

ಉತ್ತರ ಫ್ರಾನ್ಸಿನ ಕ್ವಾರೋಬಲ್ ಎಂಬ ಊರಿನ ಕೋಟೆಯಲ್ಲಿ ಹಾರುವ ತಟ್ಟೆಯಿಂದ ಇಬ್ಬರು ಚಿಕ್ಕ ಆಕಾರದ ಮನುಷ್ಯರು ಕಳೆದ ಶುಕ್ರವಾರ ರಾತ್ರಿ ಇಳಿದಿದ್ದರೆಂದು ಕೋಟೆಯ ಕೆಲಸಗಾರನೊಬ್ಬನು ಹೇಳಿರುತ್ತಾನೆ. ತನ್ನ ನಾಯಿಯು ಅಂದು ರಾತ್ರಿ ಬೊಗಳಿತೆಂದೂ, ತಾನು ನೋಡಲಾಗಿ ಕೋಟೆಯಲ್ಲಿ ಹೋಗುವ ಕೈಲು ಕಂಬಿ ಮೇಲೆ ಸುಮಾರು ೨॥ ಅಡಿಯ ಎರಡು ಪ್ರಾಣಿಗಳು ಕಂಡುಬಂದುವೆಂದೂ, ಅವುಗಳ ತಲೆ ಮೇಲೆ ಶಿರಸ್ತ್ರಾಣವಿದ್ದಿತೆಂದೂ, ಅದರಾಚೆಗೆ ಹತ್ತಿರದ ಕಾಲುಗಳಿದ್ದು, ಕೈಗಳು ಇರಲಿಲ್ಲವೆಂದೂ ಆತನು ವರ್ಣಿಸಿರುತ್ತಾನೆ.

ಅವರನ್ನು ಹಿಡಿಯಲು ಹೋದಾಗ ತನ್ನ ಮುಖದ ಮೇಲೆ ಜಾಜ್ವಲ್ಯಮಾನವಾದ ಹಸುರು ಪ್ರಕಾಶವುಂಟಾಗಿ ತನ್ನ ಅಂಗ ಸ್ತಂಭಿತವಾದುದಾಗಿಯೂ, ಸ್ವಲ್ಪ ಹೊತ್ತಿನನಂತರ ತಟ್ಟೆಯು ವ್ಯಕ್ತಿಗಳ ಸಮೇತ ಅದೃಶ್ಯವಾಯಿತೆಂದೂ ಅವನು ತಿಳಿಸಿರುವನು.

◯ ಜಪಾನಿನ ದಕ್ಷಿಣ ಭಾಗದ ದ್ವೀಪವಾದ ಕಿಯೂಷು ಮೇಲೆ ನೆನ್ನೆ ಗಂಟೆಗೆ ೧೨೫ ಮೈಲಿ ವೇಗದ ಬಿರುಗಾಳಿಯು ಬೀಸಿ ಹಾನಿಯುಂಟು ಮಾಡಿರುತ್ತದೆ.

ಶುಕ್ಲ ಮಂತ್ರಿಮಂಡಲದಲ್ಲಿ ಅವಿಶ್ವಾಸ ನಿರ್ಣಯದ ತಿರಸ್ಕಾರ

ಮಧ್ಯ ಪ್ರದೇಶದ ಶಾಸನ ಸಭೆಯಲ್ಲಿ ವಿರೋಧ ಪಕ್ಷದವರು ರವಿಶಂಕರ ಶುಕ್ಲರವರ ಮಂತ್ರಿಮಂಡಲದ ಮೇಲೆ ತಂದಿದ್ದ ಅವಿಶ್ವಾಸ ಸೂಚನಾ ನಿರ್ಣಯವನ್ನು ಸಭೆಯು ಭಾರಿ ಬಹುಮತದಿಂದ ತಿರಸ್ಕರಿಸಿರುತ್ತದೆ. ೭೫ ವರ್ಷದ ಮುಖ್ಯ ಮಂತ್ರಿಯವರ ಭಾವೋದ್ರೇಕದಿಂದ ಭಾಷಣ ಮಾಡಿ, ತಾವು ಜೀವಿಸಿರಲಿ, ಇಲ್ಲದಿರಲಿ ಇನ್ನೆರಡೂವರೆ ವರ್ಷ ಅಥವಾ ಮುಂದಿನ ಚುನಾವಣೆ ವರೆಗೆ ಕಾಂಗ್ರೆಸ್ಸಲ್ಲದೆ ಇನ್ನಾವ ಪಕ್ಷವೂ ಅಧಿಕಾರದಲ್ಲಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮುಖ್ಯ ಮಂತ್ರಿಯು ಸರ್ವಾಧಿಕಾರಿಯಾಗಿರುವರೆಂದು ವಿರೋಧ ಪಕ್ಷದ ನಾಯಕರು ಆಪಾದಿಸಿದ್ದರು. ಸಭಾ ಭವನದ ಹೊರಗೆ ಜಾರಿಯಲ್ಲಿದ್ದ ಪ್ರತಿಬಂಧಾಜ್ಞೆಯನ್ನು ಮುರಿದ ಲೆಕ್ಕವಿಲ್ಲದ ೭ ಜನ ಪ್ರಜಾ ಸಮಾಜವಾದಿ ಪಕ್ಷದ ಸ್ವಯಂ ಸೇವಕರನ್ನು ನೆನ್ನೆ ಪೋಲೀಸರು ಬಂಧಿಸಿದರು.

ವಿಮಾನಾಪಘಾತಗಳಲ್ಲಿ ೧೧ ಮಂದಿಯ ಮರಣ

ದಕ್ಷಿಣ ಅಮೇರಿಕದ ಬ್ರೆಜಿಲ್ಲಿನ ರಾಜಧಾನಿ ರಯೋ ಡಿ ಜನೈರೋವಿನ ಕೊಲ್ಲಿಯಲ್ಲಿ ನೆನ್ನೆ ಕಾರೋಬಾ ವಿಮಾನವೊಂದು ಮುಂದುಬಿದ್ದು ಅದರಲ್ಲಿದ್ದ ೨೨ ಜನ ಪ್ರಯಾಣಿಕರು ಮತ್ತು ೪ ಜನ ಚಾಲಕರನ್ನು ರಕ್ಷಿಸಲಾಯಿತು. ಅದರ ಒಬ್ಬ ಹೆಂಗಸು ನಂತರ ಮೃತಪಟ್ಟಳು. ಗ್ರೀನ್‌ಲೆಂಡಿನ ಹೋಲೆ ನೆಲೆಯಲ್ಲಿ ನೆನ್ನೆ ಅಮೆರಿಕದ ನಾಲ್ಕು ಇಂಜನ್ನುಗಳ ಭಾರಿ ವಿಮಾನವೊಂದು ಮುರಿದುಬಿದ್ದು, ಅದರಲ್ಲಿದ್ದ ೧೫ ಜನರ ಪೈಕಿ ೧೦ ಮಂದಿ ಮಡಿದಿರುತ್ತಾರೆ.

ಬರುವ ತಿಂಗಳು ೧೧ ರಿಂದ ಶಾಸನ ಸಭಾಧಿವೇಶನ

ವಿಧಾನ ಸಭೆಯು ಬರುವ ತಿಂಗಳು ೧೧ನೇ ತಾ॥ ಮಧ್ಯಾಹ್ನ ೧೨ ಗಂಟೆಗೂ, ವಿಧಾನ ಪರಿಷತ್ತು ಅದೇ ದಿನ ೧ ಗಂಟೆಗೂ ಸೇರುವುದೆಂದು ರಾಜಪ್ರಮುಖರು ಆಜ್ಞೆಯೊಂದರಲ್ಲಿ ತಿಳಿಸಿರುತ್ತಾರೆ.

ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಆರೋಗ್ಯ ಸಚಿವರ ಪ್ರವಾಸ

ಸಂಸ್ಥಾನದ ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ನಾಳೆಯಿಂದ ೧೮ ರವರೆಗೆ ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು. ಮೈಸೂರು, ಟಿ. ನರಸೀಪುರ, ರಾಮನಾಥಪುರ, ಅರಕಲಗೂಡು ಮತ್ತು ಹಾಸನಕ್ಕೆ ಭೇಟಿ ಕೊಡುವರು.

ಅಂಗಡಿ ಸಿಬ್ಬಂದಿ ಶಾಸನ ಉಲ್ಲಂಘನೆಗೆ ೧೦ ರೂ ದಂಡ

ಅಂಗಡಿ ಸಿಬ್ಬಂದಿ ಶಾಸನದ ಉಲ್ಲಂಘನೆ ಮಾಡಿದರೆಂದು ಶಿವಾಜಿನಗರದ ಅಂಗಡಿ ಮಾಲೀಕರಾದ ವಿ. ಆರ್. ಎ. ಬಾಲಕೃಷ್ಣ ಮೊದಲಿಯಾರರ ಅಂಗಡಿಯ ಮ್ಯಾನೇಜರಾದ ಶ್ರೀ ರಂಗಪ್ಪ ಎಂಬುವರಿಗೆ ನಗರದ ದ್ವಿತೀಯ ನ್ಯಾಯಾಧೀಶರು ೧೦ ರೂ. ದಂಡವನ್ನು ವಿಧಿಸಿರುತ್ತಾರೆ.

ಭಾರತ ಸರ್ಕಾರದ ವೆಚ್ಚಕ್ಕಾಗಿ ೨೧೫ ಕೋಟಿ ಹೆಚ್ಚಿನ ಬೇಡಿಕೆ

ಸೈನ್ಯ ವೆಚ್ಚವನ್ನು ಬಿಟ್ಟು, ೫೪-೫೫ ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ವೆಚ್ಚಕ್ಕಾಗಿ ೨೧೫,೬೦,೬೪,೦೦೦ ರೂ. ಗಳ ಹೆಚ್ಚು ಬೇಡಿಕೆಯನ್ನು ಕೇಂದ್ರ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ನೆನ್ನೆ ಲೋಕ ಸಭೆಯಲ್ಲಿ ಮಂಡಿಸಿದರು. ಆ ಪೈಕಿ ೨೦೯॥ ಕೋಟಿ ರೂ. ಗಳನ್ನು ಬಂಡವಾಳ, ಸಾಲ ಮತ್ತು ಮುಂಗಡಗಳಿಂದ ವೆಚ್ಚ ಮಾಡಲಾಗುವುದೆಂದೂ, ಕೈಗಾರಿಕೆ ಮತ್ತು ವಾಣಿಜ್ಯ, ವಿದೇಶಾಂಗ, ಹಣಕಾಸು, ಆಹಾರ ಮತ್ತು ವ್ಯವಸಾಯ, ಗೃಹ, ನ್ಯಾಯಾಂಗ, ಪ್ರಕೃತಿ ಸಂಪತ್ತು, ಉತ್ಪಾದನಾ ಮತ್ತು ಪುನರ್ವಸತಿ ಇಲಾಖೆಗಳಿಗೆ ಈ ಹಣವನ್ನು ಉಪಯೋಗಿಸಲಾಗುವುದೆಂದೂ ಅವರು ಹೇಳಿದರು. ಇಂಡೋಚೀನಾದ ಶಾಂತಿ ಸಮಿತಿ ಕೆಲಸಕ್ಕಾಗಿ ೫೦ ಲಕ್ಷ ರೂ. ಗಳ ಪ್ರತ್ಯೇಕವಾದ ಬೇಡಿಕೆಯನ್ನು ತರಲಾಗಿದೆ.

ತೋಳ ಬಾಲಕನ ಮರಣ

ಅಲಹಾಬಾದಿನ ಸೇವಾ ಸಮಿತಿ ಆಸ್ಪತ್ರೆಯಲ್ಲಿ ಹಲವಾರು ತಿಂಗಳುಗಳಿಂದ ಇದ್ದ 'ಜಂಗಲಿ ರಾಮ್' ಎಂಬ ತೋಳ ಬಾಲಕನು ಮೃತಪಟ್ಟಿರುತ್ತಾನೆ. ಅವನಿಗೆ ಭೇದಿ ಮತ್ತು ತೀವ್ರ ರಕ್ತಹೀನತೆ ಉಂಟಾಗಿತ್ತು. ಆದಾಗ್ಯೂ ಮತ್ತು ಆ ತನ್ನ ಕ್ಷಿಪ್ರದಿಂದ ಅವನ ದೇಹಸ್ಥಿತಿಯು ಕೆಟ್ಟಿತೆಂದು ಹೇಳಲಾಗಿದೆ.

ಕೇಡಿಯ ಬಂಧನ

ಮೈಸೂರಿನ ಶಾಸನ ಸಭೆಗೆ ಪಿರಿಯಾಪಟ್ಟಣ ಚುನಾವಣಾ ಕ್ಷೇತ್ರದಿಂದ ಆರಿಸಿಬಂದಿದ್ದ ಶ್ರೀ ಎಸ್ ಎಂ ಮರಿಯಪ್ಪನವರ ಚುನಾವಣೆಯು ಅಕ್ರಮವಾದುದರಿಂದ ಚುನಾವಣಾ ಕಮಿಷನ್ನಿನವರು, ಮೈಸೂರು ಶಾಸನ ಸಭೆಗೆ ಉಪ ಚುನಾವಣೆಯ ವೇಳಾ ಪಟ್ಟಿಯನ್ನು ಕೊಟ್ಟಿರುತ್ತಾರೆ. ನಾಮ ಪತ್ರಗಳನ್ನು ಸಲ್ಲಿಸಲು ಕೊನೆಯ ದಿನ ಇದೇ ಅಕ್ಟೋಬರ್ ೧, ಪತ್ರಗಳ ಪರಿಶೀಲನೆ ೫, ಉಮೇದುವಾರಿಕೆಯನ್ನು ಹಿಂದೆ ತೆಗೆದುಕೊಳ್ಳಲು ಕೊನೆಯ ದಿನ ೮, ಚುನಾವಣೆ ನಡೆಯುವ ದಿನ ನವೆಂಬರ್ ೫, ಚುನಾವಣೆಯ ಮುಕ್ತಾಯ ೧೫.

ಗಣಪತಿ ಮಂಗಳಾರತಿ

ಕೃಷ್ಣರಾಜಮೊಹಲ್ಲಾ ನಾಲಾ ಬೀದಿಯಲ್ಲಿರುವ ಶ್ರೀ ದೊಡ್ಡರಾಮ ದೇವರ ಗುಡಿಯಲ್ಲಿ ಈ ರಾತ್ರಿ ೭|| ಗಂಟೆಗೆ ಗಣಪತಿ ಮಂಗಳಾರತಿ ಕಾರ್ಯಕ್ರಮದ ಅಂಗವಾಗಿ ವಿದುಷಿಯರಾದ ಸುಶೀಲ ಮತ್ತು ರತ್ನಮ್ಮನವರ ಸಂಗೀತವು ನಡೆಯುವುದು.

ರಾಜಧಾನಿಯ ಕೊತ್ತುವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ವಾಣಿ ಪುಸ್ತಕ ಭಂಡಾರದಲ್ಲಿ ನಾಳೆ ಸಂಜೆ ೫ ಗಂಟೆಗೆ ಗಾಯಕ ಮಂಗಳಂಪಲ್ಲಿ ಶ್ರೀ ಶ್ರೀರಂಗ ಭಾಗವತ್ಪುರವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯುವುದು.

ನಗರದಲ್ಲಿ ಟಿ ಅಟೋಂ ಪ್ರಚಾರ

[illegible] ವಿಷಯವಾಗಿ ಶ್ರೀ ಕಗದೂರ ರಾಮಚಂದ್ರರಾಯರು ಮತ್ತು ಶ್ರೀ ಎ ಎನ್ ಎಂ ಸುಬ್ಬಯ್ಯನವರ [illegible] ಪೌರಸಭೆಯ [illegible] ಸಂಬಂಧವಾಗಿ [illegible] ಈ ಬೆಳಿಗ್ಗೆ ಟಾಂಟಾಂ ಮೂಲಕ ಪ್ರಚಾರದ ಮೆರವಣಿಗೆಯನ್ನು ನಡೆಸಲಾಯಿತು. ವಾದ್ಯಗಳೂ ಮತ್ತು ಜನರೂ ಮೆರವಣಿಗೆಯಲ್ಲಿದ್ದರು.

ಬೋಟಾ ಬಾಕ್ಸುಗಳ ಚಲಾವಣೆ ಪ್ರಯತ್ನ

ನಗರದಲ್ಲಿ ಇಬ್ಬರು ಸ್ತ್ರೀಯರೂ ಸೇರಿ ಹಾಕ್ಕರ ಬಂಧನ

ಮೈಸೂರು ೧೮

ಮೂರವಾರದ ಕೆಳಗೆ ಕೃಷ್ಣಲಾಲ್ ಎಂಬಾತನು ನೆನ್ನೆ ದೇವರಾಜ ಮಾರ್ಕೆಟ್ಟಿನ ಬಳಿ ಗುಜರಿಯಲ್ಲಿ ಹಾಜಿದಬ್ಬ ಎಂಬುವನ ಬಳ್ಳಿ ಅಂಗಡಿಗೆ ಹೋಗಿ ಒಂದು ರೂ. ಗೆ ಒಂದು ಕೋಳಿಯನ್ನು ಖರೀದಿ ಮಾಡಿ ಒಂದು ರೂಪಾಯಿ ನಾಣ್ಯವನ್ನು ಆತನಿಗೆ ಕೊಡಲು ಅಂಗಡಿಯವನು ಅದು ಬೋಟಾ ನಾಣ್ಯವೆಂದು ಹೇಳಿ ಬೇರೆ ಕೇಳಲಾಗಿ, ಕೃಷ್ಣಲಾಲನು ತನ್ನ ಹೆಂಡತಿ ಸೋನು ಎಂಬಾಕೆಯಿಂದ ಇನ್ನೊಂದು ನಾಣ್ಯವನ್ನು ಕೊಡಿಸಿದನೆಂದೂ, ಅದೂ ಬೋಟಾ ಆಗಿದ್ದುದರಿಂದ ವಾಪಸು ಕೊಡಲಾಗಿ ಆಗ ಎಂಬ ತನ್ನ [illegible] ಇನ್ನೊಂದು ನಾಣ್ಯವನ್ನು ಕೊಡಿಸಿ ಅದೂ ಬೋಟಾವೆಂದು ಅಂಗಡಿಯವನು ಹೇಳುತ್ತಿದ್ದಂತೆಯೇ ಅದು ಸರಿಯಾಗಿದೆಯೆಂದು ಹೇಳಿ ಕೃಷ್ಣಲಾಲನು ಅಲ್ಲಿಂದ ಹೊರಟುಹೋದನೆಂದು ಗೊತ್ತಾಗಿದೆ.

ಆ ವೇಳೆಗೆ ಲಕ್ಷ್ಕರ್ ಸ್ಟೇಷನ್ನಿನ ಕಾನ್ಸ್ಟೇಬಲ್ಲೊಬ್ಬನು ಅಲ್ಲಿಗೆ ಬರಲಾಗಿ ಹಾಜಿದಬ್ಬನು ಆತನಿಗೆ ದೂರು ಕೊಟ್ಟನೆಂದೂ ಕೂಡಲೇ ಆತನು ಮೊದಲ್ಲಂದವನನ್ನು ಹಿಂಬಾಲಿಸಿ ಅವರನ್ನು ಪತ್ತೆ ಹಚ್ಚಿ ಅವರು ಸಮಂಜಸವಾದ ಉತ್ತರ ಕೊಡದಿರಲು ಸ್ಟೇಷನ್ನಿಗೆ ಬರುವಂತೆ ಕರೆದನೆಂದೂ ಹೇಳಲಾಗಿದೆ. ಆದುದಾಯ ಕೃಷ್ಣಲಾಲನು ಆತನಿಗೆ ೧೦ ರೂ. ಕೊಟ್ಟು ತನ್ನನ್ನು ಬಿಡುವಂತೆ ಹೇಳಲು ಕಾನ್ಸ್ಟೇಬಲನು ಅದನ್ನು ತೆಗೆದುಕೊಂಡು ಮೂವರನ್ನೂ ಸ್ಟೇಷನ್ನಿಗೆ ಕರೆದುಕೊಂಡು ಹೋದನು. ಆ ಮೂವರನ್ನೂ ಪೋಲೀಸರು ಬಂಧಿಸಿ ಅವರಲ್ಲಿದ್ದ ಬೋಟಾ ನಾಣ್ಯಗಳನ್ನು ವಶಪಡಿಸಿಕೊಂಡರು.

ಕೃಷ್ಣಲಾಲನು ಕಾವೇರಿಪಟ್ಟಂ ತಾಲ್ಲೂಕು ಕಟ್ಟೂರ ಛತ್ರದಲ್ಲಿರುವ ಜೈಲಾಬುದ್ದೀನ್ ಎಂಬಾತನು ನಾಣ್ಯಗಳನ್ನು ಕೊಟ್ಟನೆಂದು ತಿಳಿಸಲು ಆತನನ್ನು ಬಂಧಿಸಿ ಆತನು ಇಟ್ಟುಕೊಂಡಿದ್ದ ಸಾಮಾನನ್ನು ಶೋಧಿಸಲಾಗಿ ಏನೂ ಸಿಕ್ಕಲಿಲ್ಲ. ಹಾಜಿದಬ್ಬನು ಹೆಂಡತಿಯು ಬಳಿ ಇದ್ದ ೫೦ ರೂ. ನಮ್ಮ ಪತ್ತೆಗೆ [illegible] ೧೦ ರೂ. ನೋಟನ್ನು ಮತ್ತು ಸುಗೆ ಬಿಲ್ಲೆ ಇದ್ದ ರೂ. [illegible] ಅನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ. ಅಪರಾಧಿಗಳ ಮೇಲೆ ೨೩೯ ಮತ್ತು ೨೪೧ ನೇ ಕಲಮು ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ.

ಬೊಂಬಾಯಿಯಲ್ಲಿ ಪೋಲೀಸರ ಗುಂಡು

ಬೊಂಬಾಯಿಯ ಪೈದೋನೀ ಪ್ರದೇಶದಲ್ಲಿ ನೆನ್ನೆ ರಾತ್ರಿ ಒಂದು ಪಟ್ಟಾ ಕಾರಣಕ್ಕಾಗಿ ಎರಡು ಗುಂಪುಗಳಿಗೆ ಘರ್ಷಣೆ ನಡೆದು ಸೋಡಾ ಸೀಸೆ, ಕಲ್ಲು ಮತ್ತು ಇತರ ಸಾಧನಗಳಿಂದ ಹೊಡೆದಾಟವಾಯಿತೆಂದೂ, ಪೋಲೀಸರು ಗುಂಪು ಚದುರಿಸಲು [illegible] ಗುಂಡು ಹಾರಿಸಿದರೆಂದೂ ವರದಿಯಾಗಿದೆ. ಗುಂಡಿನೇಟಿನಿಂದ ಸತ್ತವನೊಬ್ಬನನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಆ ಘರ್ಷಣೆಯಲ್ಲಿ ಗಾಯಗೊಂಡ ನಂತರ ಮೂವರು ಇತರರಿಗೆ ಚೂರಿ ಇರಿತಗಳು ಆಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾಯಿತು.

○ ರಾಜಧಾನಿಯ ದಸರಾ ಉತ್ಸವದ ಅತಿಥಿಗಳ ಸತ್ಕಾರ ಸಂಬಂಧದ ವಿಚಾರದ ಬಗ್ಗೆ ಆರೋಗ್ಯ ಇಲಾಖೆಯ ರಿಜಿಸ್ಟ್ರಾರ್ ಆದ ಶ್ರೀ ಎ ವಿ ಲಕ್ಷ್ಮಣಯ್ಯನವರನ್ನು ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ.

ವಿದೇಶೀ ಪಾದ್ರಿಗಳ ಚಟುವಟಿಕೆಗಳ ಬಗ್ಗೆ ಪಕೋಟಿ

ಭಾರತದಲ್ಲಿರುವ ವಿದೇಶೀ ಪಾದ್ರಿಗಳ ಬಗ್ಗೆ ಸರ್ಕಾರದ ನೀತಿಯಲ್ಲಿ ಬದಲಾವಣೆ ಆಗುವುದೆಂದೂ, ಧಾರ್ಮಿಕ ದೃಷ್ಟಿಯಿಂದ ಅದನ್ನು ಪರಿಗಣಿಸದೆ, ರಾಜಕೀಯ ದೃಷ್ಟಿಯಿಂದ ಪರಿಶೀಲಿಸಲಾಗುವುದೆಂದೂ ವರದಿಯಾಗಿದೆ. ಭಾರತಕ್ಕೆ ಬರುವ ವಿದೇಶೀ ಪಾದ್ರಿಗಳ ಬಗ್ಗೆ ಹೆಚ್ಚಿನ ತನಿಖೆ ನಡೆಯಲು ಆಲೋಚಿಸಲಾಗಿದೆ. ಅವರನ್ನು ಗಡಿ ಮತ್ತು ಗುಡ್ಡಗಾಡು ಪ್ರದೇಶಗಳಿಗೆ ಹೋಗಲು ಸಾಧಾರಣವಾಗಿ ಬಿಡುವುದಿಲ್ಲ. ಬಹಳ ಕಾಲದಿಂದಲೂ ಸ್ಥಾಪಿತವಾಗಿರುವ ಕ್ರಿಸ್ತ ದೇವಾಲಯಗಳ ಪ್ರತಿನಿಧಿಗಳಿಗೆ ಮಾತ್ರ ಅವಕಾಶವೀಯಲಾಗುವುದು. ಹೊರಗಿನ ಪಾದ್ರಿಗಳ ಸ್ಥಾನದಲ್ಲಿ ಸ್ಥಳೀಯರಿಗೆ ಭಾರತ ಸರ್ಕಾರದವರ ಹೆಚ್ಚು ಪುರಸ್ಕಾರ ನೀಡುವುದು. ಇತ್ತೀಚೆ ಅನೇಕ ಮಿಷನರಿ ಸಂಸ್ಥೆಗಳ ನಾಯಕರುಗಳು ದಂಗೆ ಹುಟ್ಟಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಭಾರತದಲ್ಲಿ ಪಾದ್ರಿಗಳು ನಡೆಸುತ್ತಿರುವ ಚಟುವಟಿಕೆಗಳ ಬಗ್ಗೆ ಪಾರ್ಲಿಮೆಂಟಿನಲ್ಲಿ ವಿಪರೀತವಾಗಿ ಟೀಕೆಗಳಾಗಿದ್ದುವು.

ರಣಹದ್ದುಗಳು ವಿಮಾನಕ್ಕೆ ಬಡಿದು ಚಾಲಕರಿಗೆ ಪೆಟ್ಟು

ರಂಗೂನಿನಿಂದ ಬರುತ್ತಿದ್ದ ಒಂದು ವಿಮಾನವೊಂದಕ್ಕೆ, ಕಲ್ಕತ್ತೆಗೆ ೪೦ ಮೈಲಿ ದೂರದಲ್ಲಿ ಎರಡು ರಣಹದ್ದುಗಳು ಬಡಿದು, ಅದರ ವಿಂಡ್ ಸ್ಕ್ರೀನ್ ಮುರಿದು ಚಾಲಕ ಮತ್ತು ಸೇವಕ ಅಧಿಕಾರಿಗೆ ಪೆಟ್ಟು ಬಿದ್ದುದಾಗಿಯೂ, ಹದ್ದುಗಳೆರಡೂ ಮೃತಪಟ್ಟುವೆಂದು ವರದಿಯಾಗಿದೆ. ವಿಮಾನದ ಸ್ಪೀಡ್ ಲಿಸ್ಟ್ ಸ್ವಿಚ್ ಗಳು ಮತ್ತು ಬ್ರೇಕುಗಳಿಗೆ ಜಖಂ ಆಯಿತು. ಅದೃಷ್ಟವಶಾತ್ ೨೧ ಪ್ರಯಾಣಿಕರು ಸಮೇತ ವಿಮಾನವನ್ನು ಚಾಲಕನು ಸುರಕ್ಷಿತವಾಗಿ ಕೆಳಗಿಳಿಸಿದನೆಂದು ಹೇಳಲಾಗಿದೆ.

ಸಂತೆಯಲ್ಲಿ ಕಟುಕರಿಗೆ ಗೋವುಗಳ ಯಥೇಚ್ಛ ಮಾರಾಟವೇ?

ನಂಜನಗೂಡು ಬಳಿ ಕಡಕೊಳದ ಹತ್ತಿರ ಪ್ರತಿ ಶನಿವಾರ ನಡೆಯುವ ಸಂತೆಯಲ್ಲಿ ಅನೇಕ ವ್ಯವಸಾಯ ಯೋಗ್ಯವಾದ ಜಾನುವಾರುಗಳನ್ನು ಕಟುಕರು ಕೊಂಡು ಗಡಿ ಮಾತ್ರ ಸಾಗಿಸುತ್ತಿರುವರೆಂದೂ, ಸಂತೆ ಮುಗಿದ ಕೂಡಲೇ ರಾಸುಗಳಿಗೆ ಹೆಚ್ಚು ಹಾಕಿ ರಸ್ತೆಯಲ್ಲಿ ಹೊಡೆದುಕೊಂಡು ಹೋಗುವ ದೃಶ್ಯವು ಬಹಳ ಹೃದಯ ವಿದ್ರಾವಕವಾಗಿರುವುದೆಂದೂ ಇತರ ಸಂತೆಗಳಲ್ಲೂ ಇದೇ ರೀತಿ ನಡೆಯುತ್ತಿರುವುದೆಂದೂ, ಈ ವಿಷಯದ ಬಗ್ಗೆ ಅಮೂಲಾಗ್ರವಾಗಿ ತನಿಖೆ ನಡೆಸಿ ಗೋವಧೆಗಾಗಿ ಕೊಂಡೊಯ್ಯಲ್ಪಡುವುದೆಂಬುದು ನಿಜವಾದರೆ ಅಂತಹ ಕ್ರಮವನ್ನು ತಪ್ಪಿಸಿ ಗೋಸಂರಕ್ಷಣೆ ಕ್ರಮ ಕೈಗೊಳ್ಳುವುದು ಸೂಕ್ತವೆಂದೂ ಕಡಕೊಳದ ನಿವಾಸಿಯೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಿಟೀಲು ೬-೨೦ ರಾಷ್ಟ್ರೀಯ ಸಂಗೀತ. ಮಧ್ಯಾಹ್ನ ೧-೩೦ ಮತ್ತು ೧-೫೦ ಸಂಗೀತ ವಾದ್ಯ ವೃಂದಗಳ ಗೀತೆಗಳು. ಸಂಜೆ ೫-೩೦ ಮತ್ತು ೬-೫ ರಂಗಪ್ಪ ಕೊಳಲು, ವಿ. ನಾಗರಾಜು ಅವರ ವೀಣೆ, ೬ ಗಾನ ವಿಹಾರ ೬-೧೫ ನೃತ್ಯ ಮತ್ತು ನಮ್ಮವರು. ಆ ಟಿ. ಆರ್ ಸುಬ್ಬರಾವ್ ಅವರ ನಾಟಕ 'ನವರಕ್ಷ'. ೮-೩೦ ಕೃಷ್ಣಪ್ರಸಾದ್ ಭಾರತ ಸೇವಕ ಸಮಾಜದ ಬಗ್ಗೆ ಭಾಷಣ, ವಿಷಯ ಪ್ರಸಾರ. ೮-೪೫ ಮತ್ತು ೯-೩೦ ವಿ. ಎಲ್. ಶ್ರೀನಿವಾಸರ ಗಾಯನ. ೯-೦೫ ಕನ್ನಡ ಗೀತೆಗಳು.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ. ಆಣೆ	ರೂ. ಆ
ಕಡಲೇ ಬೀ	೪ ೮ ೭	೪ ೧೦ ೦
ಎಳ್ಳು	೩೭ ೦ ೦	೪೬ ೧೪ ೦
ಹುರುಳಿ	೩೯ ೬ ೦	೨೬ ೩ ೨
ಹುರುಳಿ	೪೦ ೦ ೦	
ಉಪ್ಪು	೪೦ ೦ ೦	
ಬಾಳೆಕಾಯಿ	೪೪ ೪ ೦	೪೩ ೦ ೦
ರಾಗಿ	೨೫ ೨ ೨	
ಬೆಲ್ಲ	೧೧೧ ೦	೧೧ ೯ ೦
ಶೇ ಹುಣಿಸೇಹಣ್ಣು	೨೧ ೧೪ ೪	
[illegible]	೬ ೪ ೦	
[illegible] ೧೦೦	೪೪ ೮ ೦	೨೪೯ ೮ ೦

ವಿಶೇಷ ವಿವಾಹದ ಶಾಸನದಲ್ಲಿ ದಾಂಪತ್ಯ ಹಕ್ಕಿನ ನಿಬಂಧನೆ

ವಿಶೇಷ ವಿವಾಹದ ಮಸೂದೆಯಲ್ಲಿ ದಾಂಪತ್ಯ ಜೀವನದ ಹಕ್ಕನ್ನು ಉಳಿಸಿಕೊಡಲು ಕೋರ್ಟಿಗೆ ಅಧಿಕಾರವಿರುವುದೆಂಬ ನಿಬಂಧನೆಯನ್ನು ಲೋಕ ಸಭೆಯು ೧೨೭–೪೭ ಓಟುಗಳಿಂದ ಒಪ್ಪಿರುವುದರಿಂದ ಅದಕ್ಕೆ ಸೇರಲು ಅನೇಕರು ಈ ನಿಬಂಧನೆಗೆ ವಿರೋಧವಾಗಿ ಮಾತನಾಡಿದರೂ, ಓಟು ಕೊಡುವ ಕಾಲದಲ್ಲಿ ಅದಕ್ಕೆ ವಿಶೇಷ ಬಹುಮತವು ಸಿಕ್ಕಿತು. ಚರ್ಚೆಯ ಕಾಲದಲ್ಲಿ ಶಾಸನಕ್ಕೆ ರಾಜ್ಯಸಭೆಯವರು ಸೇರಿಸಿದ್ದ ಒಪ್ಪಿಗೆಯ ವಿಚ್ಛೇದನದ ವಿಷಯವಾಗಿ ಚರ್ಚೆಯಾಯಿತು. ಅಂತಹ ನಿಬಂಧನೆಯನ್ನು ಮಾಡದಿದ್ದರೆ ಗಂಡನೋ ಹೆಂಡತಿಯೋ, ವಿದೇಶಗಳಲ್ಲಿರುವ ಇತರ ವಿಧಾನಗಳನ್ನು ಹುಡುಕಬಹುದು ಎಂದು ನಿಬಂಧನೆಯ ಬೆಂಬಲಿಗರು ತಿಳಿಸಿದರು. ದಾಂಪತ್ಯ ಜೀವನದ ಹಕ್ಕಿನ ನಿಬಂಧನೆ ಬಗ್ಗೆ ಶ್ರೀಮತಿ ಜಯಶ್ರೀ ರಾಯಜಿಯವರು ಮಾತನಾಡಿ ಕಾಮತೃಪ್ತಿಯು ವಿವಾಹವಲ್ಲವೆಂದೂ ನಿಬಂಧನೆಯನ್ನು ಜಾರಿಗೆ ತರುವುದು ಅಮಾನುಷ ಮತ್ತು ಅತ್ಯಾಚಾರವೆಂದೂ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ವಿರೋಧ ಗುಂಪಿನ ಸಭಾತ್ಯಾಗ

ರಾಜ್ಯಸಭೆ ಪಕ್ಷ ಸ್ವಾತಂತ್ರ್ಯ ನಿವಾರಣೆ ಮಸೂದೆಯ ಚರ್ಚೆ ನಡೆಯುತ್ತಿದ್ದಾಗ ಉಪಾಧ್ಯಕ್ಷ ಎಸ್. ವಿ. ಕೃಷ್ಣಮೂರ್ತಿರಾಯರು ನೀನ್ನೆ ಮಸೂದೆ ಬಗ್ಗೆ ಚರ್ಚೆ ನಡೆಸಿ ಸದಸ್ಯರಾದ ಡಾ|| ಬಿ. ಆರ್. ಅಂಬೇಡ್ಕರರ ಭಾಷಣಕ್ಕೆ ಅವಕಾಶವೀಯಲಿಲ್ಲವೆಂದು ಸಭೆ ಬಿಟ್ಟು ವಿರೋಧ ಪಕ್ಷದ ನಾಯಕ ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು. ಸದಸ್ಯರು ಈ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸಂಪ್ರದಾಯವಲ್ಲವೆಂದು ಉಪಾಧ್ಯಕ್ಷರು ರೂಲಿಂಗ್ ಕೊಟ್ಟರು.

ಬಿಳಿಕೆರೆ ಬಳಿ ಗಾಂಧಿ ವಿಚಾರ ಗೋಷ್ಠಿ ಶಿಬಿರ

ರಾಜಧಾನಿಯ ಮಹಾರಾಜಾ ಕಾಲೇಜಿನ ಗಾಂಧಿ ವಿಚಾರ ಗೋಷ್ಠಿಯ ಆಶ್ರಯದಲ್ಲಿ ಬಿಳಿಕೆರೆ ಬಳಿ ಗ್ರಾಮಸಭೋದಯ ಶಿಬಿರ ಈ ತಿಂಗಳ ೨೭ ರಿಂದ ಏಳು ದಿನ ಕಾಲ ನಡೆಸಲಾಗುವುದು. ಬುದ್ಧಿ ಮತ್ತು ಶ್ರಮ ಜೀವನದ ಸಮನ್ವಯ ಮಾಡಿ, ಆ ಮೂಲಕ ಸರ್ವೋದಯ ಸಮಾಜದ ಸೃಷ್ಟಿಗಾಗಿ ಗೋಷ್ಠಿಯು ಪ್ರಯತ್ನಿಸುತ್ತಿದೆ. ಶಿಬಿರಕ್ಕೆ ಸೇರಲಿಚ್ಛಿಸುವವರು ಕಾರ್ಯದರ್ಶಿಗಳಾದ ಶ್ರೀ ಎಚ್. ಎಸ್. ಮಹದೇವಯ್ಯ ಮತ್ತು ಶ್ರೀ ಸಿ. ಶಿವರುದ್ರಯ್ಯನವರಿಗೆ ನಾಳೆಯೊಳಗಾಗಿ ತಿಳಿಸುವಂತೆ ಕೋರಲಾಗಿದೆ.

ಗಣಪತಿ ಮಂಗಳಾರತಿ

ನಂಜನಗೂಡು ಪ್ರೌಢಶಾಲೆಯಲ್ಲಿ ಬುಧವಾರ ವಿದ್ಯಾ ಗಣಪತಿ ಪೂಜೆಯ ಅಂಗವಾಗಿ ಮೈಸೂರಿನ ಕುಮಾರಿಯರಾದ ಕಮಲ ಮತ್ತು ವಿಮಲರವರ ಸಂಗೀತವು ಮಾಸ್ಟರ್ ರಘುರವರ ಮೃದಂಗದೊಡನೆ ನಡೆಯಿತು. ಮಂಗಳಾರತಿಯಾದಮೇಲೆ, ಪ್ರಸಾದ ವಿನಿಯೋಗ ಮಾಡಲಾಯಿತು.

ರಾಜಧಾನಿಯ ವಾಣಿವಿಲಾಸ ಮೊಹಲ್ಲಾ ೧೩ ನೇ ಕ್ರಾಸಿನಲ್ಲಿರುವ ಶ್ರೀ ಕೃಷ್ಣ ನರ್ಸರಿ ಶಾಲೆಯಲ್ಲಿ ಕಳೆದ ೮ ನೇ ತಾ|| ಗಣಪತಿ ಮಂಗಳಾರತಿಯನ್ನು ಶಾಲಾ ಮುಖ್ಯೋಪಾಧ್ಯಾಯಿನಿಯರಾದ ಶ್ರೀಮತಿ ರಂಗರಾಜ ಅಯ್ಯಂಗಾರ್‌ರವರು ನೆರವೇರಿಸಿ, ಮಕ್ಕಳಿಗೆ ಪ್ರಸಾದವನ್ನು ಹಂಚಿದರು.

ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ಚಟುವಟಿಕೆಗಳ ಆರಂಭ

ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಪಾಠ ಪ್ರವಚನಗಳಲ್ಲದೆ ಇತರ ವಿದ್ಯಾರ್ಥಿ ಚಟುವಟಿಕೆಗಳ ಆರಂಭೋತ್ಸವವನ್ನು ನಾಳೆ ಸಂಜೆ ೫|| ಕ್ಕೆ ಶ್ರೀ ಗಿರಿಜಾ ವೈಸ್ ಛಾನ್ಸಲರಾದ ಪ್ರೊ|| ವಿ. ಎಲ್. ಡಿಸೋಜಾರವರು ನೆರವೇರಿಸುವರು.

ಮೈಸೂರು ಸಂಸ್ಥಾನದಲ್ಲಿ ೧ ಸಕ್ಕರೆ ಕಾರ್ಖಾನೆಗೆ ಅನುಮತಿ

ಮೈಸೂರು ಸಂಸ್ಥಾನದಲ್ಲಿ ಇನ್ನೊಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ಅನುಮತಿ ಕೊಡಲಾಗುವುದೆಂದೂ ದಕ್ಷಿಣ ಭಾರತದಲ್ಲಿ ಒಟ್ಟು ೬ ಕಾರ್ಖಾನೆಗಳನ್ನು ತೆರೆಯಲು ಅನುಮತಿ ದೊರೆತಿರುವುದೆಂದೂ ಶ್ರೀ ಎಸ್. ಆರ್. ಚಯ್ಯನವರ ಪ್ರಶ್ನೆಗೆ ಶ್ರೀ ಕೆ. ಟಿ. ಪಡಿಯರವರ ಪ್ರಶ್ನೆಗೆ ಕೇಂದ್ರ ಆಹಾರ ಮಂತ್ರಿಗಳಾದ ಎಸ್. ಕೆ. ಪಾಟೀಲರು ಲೋಕ ಸಭೆಯಲ್ಲಿ ತಿಳಿಸಿರುವರು. ಹೊನ್ನಮ್ಮನವರ ಪ್ರಶ್ನೆಗೆ ಉತ್ತರಿಸುತ್ತ ಅವರು ಇದೇ ಬಗ್ಗೆ ಸಂಬಂಧವಾಗಿ ಮೈಸೂರು ಸರ್ಕಾರದಿಂದ ಅರ್ಜಿಗಳು ಬಂದು, ಅವುಗಳನ್ನು ಪರಿಶೀಲಿಸಲಾಗುತ್ತಿರುವುದೆಂದೂ ತಿಳಿಸಿದರು.

ಭಾರತ ಸರ್ಕಾರದ ವಿದೇಶಾಂಗ ಸಲಹಾ ಸಮಿತಿಗೆ ಎಸ್. ರಾಚಯ್ಯ

ಲೋಕಸಭೆಯಲ್ಲಿ ಮೈಸೂರಿನ ಸದಸ್ಯರಾಗಿರುವ ಶ್ರೀ ಎಸ್. ರಾಚಯ್ಯನವರನ್ನು ಭಾರತ ಸರ್ಕಾರದ ವಿದೇಶಾಂಗ ಇಲಾಖೆ ಸಲಹಾ ಸಮಿತಿ ಸದಸ್ಯರಾಗಿ ತೆಗೆದುಕೊಳ್ಳಲಾಗಿದೆ. ಪಂಡಿತ ನೆಹರೂರವರ ಆದರ ಅಧ್ಯಕ್ಷರಾಗಿರುತ್ತಾರೆ. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು, ವಿ. ಕೆ. ಕೃಷ್ಣ ಮೆನನ್, ಸೇಠ್ ಗೋವಿಂದದಾಸ್, ಡಾ|| ಸೈಯದ್ ಮಹಮೂದ್, ಶೇರ್ ಗೋವಿಂದದಾಸ್, ಆಚಾರ್ಯ ನರೇಂದ್ರದೇವ, ಆರ್. ಕೆ. ಮೆಹತಾ, ದಿವಾನ್ ಚಮನಲಾಲ್, ಸ್ವರಣ್ ಸಿಂಗ್, ಎಸ್. ಗೋಪಾಲರ್ ಮುಂತಾದವರು ಸಮಿತಿ ಸದಸ್ಯರಾಗಿರುವರು.

ನೆಹರೂರವರೊಡನೆ ಸಿಂಹಳದ ಪ್ರಧಾನಿಯ ಸಂಧಾನ

ಸಿಂಹಳ ದ್ವೀಪದಲ್ಲಿರುವ ಭಾರತೀಯ ಬಹುಕಟ್ಟಿಗರ ನಿವಾಸಿಗಳ ನಾಗರಿಕ ಹಕ್ಕಿನ ವಿಷಯವಾಗಿ ಉದ್ಭವವಾಗಿರುವ ಹಲವು ಸಮಸ್ಯೆಗಳನ್ನು ಇತ್ಯರ್ಥಗೊಳಿಸಲು ಭಾರತದ ಪ್ರಧಾನಿ ನೆಹರೂರವರೊಡನೆ ಸಂಧಾನ ನಡೆಸುವಂತೆ ಸಿಂಹಳದ ಪ್ರಧಾನಿ ಜಾನ್ ಕೋಟೆಲಾವಾಲರವರಿಗೆ ಅಲ್ಲಿನ ಮಂತ್ರಿವರ್ಗದ ಹಲವು ಸೂಚಿಸಿರುತ್ತದೆ. ಸಂಧಾನದ ಪ್ರಶ್ನೆಯು ರುವಾಗ "ಸ್ವೀಕಾರ ಕ್ರಮಗಳನ್ನು" ತೆಗೆದುಕೊಳ್ಳಬಾರದೆಂದೂ ಮಂತ್ರಿಮಂಡಲವು ತಿಳಿಸಿರುತ್ತದೆ.

ಮುಖ್ಯಮಂತ್ರಿಯವರಿಂದ ಶಾಲಾ ಕಟ್ಟಡದ ಆರಂಭ

ಮೈಸೂರು ತಾಲ್ಲೂಕು ಸಿದ್ಧರಾಮನಹುಂಡಿಯಲ್ಲಿ ನೂತನವಾಗಿ ಕಟ್ಟಲಾಗಿರುವ ಪ್ರಾಥಮಿಕ ಶಾಲಾ ಕಟ್ಟಡದ ಆರಂಭೋತ್ಸವವನ್ನು ಇದೇ ೨೫ ನೇ ತಾ|| ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆರವೇರಿಸುವರು. ಅದೇ ದಿನ ತಾಲ್ಲೂಕು ಕಾಂಗ್ರೆಸ್ ಕಾರ್ಯಕರ್ತರನ್ನೂ ಉದ್ದೇಶಿಸಿ ಅಲ್ಲಿ ಭಾಷಣ ಮಾಡುವರು.

ಶನಿ ಮಹಾತ್ಮೆ ಕಥೆ

ಕೃಷ್ಣರಾಜ ಮೊಹಲ್ಲಾ ದೇವಟಿಗೆ ಬೀದಿಯಲ್ಲಿರುವ ಶ್ರೀ ಗುಂಡಪ್ಪಯ್ಯಂಗಾರ್ಯರ ಹೋಟೇಲಿನ ಮುಂಭಾಗದಲ್ಲಿ ಈ ರಾತ್ರಿ ೧೧ ಘಂಟೆಗೆ ವೇ|| ನದೀಪುರಂ ಶ್ರೀನಿವಾಸರಂಗಾಚಾರ್ಯರು ಶನಿ ಮಹಾತ್ಮೆ ಕಥೆಯನ್ನು ಮಾಡುವರು.

ಬೀಗದಕೈ ಗೊಂಚಲುಗಳು ಸಿಕ್ಕಿವೆ

ಎರಡು ಬೀಗದಕೈ ಗೊಂಚಲುಗಳು ಸಿಕ್ಕಿವೆ. ವಾರೀಸುದಾರರು ಸರಿಯಾದ ವಿವರಗಳನ್ನು ಕೊಟ್ಟು ಅವನ್ನು ಸಾಧ್ವಿ ಕಛೇರಿಯಲ್ಲಿ ಪಡೆಯಬಹುದು.

ಗೋಮಟೇಶ್ವರ ವಿಗ್ರಹದ ರಿಪೇರಿ

ಐದು ವರ್ಷಗಳ ಹಿಂದೆ ನಡೆದ ಗೋಮಟೇಶ್ವರ ಸಂಶೋಧನಾ ಸಮಿತಿಯವರು ವಿಗ್ರಹದ ಜೀರ್ಣೋದ್ಧಾರದ ಸಂಬಂಧವಾಗಿ, ಇನ್ನಿತರ ರಿಟ್ರೋಜನ ವೊರ್ಕೈಲ್ ಪ್ಲಾಟ್‌ಫಾರಂ ಒಂದನ್ನು ಕೊಳ್ಳಲು ನಿರ್ಧರಿಸಿದ್ದಾರೆ. ಅದು ಬಂದನಂತರ ವಿಗ್ರಹದ ಮುಖಭಾಗದಲ್ಲಿ ಕಂಡುಬಂದಿರುವ ಬಿರುಕುಗಳನ್ನು ಮುಚ್ಚಲಾಗುವುದು. ವಿಗ್ರಹದಲ್ಲಿ ಒಟ್ಟು ೩೫ ಸಣ್ಣ ಬಿರುಕುಗಳಿವೆ. ನೈಋತ್ಯ ಮಾರುತದ ದೆಸೆಯಿಂದ ಈ ಬಿರುಕುಗಳು ವಿಶೇಷವಾಗಿ ಎದೆ, ಭುಜ ಮತ್ತು ಹಿಂಭಾಗದಲ್ಲಿ ಕಾಣಿಸಿಕೊಂಡಿವೆ. ಇವೆಲ್ಲವನ್ನೂ ಸರಿಪಡಿಸಲಾಗುವುದು.

ಪಟಾಕಿ ಕಾರ್ಖಾನೆ ಬೆಂಕಿಯಲ್ಲಿ ೪ ಜನರ ಮರಣ

ಶಿವಕಾಶಿಯ ಬಳಿಯಿರುವ ಪಟಾಕಿ ಕಾರ್ಖಾನೆಯಲ್ಲಿ ನೆನ್ನೆ ಆಕಸ್ಮಿಕ ಬೆಂಕಿಯುಂಟಾಗಿ ೪ ಜನರು ಸತ್ತರು, ೬ ಮಂದಿಗೆ ಗಾಯವಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಸಾಬೂನು ತಯಾರಿಕೆಗಾರರ ಸಮ್ಮೇಳನ

ಈ ತಿಂಗಳು ೨೦ ನೇ ತಾ|| ಬೆಂಗಳೂರಿನಲ್ಲಿ ಭಾರತದ ಸಾಬೂನು ತಯಾರಿಕೆಗಾರರ ಸಂಘದ ೨೦ ನೇ ಸಮ್ಮೇಳನವು ನಡೆಯುವುದು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು. ವಿದೇಶೀ ಬಂಡವಾಳದಾರರ ಜೊತೆಗೆ ಸ್ಪರ್ಧೆಯಲ್ಲಿ ಸಣ್ಣ ಕಾರ್ಖಾನೆಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಒದಗಿರುವುದರಿಂದ ದೇಶೀಯ ಸಾಬೂನು ಕೈಗಾರಿಕೆಗೆ ರಕ್ಷಣೆ ಕೊಡುವಂತೆ ಕೇಂದ್ರ ಸರ್ಕಾರವನ್ನು ಕೇಳಲಾಗುವುದೆಂದು ಗೊತ್ತಾಗಿದೆ.

ಗಣಪತಿ ಮಂಗಳಾರತಿ

ರಾಜಧಾನಿಯ ಶಾರದಾ ವಿಲಾಸ ಪ್ರೌಢಶಾಲೆ ೨ ಕಮ್ಯುನಲ್ ಇನ್ಸ್ಟಿಟ್ಯೂಟಿನಲ್ಲಿ ಈ ಸಂಜೆ ೫|| ಘಂಟೆಗೆ ಗಣಪತಿ ಮಂಗಳಾರತಿಯನ್ನು ನೆರವೇರಿಸಲಾಗುವುದು. ಶ್ರೀಮತಿಗಳಾದ ಸುಶೀಲ ಮತ್ತು ಚಂದ್ರಕಾಂತರವರ ಸಂಗೀತವು ನಡೆಯುವುದು.

ಅಶ್ವತ್ಥ ಪ್ರೊಡಕ್ಷನ್ಸ್

ಮೋಷನ್ ಪಿಕ್ಚರ್ ಪ್ರೊಡ್ಯೂಸರ್ಸ್,
ಕೊ-ಆಪರೇಟಿವ್ ಸೊಸೈಟಿ ಕಟ್ಟಡ,
ಚಾಮರಾಜಪುರಂ, ಮೈಸೂರು.

ಬೇಕಾಗಿದ್ದಾರೆ

ನಾವು ತಯಾರಿಸಲಿರುವ ಕನ್ನಡ ಚಿತ್ರದಲ್ಲಿ ಅಭಿನಯಿಸಲು ನೂತನ ನಟನಟಿಯರು ತಮ್ಮ ಇತ್ತೀಚಿನ ಪೋಸ್ಟ್‌ಕಾರ್ಡ್ ಸೈಜಿನ ಫೋಟೋ ಕಳುಹಿಸಬೇಕು ಮತ್ತು ತಮ್ಮ ವಿದ್ಯೆ, ವಯಸ್ಸು, ಎತ್ತರ ಮುಂತಾದ ವಿವರಗಳನ್ನೂ ತಿಳಿಸಬೇಕು. ಜವಾಬಿಗಾಗಿ ಎರಡು ಆಣೆ ಸ್ಟಾಂಪ್ ಕಳುಹಿಸಬೇಕು. ಪ್ರೊಪ್ರೈಟರ್

Edited, Printed and Published by A. R. Nagarajan at Sadhvi Press, D. Subbiah Road, Mysore

ಉತ್ತಮವಾದ ಒಗಗೆ
808
ಸಾಬೂನು
ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

ರಜಿಸ್ಟ್ರೀ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿ 6 ಕಾಸು

ಎಲ್ಲ ವಿಧವಾದ
ಅಲೋಪತಿಕ್ ಔಷಧಿ
ಗಳು ಯುಕ್ತವಾದ ಬೆಲೆಗೆ
ದೊರೆಯುತ್ತವೆ
ರಘುಲಾಲ್
ಅಂಡ್ ಕಂಪೆನಿ.,
ಕೆಮಿಸ್ಟ್ಸ್,
207, ಸಯ್ಯಾಜಿರಾವ್ ರಸ್ತೆ,
ಮೈಸೂರು.

ಸಂಪುಟ : ೦೩] SADHVI : SUNDAY 19-9-1954 ಮೈಸೂರು : ಭಾನುವಾರ ೧೯-೯-೧೯೫೪ [ಸಂಚಿಕೆ : ೪೩

ಲಕ್ಷದ್ವೀಪದಲ್ಲಿ ಆಮಶಂಕೆಯಿಂದ ೨೦೦ ಮಂದಿ ಮರಣ

ಅಣಕು ಲೋಕ ಸಭೆಯ ಅಧಿವೇಶನ

ಮೈಸೂರು ೧೯

ಮಹಾರಾಜಾ ಕಾಲೇಜಿನ "ಲೋಕ ಸಭಾ ಹಾಲ್" ನಲ್ಲಿ ಮೊನ್ನೆ ದಿನ ವಿಶ್ವವಿದ್ಯಾಲಯ 'ಪಾರ್ಲಿಮೆಂಟಿನ' ಪ್ರಥಮ ಅಧಿವೇಶನವು ನಡೆಯಿತು. ವಿಶ್ವವಿದ್ಯಾಲಯದ "ರಿಪಬ್ಲಿಕ್ ಅಧ್ಯಕ್ಷ" ರಾದ ಶ್ರೀ ಗ ಸ ಹಾಲಪ್ಪನವರು ಪಾರ್ಲಿಮೆಂಟನ್ನು ಉದ್ದೇಶಿಸಿ ಭಾಷಣ ಮಾಡಿದರು. ಪ್ರೊ|| ಏಕಾಂತರಂರವರು "ಸ್ಪೀಕರ್" ಆಗಿದ್ದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಮ್ಮ ಸರ್ಕಾರದಿಂದ ಆಗುತ್ತಿರುವ ಅನುಕೂಲಗಳನ್ನು ವಿವರಿಸಿ, ಪಂಚ ವಾರ್ಷಿಕ ಯೋಜನೆ ವಿಷಯವನ್ನು ಪ್ರಸ್ತಾಪಿಸಿದರು.

ಅಧ್ಯಕ್ಷರ ಭಾಷಣಕ್ಕಾಗಿ ಅವರನ್ನು ವಂದಿಸುವ ನಿರ್ಣಯವನ್ನು 'ಕಾಂಗ್ರೆಸ್' ಪಕ್ಷದ ಶ್ರೀ ಸಿದ್ಧಪ್ಪನವರು ಮಂಡಿಸಿದರು. ಇದು ಅಂಗೀಕೃತವಾಯಿತು.

ಅಧ್ಯಕ್ಷರು ಭಾಷಣಾನಂತರ ಮಾತುಕತೆರಳದೆ ಸಭೆಯ ಶ್ಲೀ ಇದ್ದ ಬಗ್ಗೆ "ಪ್ರಜಾ ಸಮಾಜವಾದಿ ಪಕ್ಷದ" ಸದಸ್ಯರಾದ ಶ್ರೀ ಗವಿ ಸಿದ್ಧಪ್ಪನವರು ಕ್ರಿಯಾ ಲೋಪವನ್ನೆತ್ತಿ, ಭಾಷಣವಾದನಂತರ ಅಧ್ಯಕ್ಷರು ಸಭೆಯಿಂದ ತೆರಳಬೇಕೆಂಬ ಪದ್ಧತಿಯಿರುವುದಾಗಿಯೂ, ಅವರ ಎದುರಿನಲ್ಲಿ ಯಾವ ನಿರ್ಣಯವನ್ನೂ ಚರ್ಚಿಸಬಾರದೆಂದೂ ತಿಳಿಸಿದರು. ಕ್ರಿಯಾ ಲೋಪವನ್ನು ಸ್ಪೀಕರರು ಎತ್ತಿಹಿಡಿದು 'ಅಧ್ಯಕ್ಷರನ್ನು' ಪ್ರಾರ್ಥಿಸಲಾಗಿ ಅವರು ಸಭೆಯನ್ನು ಬಿಟ್ಟು ತೆರಳಿದ ಸ್ವಾರಸ್ಯವಾದ ಪ್ರಸಂಗವೂ ನಡೆಯಿತು.

ವಿಶ್ವವಿದ್ಯಾಲಯದ ಸುಧಾರಣೆ ಪ ಸೂಚಿಯು ೬೪-೧೪ ಓಟುಗಳಿಂದ ಅಂಗೀಕೃತವಾಯಿತು. ಪ್ರಶ್ನೋತ್ತರ ಕಾಲವೂ ಬಹಳ ಸ್ವಾರಸ್ಯವಾಗಿತ್ತು. ಸಭಾತ್ಯಾಗವೂ ಆಯಿತು. ಆರೋಗ್ಯ ಮಂತ್ರಿ ಶ್ರೀಮತಿ ಕಮಲಾರವರು ಬಹಳ ಚೆನ್ನಾಗಿ ಉತ್ತರವಿತ್ತರು. ಉಳಿದ ಮಸೂದೆಗಳನ್ನು ಮುಂದಿನ ಅಧಿವೇಶನಕ್ಕೆ ಮುಂದೂಡಲಾಯಿತು.

ಈ ಅಣಕು ಸಭೆಗೆ ಮಾವಲಂಕರ್, ಹುಕ್ಕುಂಸಿಂಗ್, ಎ ಜಿ ರಾಮಚಂದ್ರರಾವ್ ಮುಂತಾದವರಿಂದ ಶುಭಾಶಯಗಳು ಬಂದಿದ್ದುವು.

ಡಯೂವಿಗೆ ಕಾಲ್ನಡಿಗೆಯಲ್ಲಿ ಸತ್ಯಾಗ್ರಹಿಗಳ ತಂಡ

ಡಯೂವನ್ನು ಪೋರ್ಚುಗೀಸರ ಆಳ್ವಿಕೆಯಿಂದ ವಿಮೋಚನೆಗೊಳಿಸುವುದಕ್ಕಾಗಿ ೪೦ ಜನರ ತಂಡವೊಂದು ರಾಜಕೋಟೆಯಿಂದ ಜುನಾಗಡಕ್ಕೆ ಕಾಲ್ನಡಿಗೆಯಲ್ಲಿ ತೆರಳಿವೆ. ೨೫ ನೇ ತಾ|| ವಿಮೋಚನಾ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ.

ಎ ಜಿ. ಬಂಡೀಗೌಡರು ಪ್ರದೇಶ ಕಾಂಗ್ರೆಸ್ಸಿನ ವ್ಯವಸ್ಥಾ ಕಾರ್ಯದರ್ಶಿ

ಮಂಡ್ಯದ ಸಕ್ಕರೆ ಕಂಪೆನಿಯ ಮಾಜಿ ಅಧ್ಯಕ್ಷರಾದ ಶ್ರೀ ಎ ಜಿ. ಬಂಡೀಗೌಡರನ್ನು ಪ್ರದೇಶ ಕಾಂಗ್ರೆಸ್ಸಿನ ವ್ಯವಸ್ಥಾ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಮಹಾರಾಜರುಗಳ ಭಾವಚಿತ್ರ ಅನಾವರಣ

ಮೈಸೂರು ೧೯

ರಾಜಧಾನಿಯ ಕೃಷ್ಣರಾಜೇಂದ್ರ ಪಠಶಾಲ ಸಂಘದವರು ಮೊನ್ನೆ ಸಂಜೆ ಸಂಘದ ಭವನದಲ್ಲಿ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರ್, ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ಶ್ರೀ ಜಯಚಾಮರಾಜ ಒಡೆಯರ ಭಾವಚಿತ್ರಗಳ ಅನಾವರಣ ಮಹೋತ್ಸವವನ್ನು ಏರ್ಪಡಿಸಿದ್ದರು. ದರ್ಬಾರ್ ಬಕ್ಷಿಯವರಾದ ಶ್ರೀ ಹೆಚ್. ಎಲ್. ದೇವರಾಜೆ ಅರಸಿನವರು ಅಧ್ಯಕ್ಷತೆ ವಹಿಸಿದ್ದರು.

ಸಂಘದ ಅಧ್ಯಕ್ಷರಾದ ಶ್ರೀ ವೈ ಚ ದ್ರಶೇಖರಯ್ಯನವರು ಸ್ವಾಗತ ಭಾಷಣ ಮಾಡಿದನಂತರ ಶ್ರೀ ಟಿ ಎಸ್ ಸುಬ್ಬರಾವ್‌ರು ಸಂಘದ ಆಶಯಗಳ ವಿಷಯವಾಗಿ ಕಲವು ವಿಷಯಗಳನ್ನು ವಿವರಿಸಿದರು.

ಅಧ್ಯಕ್ಷರು ಭಾಷಣ ಮಾಡಿ ಮೈಸೂರಿನ ಮಹಾರಾಜರುಗಳು ಅಂತ ಪ್ರಗತಿಪರರೆಂದೂ, ಮೈಸೂರು ಸುಂದರ ನಾಡೆಂದು ಜಗತ್ಪ್ರಸಿದ್ಧವಾಗಿರುವುದಕ್ಕೆ ಅವರ ಸತ್ಪ್ರೋತ್ಸಾಹವೇ ಕಾರಣವೆಂದೂ ತಿಳಿಸಿದರು.

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯಾದ ನಂತರ ಸಮಾರಂಭವು ಮುಕ್ತಾಯವಾಯಿತು.

ಎಂ. ಆರ್ ಸುಂದರರಾಯರ ನಿಧನ

ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಂ ಆರ್, ಸುಂದರರಾಯರು ಕಳೆದ ೧೫ ರ ವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೪ ವರ್ಷ ವಯಸ್ಸಾಗಿತ್ತು. ಶ್ರೀಯುತರು ನಿವೃತ್ತ ಚೀಫ್ ಕನ್ಸರ್ವೇಟರ್ ಆಫ್ ಫಾರೆಸ್ಟ್‌ರಾದ ಶ್ರೀ ಎಂ. ಜಿ ರಾಮರಾಯರ ಸೋದರರು. ಚಿಕ್ಕಮಗಳೂರ ಜಿಲ್ಲಾಧಿಕಾರಿಗಳಾಗಿರುವ ಶ್ರೀ ಎಂ ಎಸ್ ಶಂಕರರಾಯರು ದಿವಂಗತರ ಪುತ್ರರು.

ಸಾಮಾಜಿಕ ವಿಜ್ಞಾನ ಗೋಷ್ಠಿಯ ಆರಂಭ ಭಾಷಣ

ರಾಜಧಾನಿಯ ಮಹಾರಾಜಾ ಕಾಲೇಜಿನ ಸಾಮಾಜಿಕ ವಿಜ್ಞಾನ ಗೋಷ್ಠಿಯ ಆರಂಭ ಭಾಷಣವನ್ನು ನಾಳೆ ಸಂಜೆ ೫|| ಗಂಟೆಗೆ ಕೇಂದ್ರ ಆಹಾರ ಸಂಶೋಧನಾಲಯದ ಡಾ|| ವಿ ಸುಬ್ರಹ್ಮಣ್ಯಂರವರು ಮಾಡುವರು. ಪ್ರಿನ್ಸಿಪಾಲರಾದ ಡಾ|| ಟಿ ಎ. ಪುರುಷೋತ್ತಮ್‌ರವರು ಅಧ್ಯಕ್ಷತೆ ವಹಿಸುವರು.

ಅಕ್ರಮವಾಗಿ ಸಾಗುತ್ತಿದ್ದ ೧೨೦ ತೊಲ ಗಾಂಜಾ ಪತ್ತೆ ಮತ್ತು ಶಿಕ್ಷೆ

ಮೈಸೂರು ನಗರದ ಅಬ್ಕಾರಿ ಇನ್ಸ್‌ಪೆಕ್ಟರರು ಸಿಬ್ಬಂದಿ ಸಮೇತ ಕಳೆದ ೧೬ ನೇ ತಾ| ಮಲಬಾರಿನ ಕಡೆಗೆ ಅಕ್ರಮವಾಗಿ ಸಾಗುತ್ತಿದ್ದ ೧೨೦ ತೊಲ ಗಾಂಜಾವನ್ನು ಪತ್ತೆ ಹಚ್ಚಿ, ಕೆ ಅಬ್ದುಲ್ಲಾ ಎಂಬುವನನ್ನು ಬಂಧಿಸಿ ಅವನ ಮೇಲೆ ಮೊಕದ್ದಮೆ ಹೂಡಲಾಗಿ, ಅಪಾದಿತನಿಗೆ ಒಂದು ತಿಂಗಳ ಸಜಾ ಮತ್ತು ೧೦೦ ರೂ ದಂಡ, ದಂಡ ಕೊಡಲು ತಪ್ಪಿದರೆ ಪುನಃ ೧೫ ದಿನಗಳ ಸಜಾ ವಿಧಿಸಲಾಯಿತು.

ಸುಂಕ ಕೊಡದಿರುವ ೩,೦೦೦ ರೂ. ಬೆಲೆ ವಸ್ತುಗಳ ವಶ

ಮೈಸೂರು ೧೯

ಕೇಂದ್ರ ಸುಂಕದ ಇಲಾಖೆಯ ಮೈಸೂರು ಸರ್ಕಲಿನ ಸೂಪರಿಂಟೆಂಡೆಂಟರಾದ ಶ್ರೀ ಸಿ ಜೆ ಗಾರ್ಸಿಯಲ್ಸ್‌ರವರ, ಡೆಪ್ಯುಟಿ ಸೂಪರಿಂಟೆಂಡೆಂಟರಾದ ಶ್ರೀ ಎಂ ನಾರಾಯಣ ಮತ್ತು ಶಿವಾ ರೇಂಜ್ ಅಧಿಕಾರಿಗಳೊಡನೆ ನಗರದ ಹಲವು ಅಂಗಡಿಗಳಿಗೆ ತೆರಳಿ ಸುಂಕ ಕೊಡದೆ ಅಮದು ಮಾಡಿಕೊಂಡಿದ್ದ ೩,೦೦೦ ರೂ ಬೆಲೆಯ ಹಲವು ವಿದೇಶೀ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. ಅವುಗಳಿಗೆ ಸಾವಿರ ರೂ ಸುಂಕ ಬೀಳುವುದೆಂದು ಹೇಳಲಾಗಿದೆ. ತನಿಖೆ ನಡೆಯುತ್ತಿದೆ.

ಬಾಕಿ ವಸೂಲಿಗಾಗಿ ಪ್ರಮಾಣ ಮಾಡಲು ಹಿಂಜರಿದ ಪ್ರಸಂಗ

ರಾಜಧಾನಿಯ ಗನೇಶ್ವರಿ ಚೌಕದ ಬಳಿ ಇರುವ ಮುಲ್ತಾನಿ ಸಿಧಿಗಳ ಧರ್ಮ ಶಾಲೆಯಲ್ಲಿ ಗುರು ನಾನಕ್‌ರವರ ಧರ್ಮ ಗ್ರಂಥಗಳನ್ನು ಮುಟ್ಟಿ ಪ್ರಮಾಣ ಮಾಡಲು ಒಬ್ಬ ವಾದಿಯು ಗೊತ್ತಾದ ದಿನ ಅಲ್ಲಿಗೆ ಬರದೆಹೋದ ಪ್ರಸಂಗವು ನೆನ್ನೆ ನಡೆಯಿತು. ಶ್ರೀ ಡಿ ಎಚ್ ನಾರಾಯಣ ಶೆಟ್ಟಿ ಎಂಬ ಜವಳಿ ವರ್ತಕರು ಶ್ರೀ ತೀರ್ಥದಾಸ್ ಭಗವಾನ್‌ದಾಸ್ ಎಂಬ ವ್ಯಾಪಾರಿಗೆ ಕೊಡಬೇಕಾಗಿದ್ದ ೨೦೦ ರೂ ಗಳಲ್ಲಿ ೧೩೦ ೧೨-೦ ರೂ ಅನ್ನು ತೀರಿಸಿದ್ದು ನಿಜವಲ್ಲವೆಂದೂ, ತಮಗೆ ಪೂರ್ತಾ ಹಣವು ಸಂದಾಯವಾಗಬೇಕೆಂದೂ ಶ್ರೀ ಶೆಟ್ಟರ ಮೇಲೆ ದ್ಯಾಂಕರು ಹೂಡಿದ್ದ ದಾವೆಯಲ್ಲಿ ಪ್ರತಿವಾದಿಯು ಕೋರ್ಟಿನಲ್ಲಿ ಹೇಳಿಕೆ ಕೊಟ್ಟು, ತಮ್ಮ ಬಳಿ ಹಣ ಪಾವತಿ ರಸೀತಿ ಇಲ್ಲದುದರಿಂದ ವಾದಿಯು ಮುಲ್ತಾನಿ ಸಿಂಧಿ ಧರ್ಮ ಶಾಲೆಯಲ್ಲಿ ಪ್ರಮಾಣ ಮಾಡಿದರೆ ತಾನು ಪೂರ್ತಾ ಹಣ ಕೊಡುವುದಾಗಿ ಹೇಳಿದ್ದರ ಮೇಲೆ ಮೇಲ್ಕಂಡಂತೆ ಆಜ್ಞೆ ಮಾಡಲಾಗಿತ್ತೆಂದು ಗೊತ್ತಾಗಿದೆ.

ನೆಹರೂ-ಹೊಚಿಮಿನ್ ಭೇಟಿ

ಬರುವ ತಿಂಗಳ ಚೀಣಾಕ್ಕೆ ನೆಹರೂರವರು ಹೋಗಲಿರ ಪರಷ್ಟೆ. ಇದೇ ಸಂಬಂಧದಲ್ಲಿ ಅವರು ಇಂಡೋಚೀನಾದ ವಿಯೆಟ್ಮಿನ್ನರ ನಾಯಕರಾದ ಡಾ|| ಹೊಚಿಮಿನ್‌ರವರನ್ನು ಹಾನಾಯ್‌ನಲ್ಲಿ ಸಂಧಿಸಿ ಸಂಭಾಷಣೆ ನಡೆಸುವರೆಂದು ಹೇಳಲಾಗಿದೆ.

ಕೆನ್ಯದಲ್ಲಿ ಜೈಲಿನ ಮೇಲೆ ಧಾಳಿ ಮಾಡಿ ೨೦೦ ಖೈದಿಗಳ ಬಿಡುಗಡೆ

ಕೆನ್ಯದ ರಾಜಧಾನಿ ನೈರೋಬಿ ಬಳಿ ಲುಖಿನಾ ಜೈಲಿಗೆ ಮೊನ್ನೆ ರಾತ್ರಿ ೪೦ ಮಂದಿ ಭಯೋತ್ಪಾದಕರು ಹಠಾತ್ತನೆ ನುಗ್ಗಿ ೨೩೩ ಆಫ್ರಿಕ ಖೈದಿಗಳನ್ನು ಖುಲಾಸೆ ಮಾಡಿರುವುದಾಗಿ ವರದಿಯಾಗಿದೆ. ಗಢವನ್ನು ನೀಳವಾಗಿ ಬೆಳೆಸಿಕೊಂಡ ಅವರು ಬಹು ದಿನಗಳಿಂದಲೂ ಗುಪ್ತವಾಗಿದ್ದು, ಮೌಮೌ ಗುಂಪಿನ ದಿಮಿ ಕೆಮಾತಿ ಎಂಬುವರ ನೇತೃತ್ವದಲ್ಲಿ ಧಾಳಿ ನಡೆಸಿದುದಾಗಿ ಹೇಳಲಾಗಿದೆ. ೧,೦೦೦ ಸೈನಿಕರು ಮತ್ತು ಪೊಲೀಸರು ಖೈದಿಗಳನ್ನು ಹಿಡಿಯಲು ಶಕ್ತಿಮೀರಿ ಪ್ರಯತ್ನಿಸಿದರೂ ೧೯ ಮಂದಿ ಸಿಕ್ಕಿರುತ್ತಾರೆ.

ಲಕ್ಷದ್ವೀಪದಲ್ಲಿ ಆಮಶಂಕೆ ಜಾಡ್ಯದಿಂದ ೨೦೦ ಜನರ ಮರಣ

ಲಕ್ಷದ್ವೀಪಗಳ ಪೈಕಿ ಒಂದಾದ ಅಗಾತ್ ಎಂಬುದರಲ್ಲಿ ಆಮಶಂಕೆ ಉಪದ್ರವವು ತಲೆದೋರಿ ೨೦೦ ಜನರು ಮೃತಪಟ್ಟಿರುವರೆಂದು ವರದಿಯಾಗಿದೆ. ಜಾಡ್ಯವು ಇನ್ನೂ ತಪ್ಪಿಲ್ಲವೆಂದೂ, ೧,೦೮೦ ಮಂದಿಗೆ ಹಿಡಿದಿದ್ದೆಂದೂ ಹೇಳಲಾಗಿದೆ. ಅವರಿಗೆ ವೈದ್ಯ ಸೌಕರ್ಯವನ್ನು ಒದಗಿಸುವಂತೆ ಪಾರ್ಲಿಮೆಂಟಿನ ಮಲಬಾರು ಸದಸ್ಯರಿಗೆ ತಂತಿ ಕಳುಹಲಾಗಿದೆ.

ಮಗಳನ್ನು ಕೆಡಿಸಿದ ತಂದೆಯನ್ನು ಕೊಂದ ಮಗನಿಗೆ ಶಿಕ್ಷೆ

ನಾಗಪಟ್ಟಣದ ಬಳಿ ಪೊನ್ನೇರಿ ಎಂಬ ಹಳ್ಳಿಯಲ್ಲಿ ಕಳೆದ ಮೇ ೧೧ ನೇ ತಾ|| ಮುರುಗಯ್ಯವೇಲರ್ ಎಂಬ ೨೦ ವರ್ಷದ ಯುವಕನು ತನ್ನ ತಂದೆ ಮರುತಮುತ್ತು ವೇಲರನನ್ನು ಕೊಂದ ಸಂಬಂಧವಾಗಿ ಯುವಕನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿದೆ. ೨ ವರ್ಷಗಳ ಹಿಂದೆ ಮೃತನು ತನ್ನ ಪತ್ನಿ ಮತ್ತು ಪುತ್ರನೊಡನೆ ಜಗಳವಾಡಿ, ತನ್ನ ಮಗಳು ಜಗದಾಂಬಾಳ್ ಎಂಬುವಳೊಡನೆ ಪ್ರತ್ಯೇಕವಾಗಿದ್ದು ಆಕೆಯೊಡನೆ ಅಕ್ರಮ ಸಂಬಂಧ ಬೆಳೆಸಿದನೆಂದೂ, ಆ ಸಂಪರ್ಕದಿಂದ ಒಂದು ಮಗುವು ಜನಿಸಿ ಅದು ಸತ್ತುಹೋಗಲು, ತಂದೆಯು ಮಗಳನ್ನು ಓಡಿಸಿದನೆಂದೂ ಹೇಳಲಾಗಿದೆ. ಆಕೆಯು ತನ್ನ ತಾಯಿ ಬಳಿ ಆಶ್ರಯ ಪಡೆದಾಗ, ತಂದೆಯು ಅಲ್ಲಿಗೆ ಬಂದು ಆಕೆಯನ್ನು ವಾಪಸು ತನ್ನೊಡನೆ ಬರಬೇಕೆಂದು ಬಲಾತ್ಕರಿಸಿದನೆಂದೂ, ಇದನ್ನು ಕಂಡು ಮಗನಿಗೆ ರೋಷವುಂಟಾಗಿ ತಂದೆ ಎದೆ ಮೇಲೆ ಕುಳಿತು ಕಬ್ಬಿಣದ ಗುದ್ದಲಿ ಮತ್ತು ಒನಕೆಯಿಂದ ಹೊಡೆದು ಕೊಂದುಹಾಕಿದನೆಂದೂ ಹೇಳಲಾಗಿದೆ. ನ್ಯಾಯಾಧೀಶರು ಅವನಿಗೆ ಶಿಕ್ಷೆ ವಿಧಿಸಿ, ಕೊಲೆ ಒಗ್ಗೆ ನಡಿಸಿದ್ದ ಅಪ್ರಕೃತ ಸ್ಥಿತಿಯನ್ನು ಪರಿಶೀಲಿಸಿ, ಅವನಿಗೆ ವಿಧಿಸಿರುವ ಶಿಕ್ಷೆಯನ್ನು ಕಡಿಮೆ ಮಾಡಿ, ಯುವಕನನ್ನು ಬಾಲಕರ ಬಂಧನ ಶಾಲೆಗೆ ಕಳುಹಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ.

ವಿ ಶ ಟೆ ಕ್ಸ್ ಸ ಮಿ ತಿ

ರಾಜಧಾನಿಯ ಸರಸ್ವತಿಪುರದ ಶಿಕ್ಷಣಶಾಲೆಯಲ್ಲಿ ಅಲ್ಲಿನ ನಿವಾಸಿಗಳು ಆ ದಿನ ಸಂಜೆ ಸಭೆ ಸೇರಿ ಬಡಾವಣೆಯಲ್ಲಿ ಅಭಿವೃದ್ಧಿ ಸೌಕರ್ಯಗಳ ಸಲುವಾಗಿ ವಿಶೇಷ ಟೆಕ್ಸ್ ಸಮಿತಿಯೊಂದನ್ನು ಸ್ಥಾಪಿಸಿದರು. ಶ್ರೀ ಎಸ್. ಅಣ್ಣಯ್ಯಾಚಾರ್ಯರು ಅಧ್ಯಕ್ಷರಾಗಿಯೂ, ಶ್ರೀ ಎಸ್ ಎಲ್ ಲಕ್ಷ್ಮೀಗೌಡರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಗೋಪಾಲರಾಜೇ ಅರಸು, ಮಹಮದ್ ಹುಸೇನ್, ಡಿ ಚಂದ್ರಶೇಖರ್ ಹೂಢವರಾಯರು ಸಮಿತಿ ಸದಸ್ಯರಾಗಿಯೂ ಆರಿಸಲ್ಪಟ್ಟರು.

★ ಗ್ರಾಮಾಂತರದಲ್ಲಿ ಕೈಕಸುಬನ್ನು, ಗಾಣದ ಎಣ್ಣೆಯನ್ನು ಜನಪ್ರಿಯ ಮಾಡುವುದಕ್ಕಾಗಿ ೧೧,೦೦೦ ಪ್ರಜಾ ಸಂಘಗಳ ಪಾತ್ರವು ಇರುವ ಗ್ರಾಮಾಂತರ ಪ್ರದೇಶದಲ್ಲಿ ಹಳ್ಳಿಗಳು, ಜಿಲ್ಲೆಗಳು ಮತ್ತು ಎಣ್ಣೆ ಯಂತ್ರಗಳ ಸ್ಥಾಪನೆಯನ್ನು ಶೋಧಿಸಲು ಸರ್ಕಾರವನ್ನು ಒತ್ತಾಯಿಸುವ ನಿರ್ಧಾರವನ್ನು ಸಂಸ್ಥಾನದ ಪಾಠಿಸುತ್ತಾ, ಗ್ರಾಮ ಕೈಗಾರಿಕಾ ಸಮಿತಿಯವರು ಚರ್ಚಿಸುತ್ತಾರೆ. ಸಮಿತಿಯವರ ಶಿಫಾರಸುಗಳನ್ನು ಮೋಟಾರು ಕಂಪನಿಯ ಅಭಿವೃದ್ಧಿ ಮಂಡಳಿ ಒಪ್ಪಿಸಿರುತ್ತಾರೆಂದು ಹೇಳಲಾಗಿದೆ.

ವಾರ ಭವಿಷ್ಯ

ತಾ|| ೧೯-೯-೫೪ ರಿಂದ ೨೫-೯-೫೪ರ ವರೆಗೆ

ಮೇಷ —ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತುಂಬಾ ಚೆನ್ನಾಗಿದೆ, ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಮತ್ತು ಪ್ರಗತಿ ಕೈಗೊಂಡ ಕಾರ್ಯ ಸುಗಮ. ಪ್ರವಾಸ ಸುಖಕರ ಅಕಸ್ಮಾತ ಧನ ಲಾಭದ ತಾ|| ೨೦ ೨೧ ರ ನಂತರ ಪ್ರವಾಸ, ಮಹತ್ವದ ಪತ್ರವ್ಯವಹಾರ

ವೃಷಭ —ಆರೋಗ್ಯ ನೆಟ್ಟಗೆ ಇಲ್ಲ ಅನಾರೋಗ್ಯಕ್ಕೆ ಕ್ಲೇಶ ಆರ್ಥಿಕ, ಮಾನಸಿಕ ಸ್ಥಿತಿ ನೆಟ್ಟಗಿರದು ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ. ಪ್ರವಾಸದಲ್ಲಿ ವಿಘ್ನ ಕೈಗೊಂಡ ಕಾರ್ಯಕ್ಕೆ ಅಡ್ಡಿ. ವಾಹನ ಮತ್ತು ಪ್ರಾಣಿಗಳಿಂದ ಅಪಘಾತ ಭಯ ಹಣದ ಕೊರತೆ ತಾ|| ೨೨, ೨೩ ಅಮೂಲ್ಯ ವಸ್ತು ಕಳೆದುಹೋಗುವ ಸಂಭವ.

ಮಿಥುನ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ನೆಟ್ಟಗಿರದು ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಅಪಮಾನ ಮತ್ತು ಭಯ. ಕೈಗೊಂಡ ಕಾರ್ಯ ಸುಗಮವಿಲ್ಲ ಪ್ರವಾಸ ವಿಘ್ನಕಾರಕ. ಹಣದ ಕೊರತೆ ವಿಶೇಷ ತಾ|| ೨೩, ೨೪ ಆರ್ಥಿಕ ಕ್ಲೇಶ ನಿವಾರಣೆ, ಹಳೇ ಮಿತ್ರರ ಸಹಾಯ

ಕರ್ಕ —ಆರೋಗ್ಯ ನೆಟ್ಟಗೆ ಆರ್ಥಿಕ, ಮಾನಸಿಕ ಸ್ಥಿತಿ ಸರಿಯಿಲ್ಲ ವ್ಯಾಪಾರ, ಉದ್ಯೋಗ ನೌಕರಿಯಲ್ಲಿ ಹಾನಿ. ಪ್ರವಾಸದಲ್ಲಿ ವಿಘ್ನ ಕೈಗೊಂಡ ಕಾರ್ಯದಲ್ಲಿ ತೊಂದರೆ ತಾ|| ೧೯ ೨೦ ಅತಿಥಿ ಅಭ್ಯಾಗತರ ಆಗಮನ, ಖರ್ಚು ಹೆಚ್ಚು

ಸಿಂಹ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ನೆಟ್ಟಗೆ. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಸಾಮಾಜಿಕ ಕಾರ್ಯ ಸುಗಮ ಪ್ರವಾಸ ಸುಖಕರ, ಗೃಹಮಾನ [illegible]. ತಾ|| ೨೧, ೨೨, ೨೩ ಆಪ್ತರ ಆಗಮನದಿಂದ ಖರ್ಚು

ಕನ್ಯಾ — ಆರೋಗ್ಯ ನೆಟ್ಟಗೆ ಇಲ್ಲ ಅನಾರೋಗ್ಯಕ್ಕೆ ಕ್ಲೇಶ ಖರ್ಚು ಸಂಭವಿಸುವುದು ಮಾನಸಿಕ ಸ್ಥಿತಿ ಸರಿಯಿರದು ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ ಪ್ರವಾಸ ವಿಘ್ನಕಾರಕ ಚತುಷ್ಪಾದ ಪ್ರಾಣಿಗಳಿಂದಲೂ, ವಾಹನಗಳಿಂದಲೂ ನಾಶ ತಾ|| ೨೧, ೨೨, ೨೩ ಅವಮಾನಕರ ಪ್ರಸಂಗ

ತುಲಾ - ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ನೆಟ್ಟಗೆ ವ್ಯಾಪಾರ, ಉದ್ಯೋಗ ನೌಕರಿಯಲ್ಲಿ ಲಾಭ ಮತ್ತು ಪ್ರಗತಿ ಕೈಗೊಂಡ ಕಾರ್ಯ ನಿರ್ವಿಘ್ನಕರ ಪ್ರವಾಸದಲ್ಲಿ ಸುಖ. ಕೋರ್ಟು ಕಾರ್ಯದಲ್ಲಿ ಯಶ ತಾ|| ೧೯, ೨೦ ಶುಭ ವಾರ್ತೆ, ಮಹತ್ವದ ಸಮಾಚಾರ

ವೃಶ್ಚಿಕ - ಆರೋಗ್ಯ ಕ್ಲೇಶಕರ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ. ಧಾರ್ಮಿಕ ಕಾರ್ಯ ವಿಘ್ನಕಾರಕ ಹಣಕಾಸಿನ ತೊಂದರೆ, ತಾ|| ೧೯, ೨೦ ಹಣ ಮತ್ತು ಅಮೂಲ್ಯ ವಸ್ತುವಿನ ಕಳುವು.

ಧನು — ಆರೋಗ್ಯ, ಆರ್ಥಿಕ ಮಾನಸಿಕ ಸ್ಥಿತಿ ನೆಟ್ಟಗೆ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ. ಕೈಗೊಂಡ ಕಾರ್ಯ ವಿಘ್ನ. ಪ್ರವಾಸದಲ್ಲಿ ಅಡ್ಡಿ ಮಕ್ಕಳಿಗೆ ತೀವ್ರ ಬಾಯಿಲೆ ತಾ|| ೨೧, ೨೨, ೨೩ ಆಪ್ತರಿಂದ ತೊಂದರೆ, ಪ್ರಿಯಜನ ವಿಯೋಗ.

ಮಕರ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ನೆಟ್ಟಗಿರದು. ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಹಾನಿ ಪ್ರವಾಸ ವಿಘ್ನಕಾರಕ ತಾ||೨೦, ೨೧ ತಲೆ, ಕಾಲುಗಳಿಗೆ ಆಘಾತ, ಅಶುಭ ವಾರ್ತೆ.

ಕುಂಭ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ತುಂಬಾ ಚೆನ್ನಾಗಿದೆ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಲಾಭ ಧಾರ್ಮಿಕ ಕಾರ್ಯದಲ್ಲಿ ಯಶ. ಪ್ರವಾಸ ಸುಖಕರ. ತಾ|| ೨೧, ೨೨, ೨೩ ಅತಿಥಿಗಳ ಆಗಮನ, ಖರ್ಚು

ಮೀನ — ಆರೋಗ್ಯ, ಆರ್ಥಿಕ, ಮಾನಸಿಕ ಸ್ಥಿತಿ ನೆಟ್ಟಗೆ ವ್ಯಾಪಾರ, ಉದ್ಯೋಗ, ನೌಕರಿಯಲ್ಲಿ ಪ್ರಗತಿ ಕೈಗೊಂಡ ಕಾರ್ಯ ಸುಗಮ ಪ್ರವಾಸ ಸುಖಕರ ವ್ಯಾಪಾರದಲ್ಲಿ ಪ್ರಗತಿ. ತಾ|| ೨೧, ೨೨, ೨೩ ಶುಭ ವಾರ್ತೆ, ಮಹತ್ವದ ಪತ್ರ, ಪ್ರಿಯ ಜನ ಸಹವಾಸ.

ವಿಶೇಷ ವಿವಾಹದ ಮಸೂದೆಗೆ ಲೋಕ ಸಭೆಯ ಅಂಗೀಕಾರ

ವಿಶೇಷ ವಿವಾಹದ ಮಸೂದೆಯನ್ನು ಲೋಕ ಸಭೆಯು ಒಪ್ಪಿರುತ್ತದೆ. ಸಭೆಯು ಮಾಡಿರುವ ಕೆಲವು ಬದಲಾವಣೆಗಳನ್ನು ರಾಜ್ಯ ಸಭೆಯ ಒಪ್ಪಿಗೆಗಾಗಿ ಕಳುಹಲಾಗುವುದು. ಚರ್ಚೆ ಕಾಲದಲ್ಲಿ, ಡೆಪ್ಯೂಟಿ ಸ್ಪೀಕರರಾದ ಅನಂತಶಯನಂ ಅಯ್ಯಂಗಾರ್‌ರು ಮಾತನಾಡಿ, ಮಸೂದೆಯ ಕೆಲವು ನಿಬಂಧನೆಗಳು ಜಾರಿಗೆ ಬಂದರೆ ದೇಶದಲ್ಲಿ ಅವಿವಾಹಿತ ತರುಣತರುಣಿಯರ ಸ್ವಾತಂತ್ರ್ಯಕ್ಕೂ ಹಾಗೂ ಮಾತಾಪಿತೃಗಳಿಲ್ಲದ ಮಕ್ಕಳ ಹಿತಕ್ಕೂ ಧಕ್ಕೆ ಬರುವ ಪರಿಸ್ಥಿತಿ ಒದಗುವುದೆಂದು ಎಚ್ಚರಿಕೆ ಕೊಟ್ಟರು. ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಲಗುರೈಶಾಸ್ತ್ರಿ, ಮಣಿಬೇನ್ ಪಟೇಲ್, ಅನಂತಶಯನಂ ಅಯ್ಯಂಗಾರ್, ಜಯಶ್ರೀ ರಾಯಜಿಯವರು ವಿವಾಹ ವಿಚ್ಛೇದನದ ನಿಬಂಧನೆಯನ್ನು ತೀವ್ರವಾಗಿ ವಿರೋಧಿಸಿದರು. ಪತಿಪತ್ನಿಯರು ಪ್ರತ್ಯೇಕವಾಗುವುದು ಭಾರತೀಯ ಸಂಸ್ಕೃತಿಗೆ ವ್ಯತಿರೇಕವೆಂದೂ, ಒಂದು ಕಡೆ ಏಕಪತ್ನೀತ್ವವನ್ನು ಜಾರಿಗೆ ತರುತ್ತಾ, ಮತ್ತೊಂದು ಕಡೆ ಬಹುಪತ್ನೀತ್ವಕ್ಕೆ ಅವಕಾಶ ಕಲ್ಪಿಸಲಾಗುತ್ತಿರುವುದೆಂದೂ ತಿಳಿಸಿದರು "ಈ ದಿನ ನನ್ನ ಹೆಂಡತಿಯೊಡನೆ ವಿಚ್ಛೇದನ ಮಾಡಿಕೊಂಡು ನಾನು ನಾಳೆ ಬೇರೆ ಬೇರೆ ವಿವಾಹವಾಗಬಹುದು. ಇದು ಬಹುಪತ್ನೀತ್ವವಲ್ಲವೇ" ಎಂದು ಅವರು ಪ್ರಶ್ನಿಸಿದರು ಅಲಗುರೈಶಾಸ್ತ್ರಿಯವರು ಮಾತನಾಡಿ ವಿಶೇಷ ವಿವಾಹಗಳನ್ನು ಚಟ್ಟಿ ಹಳೆಗೆ ದಾಂಪತ್ಯಕ್ಕೆ ಹೋಲಿಸಿದರು

ಭಾರತದ ಕೈಗಾರಿಕಾಭಿವೃದ್ಧಿಗೆ ೮ ಲಕ್ಷ ಕೋಟಿ ರೂ. ಗಳು ಬೇಕು

ಭಾರತದಲ್ಲಿ ಕೈಗಾರಿಕಾಭಿವೃದ್ಧಿಗಾಗಿ ೮ ಲಕ್ಷ ಕೋಟಿ ರೂ. ಗಳು ಬಂಡವಾಳ ಬೇಕೆಂದು ಟಿ. ಡಿ. ಬಿರ್ಲಾ ರವರು ನ್ಯೂಯಾರ್ಕಿನಲ್ಲಿ ತಿಳಿಸಿರುತ್ತಾರೆ. ಭಾರತದಲ್ಲಿರುವ ಬಡತನವನ್ನು ನೀಗಿಸಿ ಪ್ರಗತಿ ಸಾಧಿಸಬೇಕಾದರೆ ಈಗಿರುವ ಬಂಡವಾಳವನ್ನು ದ್ವಿಗುಣಗೊಳಿಸಬೇಕೆಂದು. ಜನರು ಹೇಳುವರು ಸ್ವಾತಂತ್ರ್ಯದೊಡನೆ ದಾರಿದ್ರ್ಯವೂ ಹೋಗುವುದೆಂದು. ಯಂತ್ರ ಸಾಧನ ಮತ್ತು ಬಂಡವಾಳವನ್ನು ಪಡೆಯುವ ಪಾಶ್ಚಾತ್ಯ ದೇಶಗಳ ಈ ಎರಡು ಸಹಾಯ ದೊರಕಿದರೆ ಭಾರತದಲ್ಲಿ ಜನಜೀವನದ ಮಟ್ಟವನ್ನು ಒಂದಕ್ಕೆ ಹೆಚ್ಚಿಸಬಹುದೆಂದೂ ಅವರು ಅಭಿಪ್ರಾಯಪಟ್ಟಿರುವರು

ಪ್ರೌಢ ಶಾಲಾ ಉಪಾಧ್ಯಾಯರಿಗೆ ಸತ್ಕಾರ

ಗುಂಡ್ಲುಪೇಟೆ ತಾಲ್ಲೂಕು ಕಬ್ಬಳ್ಳಿ ಪ್ರೌಢ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದ ಶ್ರೀ ಸೂರ್ಯನಾರಾಯಣರಾಯರಿಗೆ ಅಲ್ಲಿನ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳು ಕಳೆದ ೧೪ ನೇ ತಾ|| ಸ್ಥಳೀಯ ವೈದ್ಯರಾದ ಶ್ರೀ ಜಿ ವಿ ಅನಂತರಾಮಯ್ಯನವರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು ಉಪಾಧ್ಯಾಯರಾದ ಶ್ರೀ ನಾರಾಯಣ, ಚನ್ನಬಸಪ್ಪ, ಗುರುಸ್ವಾಮಿ ಮತ್ತು ವಿದ್ಯಾರ್ಥಿ ಶ್ರೀ ಬಸವರಾಜುರವರು ಭಾಷಣಗಳನ್ನು ಮಾಡಿ ಶ್ರೀ ಸೂರ್ಯನಾರಾಯಣರಾಯರನ್ನು ಅಭಿನಂದಿಸಿದರು ವಿದ್ಯಾರ್ಥಿಗಳೂ ಶ್ರೀ ರಾಯರ ಗೌರವಾರ್ಥವಾಗಿ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು

ಪ್ರಣಯದ ಹಕ್ಕಿನ ಸಾಧನೆಯಲ್ಲಿ ಜಪಾನ್ ಸ್ತ್ರೀಯರ ವಿಜಯ

ಪ್ರಣಯದ ಸ್ವಾತಂತ್ರ್ಯ ಸ್ಥಾಪನೆ ಬಗ್ಗೆ ಜಪಾನಿನ ಓಮಿ ರೇಷ್ಮೆ ಕಾರ್ಖಾನೆಯ ೧೩ ಸಾವಿರ ಮಹಿಳಾ ಕೆಲಸಗಾರರು ೩ ತಿಂಗಳಿಂದ ನಡೆಸುತ್ತಿದ್ದ ಮುಷ್ಕರದಲ್ಲಿ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸುತ್ತಿರುವುದಾಗಿ ರೇಷ್ಮೆ ಕಂಪೆನಿಯ ಅಧ್ಯಕ್ಷ [illegible] ಮಟ್ಸೂಕಿರವರು ಮತ್ತು ಕಾರ್ಮಿಕರ ಪ್ರತಿನಿಧಿಗಳು ಮುಷ್ಕರದ ಮುಕ್ತಾಯದ ಬಗ್ಗೆ ಒಪ್ಪಂದಕ್ಕೆ ರುಜು ಮಾಡಿರುತ್ತಾರೆ

ತಮಗಿಷ್ಟ ಬಂದವರನ್ನು ಪ್ರೀತಿಸಲು ಅಥವಾ ವಿವಾಹವಾಗಲು ಹಕ್ಕನ್ನು ಕೊಡದಿರುವುದು, ತಮಗೆ ಬರುವ ಕಾಗದಪತ್ರಗಳನ್ನು ಒಡೆದು ನೋಡುವುದು, ಬೆಳಗ್ಗೆ ಹೊತ್ತು ಪ್ರಾರ್ಥನೆಯಲ್ಲಿ ಬೌದ್ಧರ ಮತ ಪ್ರಾರ್ಥನೆಯಲ್ಲಿ ಸೇರುವಂತೆ ಒತ್ತಾಯಪಡಿಸುವುದು ಮತ್ತು ಕೆಲಸವಿಲ್ಲದ ವೇಳೆಯಲ್ಲಿ ಹೊರಗೆ ಹೋಗಲು ಅನುಮತಿ ಪಡೆಯಬೇಕಾದುದು ಇವುಗಳೆಲ್ಲವೂ ಮಾನವ ಸ್ವಾತಂತ್ರ್ಯದ ಕುಂದುಗಳೆಂದು ಮಹಿಳಾ ಕಾರ್ಮಿಕರು ಆಕ್ಷೇಪಿಸಿದರು ಅನಂತರ ಲಿಬರಲ್ ಪಕ್ಷದವರ ಯೋಗಿಸಿದಂತೆಯೇ ಈ ನಿರ್ಬಂಧಗಳನ್ನು ಬಿಡಲಾಗಿದೆ

ಚೀಣಾ ಯುದ್ಧ ಹಡಗುಗಳಿಗೆ ಕಾಳಗ

ಕಮ್ಯೂನಿಸ್ಟ್ ಮತ್ತು ರಾಷ್ಟ್ರೀಯ ಚೀಣಾದ ಯುದ್ಧದ ಹಡಗುಗಳಿಗೆ ಫಾರ್ಮೋಸಾ ಬಳಿ ರಾಷ್ಟ್ರೀಯರ ಟಚೆನ್ ದ್ವೀಪದ ಹತ್ತಿರ ಮೊನ್ನೆ ೬೦ ನಿಮಿಷಗಳ ಕಾಲ ಕಾಳಗವು ನಡೆಯಿತೆಂದು ವರದಿಯಾಗಿದೆ

ಸಂಗೀತ ಕಛೇರಿ

ರಾಜಧಾನಿಯ ಸುರಾಫ್ ಪತ್ರಿಕೆಯ ಗಂಧದ ಪತ್ರಿಯ ದಲ್ಲಿ ಈ ಸಂಜೆ ೬|| ಗಂಟೆಗೆ ಮಹಾಗಣಪತಿ ಪೂಜೆ ಅಂಗವಾಗಿ ಹಳ್ಳಿಕೇರಿಯಲ್ಲಿರುವ ಸಂಘದ ಕಟ್ಟಡದಲ್ಲಿ ಸಂ|| ವಿ|| ಜಲಜಾಕ್ಷಮ್ಮನವರ ಗಾಯನವು ಏರ್ಪಾಡಾಗಿದೆ

ಚಾಮರಾಜನಗರದಲ್ಲಿ ಕಲಾ ಸಂಘ

ಚಾಮರಾಜನಗರದಲ್ಲಿ ಕೆಲವು ತರುಣರೂ, ಉತ್ಸಾಹಿ ಹಿರಿಯರೂ ಶ್ರೀ ಬಿ. ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ಸೇರಿ ಕಲಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿರುತ್ತಾರೆ ನಾಟಕ, ಸಂಗೀತ ಮತ್ತು ಸಾಹಿತ್ಯಗಳ ಸೇವೆಗಾಗಿ ಸಂಘವನ್ನು ಸ್ಥಾಪಿಸಲಾಗಿದೆ ವರ್ಷಕ್ಕೆ ೧ ರೂ ಚಂದಾ ಕೊಡುವವರು ಸದಸ್ಯರಾಗಬಹುದೆಂದು ಕಾರ್ಯದರ್ಶಿ ಶ್ರೀ ದಾಶರಥಿಯವರು ತಿಳಿಸುತ್ತಾರೆ

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಸಂಗೀತ ೭.೩೦ ಟಿ [illegible] ನಾಗಸ್ವರ [illegible] ಮತ್ತು [illegible] ಡಾ. ಎ. ಎಸ್. ಆರ್ ಶ್ರೀನಿವಾಸರಾಘವಾಚಾರ್ ಸಂಗೀತ ಸಂಜೆ ೬.೩೦ ಟಿ. [illegible] ನಾಗಸ್ವರ [illegible] ಗಾನವಿಹಾರ [illegible] ಮೋಹನ ಕುಮಾರ, ಹಿಂದಿ ಗೀತ ೭.೫ ಎಂ. ಆರ್ ಶ್ರೀನಿವಾಸ ರಾಘವಾಚಾರ್ ಸಂಗೀತ ೭.೪೦ ಭಾರತದ [illegible] ಗೀತ [illegible] ಟಿ. ಚೌಡಯ್ಯ, [illegible] ಆರ್ [illegible] ಇಂಗ್ಲಿಷ್ ಭಾಷಣ - ಸಂಜೆ [illegible] ೯.೫೦ ರಸ್ಕಿನ್ [illegible] ನಾಟಕ.

ಬೇಕಾಗಿದೆ

ಸುಮಾರು 2,500 ರೂಪಾಯಿಗಳಲ್ಲಿ ಭಾವಿ ಆಸ್ತಿ ಇರುವ ಮತ್ತು ಕೂಡಲೆ ಸ್ವಾಧೀನ ಸಿಗುವ ಮನೆ ಭೋಗ್ಯಕ್ಕೆ ಬೇಕಾಗಿದೆ ದಯವಿಟ್ಟು ಈ ವಿಳಾಸಕ್ಕೆ ಬರೆಯಿರಿ.

ಬಾಕ್ಸ್ ನಂ. X. C/o ಸಾಧ್ವಿ

ವಿಮಾ ಕಂಪೆನಿ ಕೆಲಸಗಾರರ ಪ್ರದರ್ಶನ

ಬೊಂಬಾಯಿಯಲ್ಲಿ ಮೊನ್ನೆ ವಿಮಾ ಕಂಪೆನಿಗಳ ಸುಮಾರು ೨,೦೦೦ ಕೆಲಸಗಾರರು ಮೆರವಣಿಗೆ ನಡೆಸಿ ಕಂಪೆನಿಗಳೊಡನೆ ತಮ್ಮ ವ್ಯಾಜ್ಯದ ತೈಸಲಾತಿ ಸಂಬಂಧದಲ್ಲಿ ಅಖಿಲ ಭಾರತ ನ್ಯಾಯ ಮಂಡಲದ ಏರ್ಪಾಟಿಗೆ ಭಾರತ ಸರ್ಕಾರದವರು ಒಪ್ಪದಿರುವ ಬಗ್ಗೆ ಅಸಮಾಧಾನವನ್ನು ಸೂಚಿಸಿದರು ನೌಕರರ ಬೇಡಿಕೆಯನ್ನು ಸಲ್ಲಿಸದಿದ್ದರೆ ಮುಷ್ಕರವೇ ಅಲ್ಲದೆ ದೇಶಾದ್ಯಂತ ಸಾಮೂಹಿಕ ಕಾರ್ಯಕ್ರಮ ಕೈಗೊಳ್ಳುವುದಾಗಿ ವಿಮಾ ನೌಕರರ ಸಂಘದ ಕಾರ್ಯದರ್ಶಿ ಸವಿ ತಿಯಾ ಎಚ್ಚರಿಸಿರುತ್ತದೆ

ಹೊತ್ತಿದ್ದ ೬೦ ಸಾವಿರ ರೂ. ಅಪಹಾರ

ಕೋಲಾರದ ಮಹಮದ್ ಮುಸ್ತಫಾರವರ ಮಗ ಅಬ್ದುಲ್ ಹಕ್ ಎಂಬುವನಿಗೆ ಪೆಟ್ಟುಬಿದ್ದು ಆಸ್ಪತ್ರೆಗೆ ಸೇರಿಸಲಾಗಿತ್ತಷ್ಟೆ. ಅತನು ತನ್ನ ಮನೆಯ ಹಿಂಭಾಗದ ಕೊಠಡಿಯಲ್ಲಿ ಭೂಮಿಯೊಳಗೆ ೬೦ ಸಾವಿರ ರೂ. ಗಳಿದ್ದ ಹಣದ ಪೆಟ್ಟಿಗೆಯನ್ನು ಹೂತಿಟ್ಟಿದ್ದ ಸ್ಥಳಕ್ಕೆ ಹೋಗಿ ಅಲ್ಲಿ ಇನ್ನೂ ೩೦ ಸಾವಿರ ರೂ. ನಗದು ಇಡುತ್ತಿದ್ದಾಗ ಯಾರೋ ೩-೪ ಜನರು ಬಂದು, ಅವನ ತಲೆ ಮೇಲೆ ಬಟ್ಟೆ ಹಾಕಿ ಮುಚ್ಚಿ, ಹೊಡೆದು ಪ್ರಜ್ಞೆ ತಪ್ಪಿಸಿ, ಲಕ್ಷದ ೨೦,೦೦೦ ರೂ. ಗಳನ್ನೂ ಅಪಹರಿಸಿಕೊಂಡು ಹೋಗಿರುವುದಾಗಿ ಹೇಳಲಾಗಿದೆ

ಬ್ಯಾಂಕು ನೌಕರರ ವಿವಾದದ ತನಿಖೆಗೆ ರಾಜಾಧ್ಯಕ್ಷರ ನೇಮಕ

ಬ್ಯಾಂಕು ತೀರ್ಪಿನ ಬಗ್ಗೆ ಸರ್ಕಾರದವರು ಬದಲಾವಣೆ ಮಾಡಿದ ಸಂಬಂಧವಾಗಿ ಉಂಟಾದ ಪರಿಸ್ಥಿತಿಯ ತನಿಖೆ ನಡೆಸಲು ಜಸ್ಟಿಸ್ ರಾಜಾಧ್ಯಕ್ಷರನ್ನು ಭಾರತ ಸರ್ಕಾರದವರು ನೇಮಿಸಿರುತ್ತಾರೆ. ಆದರೆ ಒಬ್ಬ ಸದಸ್ಯರ ತನಿಖೆ ನೇಮಕದ ಬಗ್ಗೆ ನೌಕರರು ತೃಪ್ತಿಯನ್ನು ಸೂಚಿಸಿಲ್ಲ

ಸಂಗೀತ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ [illegible] ದ ಕೇರಿಯ ಡೋರ್ ನಂಬರ್ ೪೪೭೬ [illegible] ವ ಮನೆಯಲ್ಲಿ ನಾಳೆ ಸಂಜೆ ೭ ಘಂಟೆಗೆ ಗಣೇಶನ [illegible] ಉತ್ಸವದ ಪ್ರಯುಕ್ತ ಶ್ರೀ ಕೆ. ಪಿ ಓಂಕಾರ್ ಮತ್ತು ಪಾರ್ಟಿಯಿಂದ ಸಂಗೀತವು ನಡೆಯುವುದು.

ನಿಧನ

ಹಿಂದೆ ಮೈಸೂರು ವೆಸ್ಲಿಯನ್ ಮಿಷನ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ [illegible] ರಾಮೇಶ್ವರಯ್ಯನವರ ಅಳಿಯಂದಿರೂ, [illegible] ಲೂರಿನ ಮಾಧ್ಯಮಿಕ ಶಾಲೆಯ ನಿವೃತ್ತ [illegible] ಮುಖ್ಯೋಪಾಧ್ಯಾಯರೂ ಆದ ಶ್ರೀ ಎ. ವೆಂ[illegible] ರಾಮಯ್ಯನವರು ತಮ್ಮ ೬೭ನೇ ವಯಸ್ಸಿ[illegible] ಕಳೆದ ಭಾನುವಾರ ರಾಜಧಾನಿಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ರಾಜಕಮಲ್ ಟಾಕೀಸ್

17-9-54 ರಿಂದ : ಅಮೋಘ ಪ್ರಾರಂಭ

ವಿಜಯಾ ರವರ

ಚಂದ್ರಹಾರ

(ತೆಲುಗು)

ಭೂಮಿಕೆ :— ಸಾವಿತ್ರಿ, ಶ್ರೀರಂಜನಿ, ಎನ್. ಟಿ ರಾಮರಾವ್, ಎಸ್ ವಿ ರಂಗರಾವ್, ರೇಲಂಗಿ, ಜೋಗರಾವ್.

ಲಕ್ಷ್ಮೀ ★ ಈ ರಾತ್ರಿ

ಪಕ್ಷಿರಾಜಾರವರ ತಮಿಳು ಚಿತ್ರ

✱ ಮಲೈಕ್ಕಳ್ಳ

ಪ್ರತಿ ದಿನ ಮೂರು ಆಟಗಳು

—— ಈ ತೀವ್ರದಲ್ಲಿಯೇ ಬರುತ್ತದೆ :—

ಜೆಮಿನಿಯವರ ತಮಿಳು ಚಿತ್ರ ✱ ರಕ್ತ ಪಾಶ

ಪಾತ್ರ :- ಅಂಜಲಿದೇವಿ, ಪದ್ಮಿನಿ, ಟಿ. ಎಸ್. ಬಾಲಯ್ಯ, ವಿದ್ಯಾವತಿ

ಅಪೂರ್ವ ಸಮಯ! ತ್ವರೆ ಮಾಡಿ! ಕೆಲವು ಪ್ರತಿಗಳು ಮಾತ್ರ!

" ಸಂಗೀತ ಕಲಾಭಿವರ್ಧಿನೀ ಸಭಾ, ಮೈಸೂರು "

ಮೈಸೂರು ಸದಾಶಿವರಾಯರ ಜೀವನಚರಿತ್ರೆ, ಅವರಿಂದ ರಚಿತವಾದ ಕೃತಿಗಳ ಶುದ್ಧ ಸಾಹಿತ್ಯ, ಕ್ಲಿಷ್ಟ ಪದಗಳ ಅರ್ಥ, ರಾಗಲಕ್ಷಣ ಮತ್ತು ಶುದ್ಧವಾದ ವರ್ಣ ಮಟ್ಟುಗಳು

' ಮೈಸೂರು ಸದಾಶಿವರಾಯರ ಕೃತಿಗಳು '

ಎಂಬ ಗ್ರಂಥವು ಇದೇ ಅಕ್ಟೋಬರ್ ತಿಂಗಳಲ್ಲಿ ಪ್ರಕಟಿಸಲ್ಪಡುವುದು

ಪ್ರತಿ ಪುಸ್ತಕದ ಬೆಲೆ 6 ರೂಪಾಯಿಗಳು ಮಾತ್ರ

ತಾ|| 30-9-54 ರ ಒಳಗಾಗಿ ಮುಂಗಡವಾಗಿ ಹಣ ಕೊಡುವವರಿಗೆ 5 ರೂಪಾಯಿಗಳಿಗೆ ಪ್ರತಿಯನ್ನು ಕಾದಿರಿಸಲಾಗುವುದು

ವಿಳಾಸ—463, ಡಿ. ಸುಬ್ಬಯ್ಯ ರಸ್ತೆ, ಮೈಸೂರು. } ಗೌರವ ಕಾರ್ಯದರ್ಶಿಗಳು

Edited, Printed and Published by A R. Nagarajan at Sadhvi Press, D.Subbiah Road, Mysore

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೩] SADHVI : MONDAY 20-9-1954 ಮೈಸೂರು : ಸೋಮವಾರ ೨೦-೯-೧೯೫೪ [ಸಂಚಿಕೆ ೯೭

ಮಂಡ್ಯದ ಸಕ್ಕರೆ ಕಾರ್ಮಿಕರಿಂದ ಮುಷ್ಕರದ ನಿರ್ಧಾರ

ಮಂಡ್ಯ ಸಕ್ಕರೆ ಕಾರ್ಖಾನೆ ಕಾರ್ಮಿಕರ ಮುಷ್ಕರಕ್ಕೆ ನಿರ್ಧಾರ

೧೩ ಜನ ಕಾರ್ಮಿಕರನ್ನು ಕೆಲಸಕ್ಕೆ ಪುನಃ ತೆಗೆದುಕೊಳ್ಳದಿರುವುದೇ ಕಾರಣ

ಮೈಸೂರು ೨೦

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಕಾರ್ಮಿಕರು ನೆನ್ನೆ ಮತ್ತು ಮೊನ್ನೆ ಮಂಡ್ಯದಲ್ಲಿ ರಹಸ್ಯ ಬ್ಯಾಲೆಟ್ ಮೂಲಕ ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆ. ಮುಷ್ಕರ ಹೂಡಬೇಕೆಂದು ೩,೧೭೬ ಮಂದಿಯೂ, ಕೂಡದು ಎಂದು ೩೫ ಜನರೂ ಅಭಿಮತ ಸೂಚಿಸಿದರು. ಬ್ಯಾಲೆಟ್ಟಿನ ಫಲಿತಾಂಶವು ತಿಳಿದಕೂಡಲೇ ಕಾರ್ಮಿಕರು ಜಯಕಾರ ಮಾಡಿದರು. ಮೈಸೂರಿನ ಕಾರ್ಮಿಕ ಮುಂದಾಳುಗಳಾದ ಶ್ರೀ ಬಿ. ಬಿ. ಎಲ್ಲಪ್ಪನವರು ಬ್ಯಾಲೆಟ್ ತೆಗೆಯುತ್ತಿದ್ದರು.

ಕೆಲವು ವರ್ಷಗಳ ಹಿಂದೆ ಕೃಷ್ಣರಾಜಸಾಗರದ ನೀರು ಬತ್ತಿಹೋದ ಸಂಬಂಧದಲ್ಲಿ ಕಾರ್ಖಾನೆಯು ೮೦೬ ಜನ ಕಾರ್ಮಿಕರನ್ನು ತೆಗೆದುಹಾಕಿ, ಅವರನ್ನು ಇದುವರೆಗೂ ಪುನಃ ತೆಗೆದುಕೊಳ್ಳದಿರುವುದೇ ಮುಷ್ಕರ ಹೂಡಲು ಕಾರಣವಾಗಿದೆ.

ಆಂಧ್ರ ರೈತರ ಸತ್ಯಾಗ್ರಹ ಮುಕ್ತಾಯ; ಬಂದಿಗಳ ಬಿಡುಗಡೆ

ಆಂಧ್ರ ಸಂಸ್ಥಾನದ ಕರಿವೇಣ ಎಂಬಲ್ಲಿ ಇನಾಂ ರೈತರುಗಳು ೪೦ ದಿವಸಗಳಿಂದ ನಡೆಸುತ್ತಿದ್ದ ಸತ್ಯಾಗ್ರಹವನ್ನು ನಿಲ್ಲಿಸಿದಂತೆ ಆಂಧ್ರ ಪ್ರಜಾ ಸಮಾಜವಾದಿ ಪಕ್ಷವು ಪ್ರಕಟಿಸಿದ ನಂತರ ಸತ್ಯಾಗ್ರಹವನ್ನು ನಿಲ್ಲಿಸಲಾಗಿದೆ. ಸತ್ಯಾಗ್ರಹದ ಸಂಬಂಧ ಜೈಲಿಗೆ ಹೋಗಿದ್ದ ೩೫೧ ಮಂದಿಯನ್ನೂ ಬಿಡುಗಡೆ ಮಾಡಲು ಆಂಧ್ರ ಸರ್ಕಾರದವರು ನಿರ್ಧರಿಸಿರುತ್ತಾರೆ. ಈಗಾಗಲೇ ೧೮೪ ಮಂದಿಯನ್ನು ಬಿಡುಗಡೆ ಮಾಡಲಾಗಿದೆ. ಶಾಸನಭಂಗ ಹಾಗೂ ಕಾನೂನು ಉಲ್ಲಂಘನೆಗಾಗಿ ಪತ್ತೆಯಾಗಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಸರ್ಕಾರದವರು ನಿರ್ಧರಿಸಿದ್ದಾರೆ.

ಹಣ ಕಾರ್ಮಿಕನಂತೆ ಜೀವನ ನಡೆಸಲು ಮಾಲೀಕನ ನಿರ್ಧಾರ

ಅಹಮದಾಬಾದಿನ ಹತ್ತಿ ಗಿರಣಿಯ ಮಾಲೀಕರಾದ ೪೦ ವರ್ಷದ ಚಂದ್ರವದನ ಲಕ್ಷ್ಮಿ ಎಂಬುವನು ಗಿರಣಿ ಕಾರ್ಮಿಕನಂತೆ ಸರಳ ಜೀವನ ನಡೆಸಲು ನಿರ್ಧರಿಸಿರುತ್ತಾನೆ. ಕಳೆದ ವರ್ಷ ಈತನು ೩೦,೦೦೦ ರೂ. ಬೆಲೆ ಬಾಳುವ ತನ್ನ ಪತ್ನಿಯ ಆಭರಣಗಳನ್ನು ದಾನ ಮಾಡಿಬಿಟ್ಟನು. ಕೆಲವು ತಿಂಗಳ ಹಿಂದೆ ತನ್ನ ಸಂಪಾದನೆಯ ಒಂದು ಭಾಗವನ್ನು ವಿನೋಬಾಭಾವೆಯವರ ಸಂಪತ್ತಿ ದಾನಕ್ಕೆ ಕೊಡುತ್ತಿದ್ದಾಗ ಕೆಲವು ತಿಂಗಳು ಆದ ಭಾಗದಲ್ಲಿ ತನ್ನ ಜಮೀನಿನಲ್ಲವನ್ನೂ ಭೂದಾನಕ್ಕೆ ಕೊಟ್ಟನು. ಗಿರಣಿ ಕಾರ್ಮಿಕನಿಗೆ ಬರುವ ಸಂಬಳದಷ್ಟರಲ್ಲಿ ಜೀವನ ನಡೆಸುವುದಾಗಿ ಈಗ ಹೇಳಿರುತ್ತಾನೆ. ಆತನು ಪದವೀಧರ. ಬಿಲಿಮೋರಾ ಎಂಬಲ್ಲಿ ಹಿಂದುಳಿದ ವರ್ಗದ ಮಕ್ಕಳಿಗಾಗಿ ಈಗ ಶಾಲೆಯೊಂದನ್ನು ನಡೆಸುತ್ತಿರುವನು. ಅನನಲ್ಲಿ ಆಗಿರುವ ಈ ಬದಲಾವಣೆಗೆ ಆತನ ಪತ್ನಿಯು ಸಹಕಾರಪೂರ್ಣವಾಗಿದ್ದಾಳೆ.

ರಾಷ್ಟ್ರಾಧ್ಯಕ್ಷರಿಂದ ಇನಾಂ ಮಸೂದೆಯು ವಾಪಸಾತಿ

ಬೆಂಗಳೂರು ೨೦

ಸಂಸ್ಥಾನದ ಶಾಸನ ಸಭೆಯು ಅಂಗೀಕರಿಸಿರುವ ಇನಾಂ ಮಸೂದೆಯನ್ನು ರಾಷ್ಟ್ರಾಧ್ಯಕ್ಷರ ಸಮ್ಮತಿಗೆ ಕಳುಹಲಾಗಿತ್ತು. ಅವರು ಅದನ್ನು ವಾಪಸು ಕಳುಹಿಸಿ ಕೇಂದ್ರ ಯೋಜನಾ ಸಮಿತಿಯವರು ಮಾಡಿರುವ ಸಲಹೆಗಳನ್ನು ಮಸೂದೆಯಲ್ಲಿ ಸೇರಿಸುವ ತಿದ್ದುಪಡಿ ಮಾಡಲಿರುವರೆಂದು ಗೊತ್ತಾಗಿದೆ. ಬರುವ ತಿಂಗಳ ಶಾಸನ ಸಭಾಧಿವೇಶನದಲ್ಲಿ ಮಸೂದೆಗೆ ತಿದ್ದುಪಡಿ ತರಲಾಗುವುದು.

ಯೋಜನಾ ಸಮಿತಿಯವರ ಸಲಹೆ ಪ್ರಕಾರ, ಸರ್ಕಾರ ಮತ್ತು ರೈತರ ಗಳ ನಡುವೆ ಮಧ್ಯವರ್ತಿಯಾಗಿ ಯಾರೂ ಇರಕೂಡದೆಂದೂ, ಎಲ್ಲ ಜಮೀನುಗಳಲ್ಲೂ ರೈತರ ಸಾಗುವಳಿ ಹಕ್ಕನ್ನು ಕೊಡಬೇಕೆಂದೂ, ಇನಾಂದಾರರು ಈ ಸ್ವತ್ತಿನ ಮೇಲೆ ಇದ್ದ ಅವರ ಹಕ್ಕನ್ನು ರೈತರು ಸರ್ಕಾರಕ್ಕೆ ಕೊಡಬೇಕೆಂದೂ ಗೊತ್ತಾಗಿದೆ. ರೈತರು ಕೊಡುವ ಗೇಣಿಗೂ ಸರ್ಕಾರಕ್ಕೆ ಇತರ ಜಮೀನುಗಳಿಂದ ಬರುವ ಕಂದಾಯವನ್ನು ರೈತರಂತೆ ಬದಲಾವಣೆ ಮಾಡಿ ಸರಿಗೂಡಿಸಬೇಕೆಂದು ಸೂಚಿಸಲಾಗಿದೆ.

ಕೇಂದ್ರ ಕಬ್ಬು ಸಮಿತಿಗೆ ಕೆ. ವಿ. ಶಂಕರೇಗೌಡರ ನೇಮಕ

ಭಾರತ ಸರ್ಕಾರದ ಕಬ್ಬಿನ ಸಮಿತಿಗೆ ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ವಿ. ಶಂಕರೇಗೌಡರನ್ನು ಸದಸ್ಯರಾಗಿ ತೆಗೆದುಕೊಳ್ಳಲಾಗಿದೆ. ಮೂರು ವರ್ಷಗಳವರೆಗೆ ಇವರು ಸಂಸ್ಥಾನದ ಕಬ್ಬು ಬೆಳೆಗಾರರ ಪ್ರತಿನಿಧಿಗಳಾಗಿ ಸಮಿತಿಯಲ್ಲಿರುವರು.

ಚನ್ನಪಟ್ಟಣ ಮತ್ತು ಕುಣಿಗಲ್ ಪಟ್ಟಣಗಳಿಗೆ ಮಹಾರಾಜರ ಭೇಟಿ ಮುಂದಕ್ಕೆ

ಚನ್ನಪಟ್ಟಣ ಮತ್ತು ಕುಣಿಗಲ್, ಬಳಿ ೨ ಪಟ್ಟಣಗಳಿಗೆ ಶ್ರೀಮನ್ ಮಹಾರಾಜರು ಭೇಟಿ ಕೊಡುವ ಕಾರ್ಯಕ್ರಮಗಳನ್ನು ಅವರ ದೇಹಾಲಸ್ಯದ ನಿಮಿತ್ತ ಮುಂದೆ ಹಾಕಲಾಗಿದೆ. ದಸರಾ ಹಬ್ಬದನಂತರ ಈ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ತುತ್ತಿಕುಡಿಯಲ್ಲಿ ಮಹಾರಾಜರ ಭಾವಚಿತ್ರದ ಅನಾವರಣ

ತಿರುವಾಂಕೂರು ಸಂಸ್ಥಾನದ ತುತ್ತಿಕುಡಿ ಬಳಿ ಹೊಸದಾಗಿ ಏರ್ಪಡಿಸಿರುವ ಕಾಸ್ಟಿಕ್ ಸೋಡಾ ಕಾರ್ಖಾನೆಯಲ್ಲಿ ನೆನ್ನೆ ಮದ್ರಾಸ್ ಗೌರ್ನರರಾದ ಶ್ರೀ ಪ್ರಕಾಶರವರು ಮೈಸೂರಿನ ಶ್ರೀಮನ್ಮಹಾರಾಜರ ಭಾವಚಿತ್ರವನ್ನು ಅನಾವರಣ ಮಾಡಿದರು. ಕಾರ್ಖಾನೆಯ ಶಂಕುಸ್ಥಾಪನೆಯನ್ನು ಶ್ರೀಮನ್ಮಹಾರಾಜರು ಸ್ಥಾಪಿಸಿದ್ದರು. ಶ್ರೀ ಪ್ರಕಾಶರು ಭಾಷಣ ಮಾಡಿ, ಭಾರತದ ರಾಜ್ಯಾಂಗದ ವಿಷಯವಾಗಿ ಜನರು ಆಸಕ್ತಿ ತಾಳುವುದಕ್ಕೆ ಬಹುಕಾಲ ಮುಂಚೆ ಮೈಸೂರು ಮಹಾರಾಜರುಗಳು ಪ್ರಜೆಗಳ ಸ್ವರಾಜ್ಯದ ಆದರ್ಶವನ್ನು ತಮ್ಮ ಸಂಸ್ಥಾನದಲ್ಲಿ ಸ್ಥಾಪಿಸಿ ಅದನ್ನು ಬೆಳೆಸಿಕೊಂಡು ಬಂದಿದ್ದರೆಂದು ಹೇಳಿದರು.

ಸಂಸ್ಥಾನದಲ್ಲಿ ಸಂಸ್ಕೃತ ಲಿಪಿಯಲ್ಲೂ ಕನ್ನಡ ಪಾಠ

ಮುಖ್ಯ ಮಂತ್ರಿ ಹನುಮಂತಯ್ಯನವರ ಭಾಷಣ

ಮದ್ರಾಸಿನ ಕುಪ್ಪುಸ್ವಾಮಿ ಶಾಸ್ತ್ರೀ ಸಂಶೋಧನಾ ಶಾಲೆಯ ೧೦ ನೇ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಮೊನ್ನೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಭಾಷಣ ಮಾಡಿ ಭಾರತದ ಭಾಷೆಗಳಿಗೆ ಮಾತೃವಾದ ಸಂಸ್ಕೃತದ ಮಹತ್ವವನ್ನು ಒತ್ತಿ ಹೇಳಿದರು. ಸಂಸ್ಕೃತ ಭಾಷೆಯನ್ನು ಇತರ ಭಾಷೆಯ ಸರಿಗಟ್ಟಿ ಬಾರದೆಂದು ನುಡಿದರು. ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆಯನ್ನು ಸಂಸ್ಕೃತ ಲಿಪಿಯಲ್ಲಿ ಕಲಿಸಲಾಗುವುದೆಂದೂ, ಇದರಿಂದ ವಿದ್ಯಾರ್ಥಿಗಳು ಸುಲಭವಾಗಿ ಸಂಸ್ಕೃತವನ್ನು ಕಲಿಯಲು ಸಾಧ್ಯವಾಗುವುದೆಂದೂ ಅವರು ಹೇಳಿದರು.

ಮುಂದುವರಿದು, ಸಂಸ್ಕೃತವು ದೇವ ಅಥವಾ ಗೀರ್ವಾಣ ಭಾಷೆಯೆಂದೂ, ಭೂಮಿಯ ಮೇಲೆ ಇರುವ ದೇವತೆಗಳ ಸಂಪತ್ತಾಗಿಯು ಕಲ್ಪಿಸಿದೂ, ಅದ್ದರಿಂದಲೇ ಅಂತಹವರ ಭಾಷೆಯು ಸಂಸ್ಕೃತಭಾಷೆಯಾಗಬೇಕೆಂದೂ ಶ್ರೀ ಹನುಮಂತಯ್ಯನವರು ನುಡಿದರು. ಪ್ರಜಾ ಪ್ರಭುತ್ವ ಕಾಲದಲ್ಲಿ "ಬೀದಿಯ ಜನರ" ಬಳಕೆಯ ಭಾಷೆಯೇ ರಾಷ್ಟ್ರ ಭಾಷೆಯಾಗುವುದೆಂದು ಅವರು ತಿಳಿಸಿ, ಉರ್ದು ಮತ್ತು ಇಂಗ್ಲಿಷ್ ಭಾಷೆಗಳು ಅಧಿಕಾರ ಭಾಷೆಯಾದ ಬಗೆಯನ್ನು ವಿವರಿಸಿದರು.

ಸಂಸ್ಕೃತ ಮತ್ತು ಇತರ ಭಾಷೆಗಳ ಬಾಂಧವ್ಯವನ್ನು ಕುರಿತು ಮಾತನಾಡಿ, ಸಂಸ್ಕೃತವು ದೇವಸ್ಥಾನದ ಮೂಲ ವಿಗ್ರಹದಂತೆಯೂ, ಇತರ ಭಾಷೆಗಳು ಉತ್ಸವ ವಿಗ್ರಹಗಳಂತೆಯೂ ಇರುವುವೆಂದು ಹೇಳಿದರು.

ಲಾವೋಸ್ ಮಂತ್ರಿಯ ಕೊಲೆ

ಆಗ್ನೇಯ ಏಷ್ಯಾದ ಲಾವೋಸ್ ಸಂಸ್ಥಾನದ ರಕ್ಷಣಾ ಮಂತ್ರಿ ಲೌವೊರ ವಂಗರನ್ನು ಮೊನ್ನೆ ರಾತ್ರಿ ಕೊಂದುಹಾಕಲಾಯಿತೆಂದು ವರದಿಯಾಗಿದೆ. ಅವರು ಉಪ ಮುಖ್ಯ ಮಂತ್ರಿ ಫೌಯಿ ಸನಾನಿ ಕೋಣೆಯವರೊಡನೆ ಭೋಜನ ಕೂಟದಲ್ಲಿದ್ದಾಗ ಅವರ ಮೇಲೆ ಕ್ರಾಂತಿಕಾರರು ಎರಡು ಗ್ರೆನೇಡುಗಳನ್ನು ಎಸೆದರೆಂದು ಹೇಳಲಾಗಿದೆ. ಕ್ರಾಂತಿಕಾರರು ಗೊಂದಲದಲ್ಲಿ ಪರಾರಿಯಾಗಿರುತ್ತಾರೆ. ಏಟಿನಿಂದ ಇತರ ಬಾದಿ ಕಾರಿಯ ಪತ್ನಿಗೆ ತೀವ್ರ ಗಾಯವಾಗಿದೆ.

ದುಷ್ಕೃತ್ಯಕಾರರಿಂದ ೨೩ ಕಾರ್ಮಿಕರ ಕೊಲೆ

ದಕ್ಷಿಣ ಅಮೆರಿಕದ ಕೊಲಂಬಿಯಾ ರಾಜ್ಯದಲ್ಲಿ ಕುಂಡಿನಾಮರ್ಕ ಪಟ್ಟಣದ ಸಿರ್ಜಾಪ ಪ್ರದೇಶವೊಂದರಲ್ಲಿ ಮೊನ್ನೆ ಮಲಗಿ ನಿದ್ರಿಸುತ್ತಿದ್ದ ೨೩ ಜನ ಕಾರ್ಮಿಕರನ್ನು ಸೈನಿಕರಂತೆ ವೇಷ ಧರಿಸಿದ ೬೦ ೭೦ ಜನರು ಗುಂಡಿನಿಂದ ಹೊಡೆದು ಕೊಂದುಹಾಕಿರುತ್ತಾರೆ. ಒಬ್ಬನು ಮಾತ್ರ ಜೀವಸಹಿತ ಉಳಿದನು. ೩ ಗಂಟೆ ಕಾಲ ನಡೆದು ಹತ್ತಿರದ ಊರಿಗೆ ಹೋಗಿ ಈ ಘೋರ ಕೃತ್ಯದ ವಿವರಗಳನ್ನು ತಿಳಿಸಿಯುತ್ತಾನೆ.

ಒಂಟಿಕೊಪ್ಪಲಿನ ಮನೆಯಲ್ಲಿ ಕೊಲೆಯೇ ?

ಮೈಸೂರು ೨೦

ಒಂಟಿಕೊಪ್ಪಲಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀಮತಿ ತಾಯಮ್ಮನವರ ಮನೆಯಲ್ಲಿ ಕಳೆದ ೮ ತಿಂಗಳಿಂದಲೂ ವಾಸವಾಗಿದ್ದ ಸುಮಾರು ೪೫ ವರ್ಷದ ಬೈರಪ್ಪ ಎಂಬಾತನು ವಿಚಿತ್ರ ರೀತಿಯಲ್ಲಿ ಮೃತಪಟ್ಟಿರುವ ವಿಷಯವು ಗೊತ್ತಾಗಿದೆ. ನಿತ್ಯವೂ ಆತನು ಬೆಳಗ್ಗೆ ೬ ಗಂಟೆಗೆ ಎದ್ದು ಹೊರಕ್ಕೆ ಬೆಣ್ಣೆ ವ್ಯಾಪಾರಕ್ಕಾಗಿ ಹೋಗುತ್ತಿದ್ದನೆಂದು ಹೇಳಲಾಗಿದೆ. ಈ ಬೆಳಗ್ಗೆ ಬಹಳ ಹೊತ್ತಾದರೂ ಬಾಗಿಲು ತೆಗೆಯದೆ ಇದ್ದುದನ್ನು ನೋಡಿ ಮನೆಯವರು ಒಳಗೆ ಹೋದಾಗ ಆತನು ಮೃತಪಟ್ಟಿದ್ದುದು ಗೊತ್ತಾಗಿದೆ. ಆತನ ಪಕ್ಕದಲ್ಲಿ ಬೆಣ್ಣೆಯ ಟಿನ್ನು ಮತ್ತು ಬೆಣ್ಣೆ ಮಾರಿ ಬಂದ ರೂಪಾಯಿಗಳು ಇದ್ದುದಾಗಿ ಹೇಳಲಾಗಿದೆ. ಜಿಲ್ಲಾ ಮತ್ತು ಅಸಿಸ್ಟೆಂಟ್ ಪೊಲೀಸು ಸೂಪರಿಂಟೆಂಡೆಂಟರು ಇತರ ಅಧಿಕಾರಿಗಳೊಡನೆ ಸ್ಥಳಕ್ಕೆ ಹೋಗಿ ತನಿಖೆ ನಡೆಸಿದರು. ಮೃತನ ತಲೆಯ ಎಡಭಾಗದಲ್ಲಿ ಪೆಟ್ಟು ಬಿದ್ದಿದೆ. ಶರೀರವನ್ನು ಶವ ಪರೀಕ್ಷೆಗೆ ಕಳುಹಲಾಗಿದೆ. ಆತನು ಹಾಸನದವನೆಂದು ಹೇಳಲಾಗಿದೆ. ಮರಣದ ರಹಸ್ಯವೇನೆಂಬುದಾಗಲೀ, ಕಾರಣವಾಗಲೀ ಗೊತ್ತಾಗಿಲ್ಲ.

ಅಂಬಾ ಪೂಜೆ

ರಾಜಧಾನಿಯ ಕೃಷ್ಣರಾಜ ಮೊಹಲ್ಲಾ ದೀವಟಿಗೆ ಬೀದಿಯಲ್ಲಿರುವ ಪಕ್ಕದ ಜನರ ಮಹಾಲಿಂಗೇಶ್ವರ ಮಠದ ಗರಡಿಯಲ್ಲಿ ಶ್ರೀ ಅಂಬಾ ಪೂಜೆಯು ನಾಳೆ ಸಂಜೆ ೬|| ಗಂಟೆಗೆ ನಡೆಯುವುದು. ಪೌರಸಭಾ ಸದಸ್ಯರಾದ ಶ್ರೀ ಎಂ. ಸಿ. ವಹೀದಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಜಪಾನ್ ಬಿರುಗಾಳಿಯಲ್ಲಿ ೨೭ ಮರಣಗಳು

ಗಂಟೆಗೆ ೮೦ ಮೈಲಿ ವೇಗದ ಬಿರುಗಾಳಿಯು ಜಪಾನಿನಲ್ಲಿ ಮೊನ್ನೆ ಬೀಸಲಾಗಿ, ೨೭ ಜನರು ಸತ್ತರು, ೨೪ ಮಂದಿಗೆ ಗಾಯವಾಯಿತೆಂದೂ, ೮ ಜನರ ಪತ್ತೆಯಿಲ್ಲವೆಂದೂ ಹೇಳಲಾಗಿದೆ. ತೀರದ ನೂರಾರು ಮನೆಗಳು ನಾಶವಾಗಿವೆ.

ಟಿ. ನರಸೀಪುರದಲ್ಲಿ ಕುಷ್ಠ ರೋಗ ಚಿಕಿತ್ಸೆಗೆ ವ್ಯವಸ್ಥೆ

ಟಿ. ನರಸೀಪುರದಲ್ಲಿ ಕುಷ್ಠರೋಗಿಗಳಿಗೆ ಚಿಕಿತ್ಸೆ ನಡೆಸಲು ವಿಶೇಷ ಪ್ರಾವೀಣ್ಯತೆ ಪಡೆದಿರುವ ವೈದ್ಯರನ್ನು ಅಥವಾ ನಿಕ ಸಾಧನ ಸಾಮುಗ್ರಿಗಳೊಡನೆ ಕಳುಹಿಸಲಾಗುವುದೆಂದು ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ತಿಳಿಸಿರುವರು.

ರಾಯಚೂರು ಜಿಲ್ಲಾ ಸ್ಟೇಷನ್‌ರೋಡಿನಲ್ಲಿ ಮೇದವರಾಜ ಬ್ರಹ್ಮಶ್ರೀ ಜಯತೀರ್ಥಾಚಾರ್ಯರು ಹಲವು ದಿನಗಳಿಂದಲೂ ಪ್ರಾಣ ಮತ್ತು ಉಪನ್ಯಾಸಗಳನ್ನು ನಡೆಸಿದರು. ಕೊಟ್ಟೂರು ಮಹಾರಾಜರು ಶ್ರೀಯುತರನ್ನು ತಮ್ಮ ಅರಮನೆಗೆ ಬರಮಾಡಿಕೊಂಡು ಸಂಸ್ಕೃತದಲ್ಲಿ ಅವರ ಪ್ರಮೋಘ ಪಾಂಡಿತ್ಯ ಮತ್ತು ಉಪನ್ಯಾಸಗಳನ್ನು ಕೇಳಿ ಮೆಚ್ಚಿಗೆಯನ್ನು ಸೂಚಿಸಿದರು.

ಡಿ. ಪಿ. ಕರ್ಮರ್ಕರ್‌ರಿಂದ ವಸ್ತು ಪ್ರದರ್ಶನದ ಆರಂಭ

ಮೈಸೂರು, ...

ಮೈಸೂರು ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ಕೇಂದ್ರ ಆರೋಗ್ಯ ಸಚಿವ ಮಂತ್ರಿ ಶ್ರೀ ಡಿ. ಪಿ. ಕರ್ಮರ್ಕರ್ ರವರು ಇದೇ ೨೭ ನೇ ತಾ|| ಸಂಜೆ ... ನೆರವೇರಿಸುವರು.

ತಾಲ್ಲೂಕು ಉಪಾಧ್ಯಾಯರುಗಳ ಸಭೆ

ಮೈಸೂರು ತಾಲ್ಲೂಕ್ ರೀಜನಲ್ ... ಉಪಾಧ್ಯಾಯರ ಸಂಘದ ಸಭೆಯು ಕಳೆದ ... ಟ್ರೈನಿಂಗ್ ಕಾಲೇಜಿನ ... ಉಪಾಧ್ಯಾಯರಾದ ಶ್ರೀ ಎ. ... ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ... ಉಪಾಧ್ಯಾಯರಾದ ಶ್ರೀ ಕೆ. ಶ್ರೀನಿವಾಸರವರಿಂದ ಪ್ರಾರ್ಥನೆ ... ಶ್ರೀ ಎಂ. ಎಸ್. ... ಸ್ವಾಗತ ಭಾಷಣ, ಮತ್ತು ವರದಿ ... ಗಳಾದ ಮೇಲೆ ... ಉಪಾಧ್ಯಾಯರ ಸಂಘದ ಸಭೆ ನಡೆಯ ಬೇಕೆಂದೂ, ... ಸ್ಪರ್ಧೆಯಲ್ಲಿ ಮಕ್ಕಳ ... ಉಪಾಧ್ಯಾಯರೇ ... ಮಾಡುವಂತೆಯೂ ... ವಂದನಾರ್ಪಣೆ ಮತ್ತು ... ಸಭೆಯು ಮುಕ್ತಾಯವಾಯಿತು.

ಡಿ. ವಿ. ಗುಂಡಪ್ಪನವರ ಉಪನ್ಯಾಸ

ರಾಜಧಾನಿಯ ... ಗೋಖಲೆ ... ಶ್ರೀ ಡಿ. ವಿ. ಗುಂಡಪ್ಪನವರು ... ಸಾರ್ವಜನಿಕ ... ವಿಷಯವಾಗಿ ... ಉಪನ್ಯಾಸ ಮಾಡಿದರು.

ಸಿನಿಮಾ ಚಿತ್ರದ ಕಥೆ

ನವಜ್ಯೋತಿ ಸ್ಟುಡಿಯೋದಲ್ಲಿ ... ಎಂಬ ... ಚಿತ್ರವನ್ನು ... ಶ್ರೀ ಬಿ. ... ಬಿ. ಆರ್. ... ಡಾ. ಶ್ರೀ ... ಜೆ. ಆರ್. ... ಚಿತ್ರದ ... ಪಡೆದಿದ್ದಾರೆ ...

ಆಕಾಶವಾಣಿ ನಾಳೆ ಕಾರ್ಯಕ್ರಮ

... ಸಂಗೀತ ... ಕಾರ್ಯಕ್ರಮ ... ಭಕ್ತಿಗೀತೆ ... ಸಂಗೀತ ... ಪ್ರಕಟಣೆ ...

ಭೂದಾನ ಯಜ್ಞಕ್ಕೆ ೩೪|| ಲಕ್ಷ ಎಕರೆ ಜಮೀನು

ಕಳೆದ ... ೩೪|| ಲಕ್ಷ ಎಕರೆ ಭೂಮಿ ... ದಾನ ಮಾಡಿರುವುದಾಗಿ ... ಎಕರೆ ಭೂಮಿ ... ಸರ್ವ ಸೇವಾ ಸಂಘ ... ಶ್ರೀ ... ಜಮೀನಿನ ... ಪ್ರದೇಶಗಳಲ್ಲಿ ... ಹೇಳಲಾಗಿದೆ.

ಗೋವಧೆ ತಪ್ಪಿಸಲು ಮಂತ್ರಿಗಳಿಗೆ ಮೊರೆಯಿಟ್ಟ ಕಾರ್ಣಿಕ

ಗೋವಧೆ ... ಮಂತ್ರಿಗಳನ್ನು ... ಗೋವಧಾ ನಿಷೇಧ ... ಗೋವಧಾ ನಿರೋಧ ... ಅನುಸಾರ ... ಆಗ್ರಹ ...

ಉಪನ್ಯಾಸ ಮತ್ತು ಗಣಪತಿ ವಿಸರ್ಜನೆ

ರಾಜಧಾನಿಯ ... ವಿದ್ಯಾರ್ಥಿ ... ಗಣಪತಿ ... ಕಾಲೇಜಿನ ... ಗಣಪತಿಯ ... ನಡೆಯಿತು.

ಗ್ರಾಮಾಂತರ ಕೋರ್ಟಿನಲ್ಲಿ (?) ಇಬ್ಬರಿಗೆ ಜೀವಾವಧಿ ಸಜಾ

... ಶ್ರೀ ... ಸೆಷನ್ಸ್ ... ಇಬ್ಬರಿಗೆ ಜೀವಾವಧಿ ... ಶಿಕ್ಷೆ ...

ಮನೆ ಬೇಕಾಗಿದೆ

ಸುಮಾರ ೨೫೦೦ ರೂಪಾಯಿಗಳಲ್ಲಿ ... ಸುತ್ತಲೂ ... ಮತ್ತು ... ಸ್ವಾಧೀನ ... ಮನೆ ... ಬರೆಯಿರಿ.

ಬಾಕ್ಸ್ ನಂ X. C/o ಸಾಧ್ವಿ

ರಷ್ಯದಲ್ಲಿ ೭ನೇ ಅಣು ಅಸ್ತ್ರದ ಸಿಡಿತ

ರಷ್ಯದಲ್ಲಿ ಇತ್ತೀಚೆಗೆ ೭ನೇ ಅಣು ಅಸ್ತ್ರ ಸಿಡಿತದ ಪ್ರಯೋಗವನ್ನು ನಡೆಸಲಾಯಿತೆಂದು ... ಪ್ರದೇಶ ... ಸೆಪ್ಟೆಂಬರ್ ... ಅಕ್ಟೋಬರ್ ... ಮತ್ತು ... ಆಗಸ್ಟ್ ... ಹಿಂದೆ ... ಅಣು ... ತಜ್ಞರು ... ತಿಳಿಸಿದ್ದಾರೆ.

ದೇವಾಲಯದ ಜೀರ್ಣೋದ್ಧಾರ

ಬದನವಾಳಿನ ... ಶ್ರೀ ಸುಬ್ಬಪ್ಪ ... ಶ್ರೀ ಸುಬ್ರಹ್ಮಣ್ಯ ... ಸಾರ್ವಜನಿಕರ ... ಬದನವಾಳಿನ ಶ್ರೀ ಸಿದ್ದೇಶ್ವರಸ್ವಾಮಿ ದೇವಾಲಯದ ಜೀರ್ಣೋದ್ಧಾರ ... ದೇವಾಲಯವು ... ಕೆಲಸ ನಡೆದು ... ತಿಳಿಸಲಾಗಿದೆ.

ವಿದ್ಯಾ ಗಣಪತಿಯ ವಿಸರ್ಜನೆ

ರಾಜಧಾನಿಯ ಶಾರದಾವಿಲಾಸ ಕಾಲೇಜಿನ ವಿದ್ಯಾರ್ಥಿಗಳು ... ವಿದ್ಯಾ ಗಣಪತಿಯ ... ಮೈಸೂರು ... ಭವನದಿಂದ ... ಪ್ರಸಾದ ವಿನಿಯೋಗ ... ಗಣಪತಿಯನ್ನು ವಿಸರ್ಜಿಸಲಾಯಿತು.

WANTED

Salesmen and Canvassing Agents to work in Mysore City & in important Towns. Apply by Cor. 23-9-64 with experience, qualification and salary expected to S O 236/1 Uttaradi Mutt Street Fort Mysore

ಹಿಂದಿನ ಮತ್ತು ಇಂದಿನ ನಂಜನಗೂಡು

ನಂಜನಗೂಡಿನ ಶ್ರೀ ಸುಮತಿ ... ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಎ. ... ಸುಬ್ರಹ್ಮಣ್ಯಯ್ಯನವರು ... ಎಂಬ ಹೆಸರಿನ ಕನ್ನಡ ಗ್ರಂಥವೊಂದನ್ನು ಬರೆದಿದ್ದಾರೆ. ಶ್ರೀ ಬಿ. ವಿ. ಬಾಲಸುಬ್ರಹ್ಮಣ್ಯಂರವರು ಅದರ ಪ್ರಕಾಶಕರು. ನಂಜನಗೂಡಿನ ... ನಿವಾಸಿಗಳಿಗೂ, ಅಭಿಮಾನಿಗಳಿಗೂ ಗ್ರಂಥವನ್ನು ಸಮರ್ಪಿಸಲಾಗಿದೆ. ... ಚಾರಿತ್ರಿಕ ಹಿನ್ನೆಲೆಯನ್ನು ಗ್ರಂಥಕರ್ತರು ಸಂಕ್ಷೇಪವಾಗಿ ಕೊಟ್ಟಿರುತ್ತಾರೆ. ಶ್ರೀ ಶ್ರೀಕಂಠೇಶ್ವರ ದೇವಾಲಯ, ಅದರ ನಕ್ಷೆ ಮತ್ತು ... ವಿಗ್ರಹಗಳ ಚಿತ್ರಗಳನ್ನೂ ಕೊಡಲಾಗಿದೆ. ... ಮಹಿಮೆಯನ್ನೂ, ... ವಿವರಗಳನ್ನು ತಿಳಿಸಲಾಗಿದೆ. ನಂಜನಗೂಡು ಎಂದರೆ ನಂಜನ ನೆಲೆಯೆಂದು ಅರ್ಥವಾಗುವುದೆಂದೂ, ನಂಜನ್ನು ... ಉತ್ತರಿಸೇ ... ಎಂದೂ ... ನಿರೂಪಿಸಿದ್ದಾರೆ. ... ಊರಿನಲ್ಲಿರುವ ಎಲ್ಲಾ ಸಾರ್ವಜನಿಕ ... ಕಚೇರಿ, ಅಂಗಡಿ ಮುಂಗಟ್ಟುಗಳ ಬಗ್ಗೆ ... ದಿಂದು ... ಯಾತ್ರಾರ್ಥಿಗಳಿಗೂ, ನಂಜನಗೂಡು ನಿವಾಸಿಗಳಿಗೂ, ... ಪಟ್ಟಣಗಳ ಬಗ್ಗೆ ಅಭಿರುಚಿಯುಳ್ಳವರಿಗೂ ಪುಸ್ತಕವು ಉಪಯುಕ್ತವಾಗಿದೆ. ಬೆಲೆ ... ರೂ.

ನಂಜನಗೂಡಿನಲ್ಲಿ ಬಂಗ್ಲೆ ಬಾಡಿಗೆಗೆ ಇದೆ

ನಂಜನಗೂಡು ಶ್ರೀಕಂಠಪುರಿ ಬಡಾವಣೆಯಲ್ಲಿ ... ಬಂಗಲೆ ... ಬೇಕಾದವರು ... ವಿವರ ತಿಳಿಯಿರಿ.

ಎಂ. ಸಿ. ನರಸಿಂಹಯ್ಯ
...

ಜೀವವಿಮೆ ....

ಗಂಡನ ಕರ್ತವ್ಯವೂ, ಹೆಂಡತಿಯ ಹಕ್ಕೂ, ಮಗುವಿನ ಅವಶ್ಯಕತೆಯೂ ಆಗಿದೆ ....

ಮೈಸೂರು ಸರ್ಕಾರದ ವಿಮಾ ಇಲಾಖೆ

ಅನೇಕ ವರುಷಗಳ ನಂಬಿಕೆ, ಸೇವೆ ಸಹಕಾರ ಕಲ್ಪಿಸಿದೆ

ಪೂರ್ಣ ಭದ್ರತೆ—ಕಡಿಮೆ ಚಂದಾ, ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸನ್ನು ಹಂಚಿರುವುದು ! ಅತ್ಯಂತ ಕಾಲದಿಂದ ... ಸೌಕರ್ಯ ... ವಿಮಾ ... ಪಾವತಿ ... ವಿಮೆ ... ನಿರ್ಧರಿಸಿರಿ

... ಹಣವನ್ನು ... ಸ್ವೀಕರಿಸಲಾಗುತ್ತದೆ

ಮೈಸೂರು ಸರ್ಕಾರದ ವಿಮಾ ಇಲಾಖೆ, ಬೆಂಗಳೂರು

ಜ್ಯೋತಿ ಎಲೆಕ್ಟ್ರಿಕ್ ಲಾಂಡ್ರಿ

ನಜರಬಾದ್, ಮೈಸೂರು

ಮಾದರಿ ನಗರವಾದ ಮೈಸೂರಿನ ಮಾದರಿ ಲಾಂಡ್ರಿ

ಪರಿಣಿತರ ಮೇಲ್ವಿಚಾರಣೆಯಲ್ಲಿ, ವಿದ್ಯುಚ್ಛಕ್ತಿ ಯಂತ್ರಗಳಿಂದ ಆಧುನಿಕ ರೀತಿಯಲ್ಲಿ ಬಟ್ಟೆಗಳನ್ನು ಶುದ್ಧಿ ಮಾಡುವ ಸಂಸ್ಥೆ. ನಗರದ ಎಲ್ಲ ಕಡೆಗಳಲ್ಲೂ ಶಾಖೆಗಳಿವೆ

ಉತ್ತಮವಾದ ಒಗೆಗೆ

೮೦೮

ಸಾಬೂನು

ರಾಜಾ ಸೋಪ್ ಫ್ಯಾಕ್ಟರಿ, ಮೈಸೂರು.

Edited, Printed and Published by A. K. Nagarajan at Sadhvi Press, D Subbiah Road Mysore

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಪುಟ : ೦೩] SADHVI TUESDAY 21-9-1954 ಮೈಸೂರು · ಮಂಗಳವಾರ ೨೧-೯-೧೯೫೪ [ಸಂಚಿಕೆ : ೪೦

ಪಾಕಿಸ್ತಾನದವರಿಂದ ಭಾರತದ ಗಡಿ ಪ್ರದೇಶಗಳ ವಶ

ದಸರಾ ಉತ್ಸವದ ಕಾರ್ಯಕ್ರಮ

೭ ನೇ ತಾರೀಕು ಸಂಜೆ ೪-೩೦ಕ್ಕೆ ಜಂಬೂ ಸವಾರಿ

ಮೈಸೂರು ೨೧

ಈ ಸಾರಿ ನವರಾತ್ರಿ ಹಬ್ಬದ ಸಂಬಂಧವಾಗಿ ಅರಮನೆಯಲ್ಲಿ ರಾಜ ಸಭಾ ಕಾರ್ಯಕ್ರಮಗಳು ೨೭ ನೇ ತಾ|| ನಿಂದ ಆರಂಭವಾಗಿ ಅಕ್ಟೋಬರ್ ೭ ರ ವರೆಗೆ ನಡೆಯುವುವು ೭ ನೇ ತಾ|| ಸಂಜೆ ೪-೩೦ ಘಂಟೆಗೆ ಶ್ರೀಮನ್ಮಹಾರಾಜರ ಜಂಬೂಸವಾರಿಯು ಬನ್ನಿಮಂಟಪಕ್ಕೆ ಹೊರಡುವುದು

೨೭ ನೇ ತಾರೀಕು ಬೆಳಿಗ್ಗೆ ೯|| ಗಂಟೆಗೆ ಶ್ರೀ ಮಹಾರಾಜರು ಸಿಂಹಾಸನಾರೋಹಣ ಮಾಡುವರು. ಸಂಜೆ ಸೋಮೇಶ್ವರ ದೇವಾಲಯಕ್ಕೆ ಪಟ್ಟದ ಆನೆ ... ವಿಜಯ ಮಾಡುವುವು ೭ ಗಂಟೆಗೆ ಸಭೆ ನಡೆಯುವುದು ... ವರೆಗೆ ನಿತ್ಯವೂ ಬೆಳಿಗ್ಗೆ ಮತ್ತು ಸಂಜೆ ಪಟ್ಟದ ಆನೆ ಮತ್ತು ಕುದುರೆಗಳು ಸೋಮೇಶ್ವರನ ಗುಡಿಗೆ ಹೋಗುವ ಮತ್ತು ಸಂಜೆ ರಾಜ ಸಭೆಯ ಕಾರ್ಯಕ್ರಮಗಳು ಇವೆ ... ನೇ ತಾರೀಕು ಬೆಳಿಗ್ಗೆ ೬|| ಗಂಟೆಗೆ ಬನ್ನಿ ... ಆನೆ ... ಕುದುರೆ ... ಗುಡಿಗೆ ಒಯ್ಯಲ್ಪಡುವುವು ೭ ಗಂಟೆಗೆ ... ಪೂಜೆ ನಡೆವೆ, ಸಂಜೆ ೭ ಗಂಟೆಗೆ ರಾಜ ಸಭೆ ... ನಡೆವು

... ನೇ ದಿನ ಬೆಳಿಗ್ಗೆ ... ಪೂಜೆಯು ... ಪಟ್ಟದ ಆನೆ ಕುದುರೆ ಮತ್ತು ಆಯುಧಗಳನ್ನು ಬನ್ನಿಮಂಟಪಕ್ಕೆ ಕರೆದೊಯ್ಯಲಾಗುವುದು.

ಸರ್ಕಾರಿ ನೌಕರರಿಗೆ ಉಚಿತ ಚಿಕಿತ್ಸೆ

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರಿಗೆ ಉಚಿತವಾಗಿ ವೈದ್ಯ ಸಹಾಯವನ್ನು ಕಲ್ಪಿಸುವ ವಿಷಯವನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದೂ, ಈ ರೀತಿ ವ್ಯವಸ್ಥೆಯಾಗಿರುವ ಇತರ ಸಂಸ್ಥಾನಗಳಿಂದ ಈ ಬಗ್ಗೆ ವಿವರಗಳನ್ನು ಪಡೆಯಲು ಅವರು ಪ್ರಯತ್ನಿಸಿರುವರೆಂದೂ ವರದಿಯಾಗಿದೆ

ಉಪನ್ಯಾಸ

ರಾಜಧಾನಿಯ ಮಹಾರಾಣಿ ಕಾಲೇಜಿನ ... ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ... ಎ ... ಲಕ್ಷ್ಮಣನವರು ಇಂದಿನ ... ಭಾರತದಲ್ಲಿ ನ ಹುಡುಗಿಯರ ಕರ್ತವ್ಯ ಎಂಬ ವಿಷಯವಾಗಿ ಭಾಷಣ ಮಾಡುವರು

ಹುಡುಗಿ ತಪ್ಪಿಸಿಕೊಂಡಿದ್ದಾಳೆ

ರಾಜಧಾನಿಯ ... ಬಸಪ್ಪನವರ ... ಶಾಲೆಯ ಎಸ್ ಎಸ್ ಎಲ್ ಸಿ ತರಗತಿ ವಿದ್ಯಾರ್ಥಿನಿ ... ಎಸ್. ಪ್ರೇಮಾ ಎಂಬ ... ತಪ್ಪಿಸಿಕೊಂಡಿದ್ದಾಳೆ ಬಿಳಿ ಬ್ಲೌಸ್ ... ಮತ್ತು ... ಪಾಕಿಸ್ತಾನಿ ... ಯಾರಾದರೂ ಕಂಡಲ್ಲಿ ಶ್ರೀ ಸುಬ್ರಹ್ಮಣ್ಯ ... ಮತ್ತು ... ಅಗ್ರಹಾರ, ಮೈಸೂರು—ಈ ವಿಳಾಸಕ್ಕೆ ವರ್ತಮಾನ ಬರೆಯಬೇಕಾಗಿ ... ಕೋರಲಾಗಿದೆ

ಶ್ರೀಧರಾನಂದ ಸ್ವಾಮಿಗಳಿಗೆ ಪಾದಪೂಜೆ

ಮೈಸೂರು. ೨೧

ತುಮಕೂರು ಜಿಲ್ಲಾ ... ಶ್ರೀ ... ದಂಡಾಶ್ರಮ ಮಠದ ಶ್ರೀ ಶ್ರೀಧರಾನಂದ ಸ್ವಾಮಿಗಳವರನ್ನು ಶ್ರೀ ... ರಂಗಯ್ಯನವರು ನೆನ್ನೆ ಸಾಧ್ವಿ ಪತ್ರಿಕಾಲಯಕ್ಕೆ ಬರಮಾಡಿಕೊಂಡು ಪಾದಪೂಜೆ ಮತ್ತು ಭಿಕ್ಷೆ ನಡೆಸಿದರು ಶ್ರೀ ಸ್ವಾಮಿಗಳವರ ... ಚಂದ್ರಮೌಳೀಶ್ವರ ದೇವತಾ ಪೂಜೆಯನ್ನು ನಡೆಸಿದರು ... ಸಂಜೆ ಸ್ವಾಮಿಗಳವರು ಪುನಃ ಪೂಜೆ ... ಶ್ರೀ ... ಮತ್ತು ... ವನ ... ಉಪನ್ಯಾಸವನ್ನು ... ನಡೆಸಿದರು

ಮಾರ್ಕೆಟ್ ವರ್ತಕರ ಪ್ರತಿಭಟನೆ

ನಗರದ ಪೌರಸಭೆ ... ಮಾರ್ಕೆಟ್ ವರ್ತಕರ ... ತಿಂಗಳು ... ನೇ ತಾ|| ... ಯನ್ನು ಮುಚ್ಚಿ ಹರತಾಳ ನಡೆಸುವ ... ಸಾರ್ವಜನಿಕರು ... ವರ್ತಕರ ಸಂಘದ ... ಪೌರಸಭೆಯು ನಿರಂಕುಶ ಅಧಿಕಾರಕ್ಕೆ ಧಿಕ್ಕಾರ ಎಂದು ಸೂಚಿಸುವ ಕೆಂಪು ಬಿಲ್ಲೆ ... ವರ್ತಕರು ಧರಿಸುವರು

ಕಬಡಿ ಪಂದ್ಯ

ನಗರದ ... ಚಾಮುಂಡಿಪುರಂ ಕ್ರೀಡಾ ಕೇಂದ್ರದ ... ಗಳಿಗೆ ನೆನ್ನೆ ನಡೆದ ಕಬಡಿ ಪಂದ್ಯದಲ್ಲಿ ... ಪಾಯಿಂಟುಗಳಿಂದ ... ಜಯಗಳಿಸಿದ್ದಾರೆ

○ ನಗರದ ಕೃಷ್ಣಮೂರ್ತಿಪುರಂನಲ್ಲಿ ... ಭವನದ ಶ್ರೀ ವೆಂಕಟೇಶ್ ಎಂಬುವರ ಮನೆಯ ಬೀಗ ತೆಗೆದ ಕಳ್ಳರು ಕೆಲವು ಸಾಮಾನುಗಳನ್ನೂ ಮತ್ತು ... ನೆಂಜ ... ಎಂಬುವರ ಮನೆಯ ಬೀಗ ತೆಗೆದು ಕೆಲವು ಸಣ್ಣ ಒಡವೆಗಳನ್ನೂ ಕಳ್ಳರು ನೆನ್ನೆ ರಾತ್ರಿ ಅಪಹರಿಸಿಕೊಂಡು ಹೋಗಿದ್ದಾರೆ

ಯೋಗಾಭ್ಯಾಸಕ್ಕೆ ಕೇಂದ್ರ ಸರ್ಕಾರದ ಸಹಾಯ

ಯೋಗಾಸನಗಳ ಮೂಲಕ ಅಂಗ ಸಾಧನೆ ... ಉತ್ತಮ ... ಎಂಬ ಅಂಶವನ್ನು ಭಾರತ ಸರ್ಕಾರದವರು ತಿಳಿದುಕೊಂಡಿರುವರೆಂದೂ ಅದರ ಪ್ರಚಾರಕ್ಕಾಗಿ ಸಂಸ್ಥಾನಗಳಿಗೆ ... ಮತ್ತು ದ್ರವ್ಯ ಸಹಾಯವನ್ನು ನೀಡಲಿರುವುದಾಗಿ ... ಪಾರ್ಲಿಮೆಂಟಿನ ... ದಾಖಲು ಎಳಸಿರುತ್ತಾರೆ.

ಬಲಿಯಲ್ಲಿ ಮುತ್ತಿಗೆ ಪರಿಸ್ಥಿತಿ

... ರಾಜ್ಯ ... ಕಾಂಗ್ರೆಸ್ ... ಪರಿಸ್ಥಿತಿ ... ಮುತ್ತಿಗೆ ... ಇರುತ್ತಾರೆ

ವಿಶ್ವವಿದ್ಯಾಲಯಕ್ಕೆ ಸ್ವಯಂ ಆಡಳಿತ ಸ್ವಾತಂತ್ರ್ಯ

ಶಾಸನ ಬರಲಿರುವುದಾಗಿ ವೈಸ್ ಛಾನ್ಸೆಲರ ಹೇಳಿಕೆ

ಬೆಂಗಳೂರು ೨೦

ಇಲ್ಲಿನ ಸೆಂಟ್ರಲ್ ಕಾಲೇಜಿನ ಉಪಾಧ್ಯಾಯರ ... ಸಂಘದಲ್ಲಿ ವೈಸ್ ಛಾನ್ಸೆಲರಾದ ಶ್ರೀ ವಿ ಎಲ್ ಡಿಸೋಜಾರವರು ನೆನ್ನೆ ಮಾತನಾಡಿ ಕೇಂದ್ರ ಸರ್ಕಾರದ ವಿಶ್ವವಿದ್ಯಾಲಯ ... ಮೈಸೂರು ವಿಶ್ವವಿದ್ಯಾಲಯವು ... ಪಡೆಯಲು ಅರ್ಹವಾಗಿರುವ ... ವಿಶ್ವವಿದ್ಯಾಲಯವು ಸ್ವಯಂ ಆಡಳಿತ ಸ್ವಾತಂತ್ರ್ಯದ ... ಶಾಸನವೊಂದನ್ನು ... ರಾಗುವುದೆಂದು ತಿಳಿಸಿದರು ಕೇಂದ್ರ ಸರ್ಕಾರದ ... ಯೋಜನೆಯು ಕಾರ್ಯಗತವಾಗದೇ ಇದ್ದರೆ ವಿಶ್ವವಿದ್ಯಾಲಯದ ... ಸಂಬಳದ ... ಅವರ ... ಹೇಳಿದರು

ಭಿಕ್ಷೆ ಕೇಳಲು ಬಂದವರಿಂದ ಹುಡುಗನ ತಲೆಗೆ ಬೆಂಕಿ

ಬೆಂಗಳೂರು ... ಪೇಟೆಯಲ್ಲಿ ... ಎಂಬುವರ ... ಏಕಾಕಿಯಾಗಿದ್ದಾಗ ಇಬ್ಬರು ಭಿಕ್ಷೆ ಕೇಳಲು ಬಂದು ಹುಡುಗನ ... ತಲೆಗೆ ಸೀಮೆ ಎಣ್ಣೆ ... ಬೆಂಕಿ ಹಚ್ಚಿದ ಪ್ರಕರಣವೊಂದು ನಡೆಯಿತು ಬಾಲಕನ ತಲೆ ಕೂದಲು ಸುಟ್ಟುಹೋಗಿ ... ಅವನು ಕೂಗಿಕೊಳ್ಳಲಾಗಿ ಅಕ್ಕಪಕ್ಕದವರು ಬಂದಾಗ ... ಓಡಿಹೋದರೆಂದೂ, ಹುಡುಗನನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ

ವಿಯಟ್ನಾಮಿನ ೯ ಮಂತ್ರಿಗಳ ರಾಜೀನಾಮೆ; ಒಬ್ಬರು ಪರಾರಿ

ಇಂಡೋಚೀನದ ವಿಯಟ್ನಾಂ ಸಂಸ್ಥಾನದ ... ಮಂತ್ರಿ ... ರವರು ... ನಗರದಿಂದ ಪರಾರಿಯಾಗಿರುವರೆಂದೂ, ೯ ಜನ ಮಂತ್ರಿಗಳು ರಾಜೀನಾಮೆ ಕೊಟ್ಟಿರುವರೆಂದೂ ತಿಳಿಸಲಾಗಿದೆ ... ಪ್ರಧಾನ ... ಸರ್ಕಾರವು ... ವೆಂದೂ, ಪ್ರಧಾನ ಸೇನಾನಿ ಮತ್ತು ... ಮಧ್ಯೆ ... ಬಿಕ್ಕಟ್ಟಿನ ಪರಿಣಾಮವಿದೆಂದೂ ಹೇಳಲಾಗಿದೆ

ಅಮೋಯ್ ಮೇಲೆ ರಾಷ್ಟ್ರೀಯ ಚೀಣದ ಭಾರಿ ಧಾಳಿ

ರಾಷ್ಟ್ರೀಯ ಚೀಣದ ವಿಮಾನಗಳು ಮತ್ತು ... ನೆನ್ನೆ ... ಅಮೋಯ್ ನಗರ ಮತ್ತು ಇತರ ... ಭಾರಿ ಧಾಳಿ ಮಾಡಿರುವುವೆಂ ... ಅಮೋಯ್‌ನಲ್ಲಿ ... ರಾಷ್ಟ್ರೀಯ ... ಮೇಲೆ ಯುದ್ಧ ... ನಡೆಯುವುವು

ಕೇಡಿಗಳಿಂದ ಪೋಲೀಸ್ ಕಾನ್‌ಸ್ಟೇಬಲ್ಲಿಗೆ ಇರಿತ

ಇಬ್ಬರು ಕೇಡಿಗಳ ಬಂಧನ

ಮೈಸೂರು ೨೦

ಕಳೆದ ಬುಧವಾರ ರಾತ್ರಿ ಮಂಡಿ ಮೊಹಲ್ಲಾದ ಯುಸೂಫ್ ಹೋಟೇಲಿನ ಬಳಿ ರಾಜಯ್ಯ ಎಂಬ ಪೋಲೀಸಿನವನೊಬ್ಬನಿಗೆ ಇಬ್ಬರು ಕೇಡಿಗಳು ಹರಿತವಾದ ಆಯುಧದಿಂದ ಗಾಯಗೊಳಿಸಿದ ಪ್ರಸಂಗವು ವರದಿಯಾಗಿದೆ ಆ ರಾತ್ರಿ ನಾಗರಾಜ ಮತ್ತು ಅಬ್ದುಲ್ ಸತ್ತಾರ್ ಎಂಬ ಇಬ್ಬರು ಕೇಡಿಗಳು ಮೇಲ್ಕಂಡ ಸ್ಥಳದಲ್ಲಿ ಇದ್ದುದನ್ನು ಕಂಡುಹಿಡಿದ ಕ್ರೈಂ ಬ್ರಾಂಚ್ ಪೋಲೀಸ್ ಕಾನ್‌ಸ್ಟೇಬಲ್ ರಾಜಯ್ಯನು ಅವರನ್ನು ಹಿಡಿಯಲು ಹೋದಾಗ ನಾಗರಾಜನು ತಪ್ಪಿಸಿಕೊಂಡು ಓಡಿಹೋದನು ಅಬ್ದುಲ್ ಸತ್ತಾರನು ಹರಿತವಾದ ಆಯುಧದಿಂದ ರಾಜಯ್ಯನ ಕೈಗಳ ಮೇಲೆ ತೀವ್ರ ಗಾಯಗಳನ್ನು ಮಾಡಿ ಅನಂತರ ತಪ್ಪಿಸಿಕೊಂಡನೆಂದು ತಿಳಿದುಬಂದಿದೆ ರಾಜಯ್ಯನು ಈಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ ಮಂಡಿ ಪೋಲೀಸರು ನೆನ್ನೆ ಕೇಡಿಗಳಿಬ್ಬರನ್ನೂ ದಸ್ತಗಿರಿ ಮಾಡಿದರು

ಪಾಕಿಸ್ತಾನಿಗಳಿಂದ ಆಕ್ರಮಿಸಲ್ಪಟ್ಟಿರುವ ಹಲವು ಭಾಗಗಳು

೧,೮೦೦ ಗ್ರಾಮಗಳ ಪರಿಸ್ಥಿತಿ ಸಂದಿಗ್ಧ

ಪಶ್ಚಿಮ ಪಾಕಿಸ್ತಾನದ ಗಡಿ ಬಳಿ ಭಾರತಕ್ಕೆ ಸೇರಿದ ಹಲವು ಪ್ರದೇಶಗಳನ್ನು ಪಾಕಿಸ್ತಾನಿ ಪ್ರಜೆಗಳು ವಶಪಡಿಸಿಕೊಂಡಿರುವರೆಂದು ರಾಜ್ಯ ಸಭೆಯಲ್ಲಿ ನೆನ್ನೆ ಕೇಂದ್ರ ಉಪ ವಿದೇಶಾಂಗ ಮಂತ್ರಿ ಎ ಕೆ ಚಂದಾರವರು ಹೇಳಿರುತ್ತಾರೆ ಇಂತಹ ಎಷ್ಟು ಪ್ರಸಂಗಗಳು ನಡೆದಾಗಲೆಲ್ಲಾ ಭಾರತ ಸರ್ಕಾರದವರು ಪ್ರತಿಭಟನೆಯನ್ನು ಮಾಡಿ, ಪಾಕಿಸ್ತಾನವು ತಮ್ಮ ಬಲಗಳನ್ನು ವಾಪಸು ಕರೆಯುವಂತೆ ಸೂಚಿಸಿರುತ್ತಾರೆ ಹಲವು ಕಡೆ ಪಾಕಿಸ್ತಾನಿಗಳನ್ನು ವಾಪಸು ಕರೆಸಿಕೊಳ್ಳಲಾಗಿರುವುದೆಂದೂ, ಭಾರತದ ಅಭಿಪ್ರಾಯವನ್ನು ಒಪ್ಪದೆ ಇತರ ಪ್ರದೇಶಗಳನ್ನು ಇನ್ನೂ ಹಿಡಿದಿಟ್ಟುಕೊಳ್ಳಲಾಗಿರುವುದೆಂದೂ ಅವರು ಹೇಳಿದರು. ಗಡಿ ನಿರ್ಧಾರವಾಗದಿರುವ ಸುಮಾರು ೧,೮೦೦ ಹಳ್ಳಿಗಳ ಬಗ್ಗೆ ವ್ಯಾಜ್ಯಗಳನ್ನೂ ಸಂದಿಗ್ಧವಾಗಿರುವುವೆಂದೂ, ಈ ವಿಷಯವು ಅಸಾಧಾರಣವಲ್ಲವೆಂದೂ ಪ್ರಧಾನಿ ನೆಹರೂರವರು ಹೇಳಿರುವರು

ಕುದುರೆಗಳು ಅಕ್ಕಿ ಮಾರದಂತೆ ಸಂಸ್ಥಾನಕ್ಕೆ ತಂತಿ

ಮೈಸೂರಿನಿಂದ ಹೊರಕ್ಕೆ ... ಅಕ್ಕಿಯನ್ನು ... ಧಿಕವಾಗಿ ಸಾಗಿಸಲಾಗುತ್ತಿರುವುದೆಂದೂ, ... ಮತ್ತು ... ಲಕ್ಷ್ಮಾಂತರ ಜನರು ... ಬರಲಿರುವುದರಿಂದ ... ದಾಸ್ತಾನು ಬೇಕಾಗುವುದೆಂದೂ ... ಹೊರಕ್ಕೆ ಅಕ್ಕಿ ಮಾರುವುದನ್ನು ನಿಲ್ಲಿಸಿ, ... ಇಲಾಖೆಗಳ ಮೂಲಕ ... ಅವರನ್ನು ... ಮತ್ತು ... ಗಳಿಗೆ ತಂತಿ ಕಳುಹಿಸಿರುತ್ತಾರೆ.

ಮೈಸೂರು ಮದ್ರಾಸು ಪರೋಡಿ ಗುಂಪಿನ ನಾಯಕನ ಬಂಧನ

ಮೈಸೂರು, ಮದ್ರಾಸ್, ಬೊಂಬಾಯಿ ಮತ್ತು ಮಧ್ಯಭಾರತಗಳಲ್ಲಿ ಕಳ್ಳತನ ನಡೆಸುತ್ತಿದ್ದ ಗುಂಪಿನ ಮುಖಂಡನೆನ್ನಲಾದ ಕರೀಂ ಎಂಬುವನನ್ನು ಹಲವು ದಿನ ಎಡೆಬಿಡದೆ ಮದ್ರಾಸು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಮೈಸೂರು ಪೋಲೀಸರು ಆ ದಸ್ತಗಿರಿಗೆ ನೆರವು ನೀಡಿದ್ದರು. ಅಬ್ದುಲ್ ಕರೀಂ ಮತ್ತು ಪಂಜಾ ಎಂಬ ಇತರರನ್ನು ಮದ್ರಾಸು ಕೋರ್ಟಿನಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ. ಇತ್ತೀಚೆಗೆ ಸ್ವದೇಶಿ ಮಿಲ್ಸ್ ನಲ್ಲಿ ಅವರು ೧೬,೦೦೦ ರೂ. ಗಳನ್ನು ಅಪಹರಿಸಿದರು.

ಭೂದಾನ ಯಜ್ಞಕ್ಕೆ ಇಡೀ ಗ್ರಾಮದ ದಾನ

ಬೆಂಗಳೂರಿನ ಕೋಲಾರ ಜಿಲ್ಲೆಯಲ್ಲಿ ಒಂದು ಇಡೀ ಗ್ರಾಮವನ್ನು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಒಪ್ಪಿಸಲಾಗಿದೆ. ಗ್ರಾಮಕ್ಕೆ ಭೂಮಿಯವರ ಹೇಳಿಕೆ ಪ್ರಕಟವಾಗಿದೆ.

ಹೆಬ್ಬಸೂರು ಯುವಕರ ಸಂಘ

ಚಾಮರಾಜನಗರ ತಾಲ್ಲೂಕು ಹೆಬ್ಬಸೂರಿನ ಯುವಕರ ಸಂಘದ ಕಾರ್ಯಕಾರಿ ಸಮಿತಿಯ ಚುನಾವಣೆ ನಡೆದು ಶ್ರೀ ಕೆ. ವಿ. ನಂಜಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಸುಬ್ರಹ್ಮಣ್ಯ ರವರು ಉಪಾಧ್ಯಕ್ಷರಾಗಿಯೂ, ಶ್ರೀ ಅನಂತರಾಮಯ್ಯ ಮತ್ತು ಶ್ರೀ ಕೆ. ಎಸ್. ಸ್ವಾಮಿನಾಥನ್ ರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಎಂದರೆ ಸದಸ್ಯರನ್ನು ಸಮಿತಿಗೆ ಚುನಾಯಿಸಲಾಯಿತು.

ಸಂಸ್ಥಾನದ ಲಾರಿಯವರ ಪ್ರತಿಭಟನೆ

ಮೈಸೂರು ಸಂಸ್ಥಾನದಲ್ಲಿ ಎಲ್ಲ ಕಡೆ ತನಿಖಾ ಕಟ್ಟೆಗಳಲ್ಲಿ ಲಾರಿಗಳನ್ನು ಬಹಳ ಕಾಲ ತಡೆಯುವ ಪದ್ಧತಿಯನ್ನು ವಿರೋಧಿಸಿ ಮೈಸೂರಿನಲ್ಲಿ ಸೇರಿದ್ದ ಲಾರಿ ಸಂಘದ ಸಭೆಯಲ್ಲಿ ... ತೀರ್ಮಾನಿಸಲಾಯಿತು. ಈ ಪದ್ಧತಿಯನ್ನು ರದ್ದು ಮಾಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಲು ನಿರ್ಧರಿಸಲಾಯಿತು.

ವಿದ್ಯಾ ಗಣಪತಿ ಸಂಗೀತ ಹಬ್ಬ

ರಾಜಧಾನಿಯ ಪಡಲ್ಬ್ಲೂ ಬೀದಿಯಲ್ಲಿ ಶ್ರೀ ವಿದ್ಯಾ ಗಣಪತಿ ಸಂಗೀತ ಹಬ್ಬವು ೩ ಕಿಯಿಂದ ೫ ದಿನಗಳವರೆಗೆ ಸಂಸ್ಥೆಯ ಕೃಷ್ಣ ಮೂರ್ತಿಪುರದ ಶಾಲೆಯಲ್ಲಿ ಏರ್ಪಟ್ಟಿರುವ ಸಂಬಂಧವಾಗಿ ನಿತ್ಯವೂ ಸಂಜೆ ೬ ಘಂಟೆಗೆ ಭಾಷಣ ಮತ್ತು ಸಂಗೀತ ಕಾರ್ಯಕ್ರಮಗಳು ಇವೆ. ನಾಳೆ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಮಹಾರಾಜಾ ಕಾಲೇಜಿನ ಶ್ರೀ ಟಿ. ಎಸ್. ಕಾಮರಾಯರ ಭಾಷಣ ಮತ್ತು ವಿ|| ಅರ್. ವಿಶ್ವೇಶ್ವರರವರ ವೀಣಾ ವಾದನ. ಗುರುವಾರ ಪೌರಸಭಾ ಕಮಿಷನರ್ ಶ್ರೀ ಎಲ್. ಲಕ್ಷ್ಮಣರಾವರ ಅಧ್ಯಕ್ಷತೆಯಲ್ಲಿ ಉಪಾಧ್ಯಾಯರ ಕಾಲೇಜಿನ ಶ್ರೀ ಎಸ್. ಸತ್ಯಬೋಧರಾವ್ ರವರ ಭಾಷಣ ಮತ್ತು ಮೈಸೂರು ಸಹೋದರರ ಸಂಗೀತ. ಶುಕ್ರವಾರ ಪೌರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಗೌರಮ್ಮ, ಲಲಿತ ಮತ್ತು ಭಾರತಿ ಮತ್ತು ಶ್ರೀಮತಿ ಎ. ಶಾಂತಾರವರ ಸಂಗೀತಗಳು. ಶನಿವಾರ ವೃ|| ಎ. ಸಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ಪರಲ ಪ್ಪ ಸಂಗೀತ ವಿದ್ಯಾ ಮಂದಿರದ ಕಾರ್ಯದರ್ಶಿ ಶ್ರೀ ಆರ್. ಸತ್ಯನಾರಾಯಣರವರ ಭಾಷಣ ಮತ್ತು ವಿ|| ಡಾ|| ಬಿ. ಎಂ. ಬಾಮಾಚಾರ್ ಮತ್ತು ಸುಧಾ ಎಂ. ರಾವ್ ರವರ ಕೊಳಲು, ಮತ್ತು ಭಾನುವಾರ ಮಹಾರಾಣಿ ಕಾಲೇಜಿನ ಶ್ರೀ ಎಂ. ... ಅಧ್ಯಕ್ಷತೆಯಲ್ಲಿ ... ಪ್ರೊಫೆಸರ್ ಜೀ. ಸಿ. ಹನುಮಂತರಾವ್ ರವರ ... ಶ್ರೀ ... ನರಸಿಂಹಯ್ಯನವರ ... ಕಾರ್ಯಕ್ರಮದ ವ್ಯವಸ್ಥೆಯಾಗಿದೆ.

ಪಶ್ಚಿಮ ಜರ್ಮನಿ ಶಸ್ತ್ರ ಧಾರಣೆ ಬಗ್ಗೆ ೯ ರಾಷ್ಟ್ರಗಳ ಸಮ್ಮೇಳನ

ಯೂರೋಪು ಸೈನ್ಯದ ಯೋಜನೆ ಫ್ರಾನ್ಸಿನ ಬಿರುಸಿನ ವಿರೋಧದಿಂದ ಬಿದ್ದು ಹೋದ ನಂತರ ಪಶ್ಚಿಮ ಜರ್ಮನಿಯು ಪುನಃ ಶಸ್ತ್ರಧಾರಣೆ ಮಾಡಲು ಅವಕಾಶ ವಿರುವ ಹೊಸ ಯೋಜನೆಯನ್ನು ಕುರಿತು ಪರಿಶೀಲನೆ ನಡೆಸಲು ೯ ರಾಷ್ಟ್ರಗಳ ಸಮ್ಮೇಳನವನ್ನು ಈ ತಿಂಗಳ ೨೮ನೇ ತಾ|| ಲಂಡನ್ನಿನಲ್ಲಿ ಕರೆಯಲಾಗಿದೆ. ಅಮೇರಿಕ, ಕೆನಡ, ಫ್ರಾನ್ಸ್, ಪಶ್ಚಿಮ ಜರ್ಮನಿ, ಇಟಲಿ, ಬೆಲ್ಜಿಯಂ, ಹಾಲೆಂಡ್ ಮತ್ತು ಲಕ್ಸೆಂಬರ್ಗ್ ಗಳಿಗೆ ಬ್ರಿಟನ್ ಆಹ್ವಾನವಿತ್ತಿದೆ.

ಕಮ್ಯೂನಿಸ್ಟ್ ವಿದ್ಯಾರ್ಥಿಗಳು ಪರೀಕ್ಷೆಗೆ ಹೋದರು

ಬೆಂಗಳೂರಿನಲ್ಲಿ ಕಮ್ಯೂನಿಸ್ಟ್ ಪರೀಕ್ಷೆಗಳಿಗೆ ನೆನ್ನೆ ವಿದ್ಯಾರ್ಥಿಗಳು ಹೋಗಿದ್ದರು. ಈ ದಿನದ ಪರೀಕ್ಷೆಗೂ ಅವರು ಹೋಗುವರು. ಪ್ರತಿಭಟಿಸಿ ಬರೆದ ಕರಪತ್ರಗಳಿಂದ ಅವರ ... ಪರೀಕ್ಷೆಗೆ ಹೋಗಲು ... ವಿದ್ಯಾರ್ಥಿಗಳ ಬೇಡಿಕೆಗಳನ್ನು ಕುರಿತು ವಿಶ್ವವಿದ್ಯಾಲಯದ ಅಧಿಕಾರಿಗಳೊಡನೆ ಚರ್ಚೆ ನಡೆಯುವ ಸಂಭವವಿದೆಯೆಂದು ತಿಳಿದಿದೆ.

ಟೂರಿಂಗ್ ಸಿನಿಮಾಗಳಿಗೆ ನಿರ್ಬಂಧ

ಮೈಸೂರು ಸರ್ಕಾರ ಸಿನಿಮಾ ಟೂರಿಂಗ್ ಸಿನಿಮಾಗಳಿಗೆ ... ಕೊಡಲು ನಿಷೇಧಿಸಬೇಕೆಂದು ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಸರಸ್ವತಿ ಪೂಜೆ

ರಾಜಧಾನಿಯ ... ಸಂಸ್ಕೃತ ... ಗಣೇಶೋತ್ಸವ ನಡೆಯಿತು. ಸಂಸ್ಕೃತ ... ವಿದ್ಯಾರ್ಥಿಗಳು ... ಪೂಜೆಯನ್ನು ... ಶ್ರೀ ... ನಂಜಯ್ಯನವರ ಅಧ್ಯಕ್ಷತೆಯಲ್ಲಿ ... ಶ್ರೀ ... ಪ್ರಾರ್ಥನೆ, ... ಸಂಸ್ಕೃತ ... ಶ್ರೀ ... ರಾಘವೇಂದ್ರರಾಯರ ... ಆಶೀರ್ವಾದ ... ಸಂಗೀತ ... ಶ್ರೀನಿವಾಸ ... ಪದ್ಯಗಳನ್ನು ... ಜಿ. ಕೆ. ... ವಿದ್ಯಾರ್ಥಿಗಳೆಲ್ಲರೂ ಕೆಲವು ಪದ್ಯಗಳನ್ನು ಹಾಡಿದರು. ನಿವೃತ್ತ ಪೋಲಿಸ್ ಸೂಪರಿಂಟೆಂಡೆಂಟರಾದ ಶ್ರೀ ಚಂದ್ರಶೇಖರಯ್ಯನವರು ದಿವಂಗತ ಶ್ರೀ ವರದಾಚಾರ್ಯರ ನಾಟಕದ ಕೆಲವು ಪದ್ಯಗಳನ್ನು ಅದ್ಭುತವಾಗಿ ಹಾಡಿದರು. ಅಧ್ಯಕ್ಷರು ನಾಟಕಗಳ, ಕಲೆಗಳ ಬಗ್ಗೆ ಮೆಚ್ಚುಗೆಯ ನ್ನು ವ್ಯಕ್ತಪಡಿಸಿ, ಗಮಕ ಕಲೆಯ ಪ್ರಾಚೀನತೆ, ಅದರ ವೈಶಿಷ್ಟ್ಯ ಮತ್ತು ಹಿರಿಮೆಗಳನ್ನು ವಿವರಿಸಿ, ಈ ಲಲಿತ ಕಲೆಯನ್ನು ಅಭ್ಯಸಿಸುವ ವಿದ್ಯಾರ್ಥಿಗಳಲ್ಲಿ ಹಿರಿಯ ಶಿಕ್ಷಕ ವಾರ್ಗದ ನ ಮನೋದಾರ್ಢ್ಯ ವಿರಬೇಕೆಂದು ಸೂಚಿಸಿದರು. ಶ್ರೀ ನರಹರಿಶಾಸ್ತ್ರಿಗಳಿಂದ ವಂದನಾರ್ಪಣೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗವಾದನಂತರ ಸಮಾರಂಭವು ಮುಕ್ತಾಯವಾಯಿತು.

ಮೈಸೂರು ಪೇಟೆ ಧಾರಣೆ

ಪದಾರ್ಥ	ರೂ ಆಣೆ	ರೂ ಆ
ಕಡಲೆ ಯು	[illegible]	[illegible]
ರಾಗಿ	[illegible]	[illegible]
ಹುರುಳಿಕಾಳು	[illegible]	
ತೊಗರಿ	[illegible]	[illegible]
ಜೋಳ	[illegible]	[illegible]
ಅವರೆ	[illegible]	
ಹೆಸರುಬೇಳೆ	[illegible]	[illegible]
ಹುಣಸೆ	[illegible]	
ಕಡಲೆಕಾಯಿ	[illegible]	[illegible]
ಮೆಣಸಿನಕಾಯಿ	[illegible]	
ಬೆಲ್ಲ	[illegible]	
ತೆಂಗಿನಕಾಯಿ	[illegible]	[illegible]

ಪರಾರಿಯಾದವನ ಬದಲು ಬೇರೊಬ್ಬನು ಜೈಲಿಗೆ

ಕಲ್ಕತ್ತೆಯಲ್ಲಿ ೩ ತಿಂಗಳ ಸಜಾ ವಿಧಿಸಲ್ಪಟ್ಟ ಸಫಿ ಎಂಬುವನು ಪರಾರಿಯಾದ ಸಂಬಂಧದಲ್ಲಿ ಆತ ಮರ್ಷದ ಖಲಿಲ್ ಎಂಬ ತನ್ನ ತಾನೇ ಸಫಿ ಎಂದು ಹೇಳಿ ಜೈಲಿಗೆ ಹೋಗಲು ಒಪ್ಪಿದ. ಆದರೆ ತಡವಾಗಿ ಈ ವಿಷಯವನ್ನು ಅಧಿಕಾರಿಗಳು ಪತ್ತೆ ಹಚ್ಚಿ ಅವನನ್ನು ಜೈಲಿಗೆ ಕಳುಹಲು ಒಪ್ಪದೆ ಮತ್ತೊಬ್ಬನ ಹೆಸರಿನ ದುರುಪಯೋಗವಾಗಿ ಅವನ ಮೇಲೆ ಮೊಕದ್ದಮೆ ಹೂಡಿರುತ್ತಾರೆ.

ಬೊಂಬಿನಿಂದ ಕೃತಕ ರೇಷ್ಮೆ

ಭಾರತದಲ್ಲಿ ಸಿಕ್ಕುವ ಬೊಂಬಿನಿಂದ ಕೃತಕ ರೇಷ್ಮೆಯನ್ನು ತಯಾರಿಸುವ ವಿಧಾನವನ್ನು ಪಿ. ಎ. ಗೋಖಲೆ ಎಂಬ ಭಾರತೀಯ ಸಂಶೋಧನ ವಿದ್ಯಾರ್ಥಿ ಅಮೇರಿಕೆಯೊಂದರಲ್ಲಿ ಕಂಡುಹಿಡಿದಿದ್ದಾರೆ. ಸ್ಥಳೀಯ ಬೊಂಬಿನಿಂದ ಕೃತಕ ರೇಷ್ಮೆಗೆ ಬೇಕಾದ ಕಚ್ಚಾ ಸಾಧನಗಳನ್ನು ... ಉಪಯೋಗಿಸಿಕೊಂಡರೆ ಹೆಚ್ಚು ಡಾಲರ್ ಹಣವನ್ನು ಉಳಿಸಬಹುದು ... ಈ ಕಾರ್ಯಸಾಧನೆ ತಪ್ಪುವುದೆಂದು ... ತಿಳಿಸಿರುತ್ತಾರೆ.

ಗಣಪತಿ ಮಂಗಳಾರತಿ

ರಾಜಧಾನಿಯ ... ಬೀದಿಯಲ್ಲಿ ವಿಜಯ ಸ್ಪೋರ್ಟ್ಸ್ ಕ್ಲಬ್ಬಿನ ... ನಡೆದ ತಂಡದ ಕಛೇರಿಯಲ್ಲಿ ೨೨ನೇ ತಾ|| ಗಂಟೆ ೭ಕ್ಕೆ ಗಣಪತಿ ಮಂಗಳಾರತಿಯನ್ನು ವಿಜೃಂಭಣೆಯಿಂದ ನಡೆಸಲಾಯಿತು. ಶ್ರೀ ... ಸುಬ್ಬರಾಯರು ಅಧ್ಯಕ್ಷತೆ ವಹಿಸಿದ್ದರು. ... ಕುಮಾರ ... ಜಾತಕ ... ಮತ್ತು ... ರವರ ... ವಿವರ ಗಾಯನ ...

ಸೀತಾರಾಮ ... ಬಡಾವಣೆಯಲ್ಲಿರುವ ಸೀತಾ ಸದನದಲ್ಲಿ ... ಕಳೆದ ಭಾನುವಾರ ಶ್ರೀ ಗಣಪತಿ ಮಂಗಳಾರತಿಯನ್ನು ವೈಭವದಿಂದ ಆಚರಿಸಲಾಯಿತು. ... ಅವರಿಂದ ಹರಿಕಥೆ ... ನಡೆದು ... ಸಮಾರಂಭವು ಮುಕ್ತಾಯವಾಯಿತು.

ನಾಮದೇವರ ಜಾತ್ರೆಗೆ ಹೋಗುವವರಿಗೆ ಇನಾಕ್ಯುಲೇಷನ್ ಅವಶ್ಯಕ

